ಹಿತ್ತಲಗಿಡ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು
ಸಂಸ್ಥೆಗಳು, ರೈತಮೂಲದ ಅನುಶೋಧನೆಗಳು,
ಸ್ಥಳೀಯ ಸಂಪನ್ಮೂಲಗಳು ಮತ್ತು ಜೀವ
ವೈವಿಧ್ಯತೆ ಇವುಗಳ ಮೂಲಕ "ಸುಸ್ಥಿರ ಕೃಷಿ"
ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಸಂಪುಟ ೧ ಸಂಚಿಕೆ ೧ ೧೯೯೫ ಖಾಸಗಿ ಪ್ರಸಾರಕ್ಕಾಗಿ



ಹಿತ್ತಲಗಿಡ

ಸಂಚಿಕೆ ೧,   ಸಂಪುಟ ೧,   ೧೯೯೫

(ಖಾಸಗಿ ವಿತರಣೆಗೆ ಮಾತ್ರ - ಚಾತುರ್ಮಾಸಿಕ)

ಹಿತ್ತಲಗಿಡ ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ಈ ಸಂಚಿಕೆಯಲ್ಲಿ

ಕಲೆ/ವಿನ್ಯಾಸ : ಸಹದೇವನ್, ಬಚ್ಚಿ

ಹಿತ್ತಲಗಿಡದ ಹಿತೈಷಿಗಳು

೧. ಅಡಿಕೆ ಪತ್ರಿಕೆ ಪುತ್ತೂರು, ದ.ಕ

೨. ಇಕ್ರಾ, ಇಂದಿರಾನಗರ, ಬೆಂಗಳೂರು

೩. ಪ್ರಾರಂಭ, ಬೆಂಗಳೂರು

೪. 'ಕೃಷ್ಣಾ ಕೃಷಿ', ಹುಲಕೋಟಿ

೫. 'ಕೃಷಿ ನಿವಾಸ', ತೀರ್ಥಹಳ್ಳಿ

ವಿಳಾಸ

ಟಿ.ಎನ್. ಪ್ರಕಾಶ್ ಕಮ್ಮರಡಿ

ಸಂಪಾದಕರು, 'ಹಿತ್ತಲಗಿಡ'

ಕೃಷಿ ಅರ್ಥಶಾಸ್ತ್ರ ವಿಭಾಗ,

ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ,

ಬೆಂಗಳೂರು - 560024

ದೂರವಾಣಿ: 3331483, Extn:8, (R) 8460459

ಸಂಪಾದಕೀಯ

'ಹಿತ್ತಲ ಗಿಡ ಮದ್ದಲ್ಲ' ಎಲ್ಲರೂ ಬಲ್ಲ ಕನ್ನಡದ ಒಂದು ಗಾದೆ. ತನ್ನ ಕಾಲ ಬಳಿಯೇ ಇರುವ ಸಿರಿವಂತಿಕೆ, ಜ್ಞಾನವನ್ನು ಕಣ್ಣೆತ್ತಿ ನೋಡದೆ ಸ್ಥಳೀಯ ಸಾಧ್ಯತೆಗಳನ್ನು ನಿರಾಕರಿಸಿ ದೂರದ ಬೆಟ್ಟ ನೋಡುತ್ತಾ, ಕನಸುತ್ತಾ ನಿಲ್ಲುವ ಜನಸಾಮಾನ್ಯನ ತಲೆಗೆ ಮೊಟಕುವ ಕಟು ಗಾದೆ ಮಾತು. ಮನುಷ್ಯ ತನ್ನ ಕಾಲ ಬಳಿಯಿಂದ, ಕಣ್ಣು ಆವರಿಸುವ ಕ್ಷಿತಿಜದ ತನಕ ಬದುಕಿರುವ ಎಲ್ಲ ಜೀವಜಲ ಸಂಪನ್ಮೂಲಗಳನ್ನು ಕಾಪಾಡಿಕೊಂಡು, ತನ್ನ ಮುಂದಿನ ತಲೆಮಾರುಗಳ ಕನಸನ್ನೂ ಅರಿಯಬೇಕಾದ ಅನಿವಾರ್ಯ ಸ್ಥಿತಿಯಲ್ಲಿದ್ದಾನೆ. ಇಂತಹ ಸಂದರ್ಭದಲ್ಲಿ ನಮ್ಮ ಪೂರ್ವಿಕರ ಶತಮಾನಗಳ ಜೀವನಾನುಭವದ ಗಾದೆ ಮಾತುಗಳು ನಮ್ಮನ್ನು ಭ್ರಮೆಯಿಂದ ಹೊರತರಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇವೆ. ಈ ಹಿನ್ನೆಲೆಯಲ್ಲಿಯೇ ಪತ್ರಿಕೆಗೂ 'ಹಿತ್ತಲ ಗಿಡ' ಎಂದೇ ಹೆಸರಿಟ್ಟಿದ್ದೇವೆ.

ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕವೇ ಮನುಷ್ಯಕುಲ ತನ್ನನ್ನು ರಕ್ಷಣೆ ಮಾಡಿಕೊಳ್ಳಬಲ್ಲದು ಎಂಬ ಭ್ರಮೆ ಕರಗುತ್ತಿದೆ. ಸುಸ್ಥಿರ ಕೃಷಿ ಅಭಿವೃದ್ಧಿಯ ಸಾಧನೆಯ ಸಾಧ್ಯತೆಗಳನ್ನು ಚಿಂತಿಸಿದಾಗ ನಮ್ಮ ಆಲೋಚನಾ ಕ್ರಮ ಮತ್ತು ಜೀವನ ಶೈಲಿಯನ್ನೇ ಮೂಲಭೂತವಾಗಿ ಬದಲಾಯಿಸಿಕೊಳ್ಳಬೇಕಾಗಿರುವ ಅಗತ್ಯ ಎದ್ದು ಕಾಣುತ್ತಿದೆ. ಸುಸ್ಥಿರ ಕೃಷಿ ಅಭಿವೃದ್ಧಿಯ ಸಾಧನೆಗೆ ನಮ್ಮ ವಿಜ್ಞಾನಿಗಳು ಸ್ಥಳೀಯ ಸಂಪನ್ಮೂಲಗಳು, ದೇಶೀಯ ಜ್ಞಾನ ಮತ್ತು ತಂತ್ರಜ್ಞಾನಗಳು, ಜೀವ ವೈವಿಧ್ಯತೆ, ದೇಶೀಯ ಸಂಸ್ಥೆಗಳು ಮತ್ತು ರೈತ ಮೂಲದ ಅನುಶೋಧನೆಯತ್ತ ನೋಡಬೇಕಾಗಿದೆ.

ಗ್ಯಾಟ್ ಒಪ್ಪಂದ ಹುಟ್ಟುಹಾಕಿದ ಉದಾರೀಕರಣ ಖಾಸಗೀಕರಣ, ಬಹುರಾಷ್ಟ್ರೀಕರಣ ಮತ್ತು ಮುಕ್ತ ವ್ಯಾಪಾರಗಳ ಹೆಸರಿನಲ್ಲಿ, ಬೌದ್ಧಿಕ ಸನ್ನದಿನ ಹಕ್ಕಿನಡಿಯಲ್ಲಿ, ನಮ್ಮ ಸ್ಥಳೀಯ ಜೀವ ವೈವಿಧ್ಯತೆಗಳೂ ಸಂಪನ್ಮೂಲಗಳು ವಿದೇಶೀ ಕಂಪನಿಗಳ ಪಾಲಾಗಬಹುದು. ನಮ್ಮ ಬೇವಿನಮರ, ಮದರಂಗಿಗಿಡ, ಅಳಲೆಕಾಯಿ ದಾಸವಾಳಗಳು ಸ್ಥಳೀಯ ಜನರಿಗೇ ದೊರಕದಂತಾಗಬಹುದು. ಗ್ಯಾಟ್‌ನಂತಹ ವ್ಯವಸ್ಥೆಯ ಅಡಿಯಲ್ಲಿ ಕೆಲಸ ಮಾಡುತ್ತಿರುವ ಬಂಡವಾಳವಾದ ಮನುಷ್ಯ 'ಸ್ವಾರ್ಥ ಪರ ಹಾಗೂ ಅನುಭೋಗ ಪ್ರಿಯ' ಎಂಬ ಸರಳ ತತ್ವದ ಮೇಲೆ ಅವಲಂಬಿತವಾಗಿದೆ. ಹಾಗಾಗಿ ವ್ಯಾಪಾರ, ಲಾಭಗಳು ಇಂದು ನಮ್ಮನ್ನು ಆಳುತ್ತಿರುವ ಮೌಲ್ಯಗಳಾಗಿವೆ. ತಂತ್ರಜ್ಞಾನವೇ ವ್ಯವಸ್ಥೆಯ ಕೇಂದ್ರ ಅಂಗವಾಗಿದೆ. ಖಾಸಗೀ ಒಡೆತನದಂತಹ ಸಂಕುಚಿತ ದಾರಿಗಳಿಂದಲೇ ಮನುಷ್ಯನ ನಿರಂತರ ಅನುಭೋಗಪ್ರಿಯತೆಯನ್ನು ಸಾಕಬಹುದು ಎಂಬ ಭ್ರಮೆ ರಾಷ್ಟ್ರ, ಸರ್ಕಾರ, ಮಾರುಕಟ್ಟೆಗಳಿಗಿದೆ.

ಮನುಷ್ಯನನ್ನು ಈ 'ಅನುಭೋಗ ಪ್ರಿಯ'ಎನ್ನುವ ತಪ್ಪು ಕಲ್ಪನೆಯಿಂದ ಹೊರಗೆಳೆದು ಅವನನ್ನು ಜೀವಸಂಕುಲಗಳ ಸಹ ಜೀವಿಯನ್ನಾಗಿ ಮಾಡಬೇಕಾದ ಸಾಧ್ಯತೆಯು ಸುಸ್ಥಿರ ಅಭಿವೃದ್ಧಿಯ ಸತ್ವ ಪರೀಕ್ಷೆ ಕೂಡಾ. ಇದಕ್ಕೆ ಉತ್ತರ ಕೂಡಾ ದೇಶೀಯ ತಂತ್ರಜ್ಞಾನ, ಅನುಶೋದನೆಗಳ ಹಾದಿಯಲ್ಲಿಯೇ ಇದೆ. ಈ ನಾಟಿ ಪದ್ಧತಿ, ಆಚಾರ, ನಂಬಿಕೆ ಜ್ಞಾನವೆಲ್ಲವೂ ಸಹಸ್ರಾರು ವರ್ಷಗಳ ನಿರಂತರ ಪರಿಶ್ರಮ ಹಾಗೂ ಅನುಭವದಿಂದ ಬಂದಿವೆ. ಅವುಗಳ ಲಾಭ ವ್ಯಕ್ತಿ ಕೇಂದ್ರಿತ ಅಲ್ಲ. ಸಮಾಜ ಕೇಂದ್ರಿತವಾದದ್ದು. ಅವು ನಿಸ್ವಾರ್ಥದ ಸೆಲೆಯಿಂದ ಹುಟ್ಟಿರುವಂತಹವು. ಅಂದಮೇಲೆ ಹಿತ್ತಲಗಿಡ ಇಲ್ಲಿ ಎತ್ತಿ ತೋರಿಸಬೇಕಾಗಿರುವುದು ಸುಸ್ಥಿರ ಅಭಿವೃದ್ಧಿಗೆ, ಸುಸ್ಥಿರಕೃಷಿಗೆ ಅಗತ್ಯವಾಗಿರುವ ಈ ಬದುಕಿನ ರೀತಿಯನ್ನೂ ಕೂಡ.

ಸುಸ್ಥಿರ ಕೃಷಿಗೆ ಅಗತ್ಯವಾದ ಇವುಗಳೆಲ್ಲವುಗಳ ಜೊತೆಗೆ ದಟ್ಟದಾರಿದ್ರ್ಯವೂ ಕೂಡಾ ನಮ್ಮ ಜನರ ಬಳಿಯೇ ಇದೆ. ವೈವಿಧ್ಯತೆ ಇರುವ ತೃತೀಯ ಜಗತ್ತಿನಲ್ಲಿ, ಮಳೆ ಆಶ್ರಯದ ರೈತರ ಬಳಿ, ಗಿಡಮೂಲಿಕೆ, ನಾಟಿ ವೈದ್ಯಕೀಯ ಪದ್ಧತಿಯ ಜ್ಞಾನದ ಆಗರಗಳಾದ ಗಿರಿಜನ, ಆದಿವಾಸಿಗಳ ಬಳಿಯೇ ಬಡತನವೂ ಇರುವುದು ವಾಸ್ತವ ಮತ್ತು ದುರಂತವೂ ಕೂಡ.

ಹಿತ್ತಲ ಗಿಡ ಹುಡುಕ ಹೊರಟಿರುವುದು ಕೇವಲ ನಾಟೀ ಮೂಲದ ಜ್ಞಾನ, ತಂತ್ರಜ್ಞಾನ, ರೈತರ ಅನುಶೋಧನೆ ಮಾತ್ರವಲ್ಲ. ಸುಸ್ಥಿರ ಕೃಷಿ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಸಂರಕ್ಷಿಸಿಕೊಂಡು ಬಂದಿರುವ ಈ ಜನಗಳ ಅಪಾರ ಸೇವೆಯ ಋಣವನ್ನು ಹಿಂತಿರುಗಿಸುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರವನ್ನು ಕೂಡಾ.

ಭಾಗ ೨

ಹಿತ್ತಲಗಿಡದ ಪ್ರಕಟಣೆಯ ಹಿಂದಿನ ಪ್ರೇರಕ ಶಕ್ತಿ ಎಂದರೆ ಭಾರತೀಯ ನಿರ್ವಹಣ ಸಂಸ್ಥೆ, ಅಹಮದಾಬಾದ್‌ನ ಪ್ರೊ. ಅನಿಲ್ ಗುಪ್ತ. ಇವರ 'ಹನೀ ಬೀ' ಪತ್ರಿಕೆ ನಮ್ಮ ಹಿತ್ತಲಗಿಡಕ್ಕೆ ವೈಚಾರಿಕ ಹಿನ್ನೆಲೆ ಒದಗಿಸಿರುತ್ತದೆ ಎನ್ನಬಹುದು. ಇಂದು ಭಾರತದಾದ್ಯಂತ, ಅಷ್ಟೇಕೆ, ಪರದೇಶಗಳಲ್ಲೂ ಕೂಡ, ಈ ದೇಶೀಯ ಜ್ಞಾನ, ತಂತ್ರಜ್ಞಾನ, ರೈತಮೂಲದ ಅನ್ವೇಷಣೆ ಇತ್ಯಾದಿಗಳಿಗೆ ಒಂದು ವ್ಯವಸ್ಥಿತ ನೆಲೆ ಒದಗಿಸಲು ಅವಿರತ ಪ್ರಯತ್ನ ನಡೆಸುತ್ತಿರುವ ವ್ಯಕ್ತಿ ಎಂದರೆ ಪ್ರೊ. ಗುಪ್ತ ಎನ್ನಬಹುದು. ಈ ನಿಟ್ಟಿನಲ್ಲಿ ಸ್ಥಳೀಯ ಭಾಷೆಯ ಮಹತ್ವ ಅರಿತ ಪ್ರೊ. ಗುಪ್ತ , ದೇಶದ ಇತರ ಭಾಷೆಗಳಲ್ಲೂ ಹನೀ ಬೀ ತರಹದ ಪ್ರಯತ್ನಕ್ಕೆ ಪ್ರೋತ್ಸಾಹ ನೀಡುತ್ತಿದ್ದು, ನಮ್ಮ ಹಿತ್ತಲಗಿಡದ ಆರಂಭಕ್ಕೆ ಶಂಕುಸ್ಥಾಪನೆ ಮಾಡಿ ಸಕಲ ಸಹಾಯವನ್ನೂ ನೀಡಿರುತ್ತಾರೆ. ಹಾಗಾಗಿ ಪ್ರೊ. ಗುಪ್ತರವರು ಹಿತ್ತಲಗಿಡದ ಸ್ನೇಹಿತ, ಮಾರ್ಗದರ್ಶಿ ಮತ್ತು ತತ್ತ್ವಜ್ಞಾನಿ ಎನ್ನಬಹುದು.

'ಹಿತ್ತಲಗಿಡ'ದಂತಹ ಪ್ರಯತ್ನ ನಿರಂತರವಾಗಿ ಮುಂದುವರೆಯಲು, ಸತತವಾಗಿ ಮಾಹಿತಿ ಸಂಗ್ರಹಿಸಲು ನಿಷ್ಠಾವಂತ, ಉತ್ಸಾಹಿ ತರುಣರ ಅಗತ್ಯವಿದ್ದು, ನಮ್ಮ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯದಂತಹ ಸಂಸ್ಥೆಗಳಲ್ಲಿ, ಗ್ರಾಮಾಂತರ ಪ್ರದೇಶಗಳಿಂದ ಬಂದಂತಹ ವಿದ್ಯಾರ್ಥಿಗಳು ಈ ಕೊರತೆ ತುಂಬಬಲ್ಲರು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 'ಚಿಂತನ ಬಳಗ' ಎಂಬ ಇಂತಹ ಉತ್ಸಾಹಿ ವಿದ್ಯಾರ್ಥಿಗಳ ಗುಂಪೊಂದಿದ್ದು, ಈಗಾಗಲೇ, ವಿಶ್ವವಿದ್ಯಾನಿಲಯದ ಅರಿವಿಗೂ ಬಾರದಂತೆ, ಈ ಗುಂಪು ನಾಡಿನ ಮೂಲೆ ಮೂಲೆಯಲ್ಲಿನ ಪರ್ಯಾಯ ಕೃಷಿಯ ಬಗ್ಗೆ, ಸಾವಯವ, ಸಹಜ, ಪ್ರಾಕೃತಿಕ ಕೃಷಿಯ ಬಗ್ಗೆ ಪ್ರಯತ್ನ ನಡೆಸುತ್ತಿರುವ ರೈತರೊಡನೆ ಸಂಪರ್ಕ ಏರ್ಪಡಿಸಿಕೊಂಡು, ಅವರ ಆ ಪ್ರಯೋಗಗಳನ್ನು ಗಂಭೀರವಾಗಿ ಅಭ್ಯಾಸಮಾಡುತ್ತಿರುವವರು. ಇಂತಹ ತರುಣರೇ ನಮ್ಮ ಹಿತ್ತಲಗಿಡದ ಜೀವಾಳವಾಗಿರುತ್ತಾರೆ.

ಇನ್ನು 'ಹಿತ್ತಲಗಿಡ'ವನ್ನು ಅರಿತು, ಅರೆದು ಔಷಧಿ ಮಾಡಿಕುಡಿಸುವ ವೈದ್ಯರು ಬೇಕಾಗಿದೆ. ಇದೂ ಒಂದು ಔಷಧಿ ಎಂದು ಓರ್ವ ವೈದ್ಯ ಹೇಳಿದರೆ ಮಾತ್ರ ಅದು ರೋಗಿಯ ಮನ ಹೊಕ್ಕು ಪರಿಣಾಮ ಬೀರುವುದು ತಾನೆ. ನಮ್ಮ ವಿಜ್ಞಾನಿ ಸಮುದಾಯ ಮುಂದೆ ಬಂದರೆ ಮಾತ್ರ ಹಿತ್ತಲಗಿಡ ಈ ಸುಸ್ಥಿರ ಕೃಷಿಯ ಒಂದು ಸಾಧ್ಯತೆಯಾಗಬಹುದು. ಈ ನಿಟ್ಟಿನಲ್ಲಿ ನಮ್ಮ ಸಂಶೋಧನಾ ಕೇಂದ್ರಗಳ, ವಿಶ್ವವಿದ್ಯಾನಿಲಯಗಳ ಹಲವು ವಿಜ್ಞಾನಿಗಳು ಈಗಾಗಲೇ ಮುಂದೆಬಂದಿರುವುದು ಶುಭಸೂಚಕ. ಹಾಗೇ ಭಾರತೀಯ ವಿಜ್ಞಾನ ಕೇಂದ್ರ, ಭಾರತೀಯ ತೋಟಗಾರಿಕೆ ಸಂಸ್ಥೆ, ಕೃಷಿ ವಿಶ್ವವಿದ್ಯಾನಿಲಯಗಳಿಂದ ಹಲವು ಉತ್ಸಾಹಿ ತರುಣ ವಿಜ್ಞಾನಿಗಳು ಈಗಾಗಲೇ ಹಿತ್ತಲಗಿಡದೊಡನೆ ಕೈಜೋಡಿಸಿರುವುದು ಸ್ವಾಗತಾರ್ಹ.

ಹಿತ್ತಲಗಿಡವನ್ನು ಮತ್ತಷ್ಟು ವ್ಯವಸ್ಥಿತಗೊಳಿಸಲು, ಆಸಕ್ತ ಇತರರನ್ನೂ ನಮ್ಮೊಡನೆ ಸೇರಿಸಿಕೊಳ್ಳಲು, ರೈತರೊಡನೆ ಮತ್ತಷ್ಟು ಸಂಪರ್ಕ ಏರ್ಪಡಿಸಲು, ಈಗಾಗಲೇ ಹಲವು ಪ್ರಾಮಾಣಿಕ ಸರ್ಕಾರೇತರ ಸಂಘ ಸಂಸ್ಥೆಗಳು, ರೈತ ಸಂಘಟನೆಗಳೂ ತಮ್ಮ ನೆರವು, ಸಹಕಾರವನ್ನು ನೀಡಿರುವುದು ನಮಗೆ ಮತ್ತಷ್ಟು ಬಲ ತಂದಿದೆ. ಅವುಗಳೆಂದರೆ ಇಕ್ರಾ, (ICRA), ಸರ್‍ರಾ (SARRA) ಪ್ರಾರಂಭ, (ಬೆಂಗಳೂರಿನಲ್ಲಿರುವವು), ಕೃಷ್ಣಾ ಕೃಷಿ (ಹುಲಕೊಟಿ), ಕೃಷಿನಿವಾಸ (ತೀರ್ಥಹಳ್ಳಿ) ಕಾರ್ಟ್ (CART) (ಮೈಸೂರು), ಬಾಲಕಾರ್ಮಿಕರ ಕಾಳಜಿ ಸಂಸ್ಥೆ (ಬೆಂಗಳೂರು).

ಹಿತ್ತಲಗಿಡ,ರೈತರ ಮಧ್ಯದಲ್ಲಿ ಈಗಾಗಲೇ ಬೇರು ಬಿಟ್ಟಿರುವ ಅಡಿಕೆ ಪತ್ರಿಕೆಯಂತಹ ಗ್ರಾಮೀಣ ಪತ್ರಿಕೆಗಳೊಡನೆ ಪರಸ್ಪರ ಪೂರಕವಾದ ಸಹೋದರ ಸಂಬಂಧ ಕಲ್ಪಿಸಿಕೊಳ್ಳಬಯಸುತ್ತದೆ. ಈ ನಿಟ್ಟಿನಲ್ಲಿ ಅಡಿಕೆ ಪತ್ರಿಕೆಯ ಸಂಪಾದಕ ಶ್ರೀ 'ಶ್ರೀ' ಪಡ್ರೆ ಸಹಕಾರ ಹಸ್ತ ನೀಡಿರುವುದು ಹೆಮ್ಮೆಯ ವಿಚಾರ.

ಅಂತಿಮವಾಗಿ ಹೇಳಬೇಕೆಂದರೆ ಹಿತ್ತಲಗಿಡದ ಇತಿಮಿತಿಗಳ ಅರಿವು ನಮಗೆ ಚೆನ್ನಾಗಿ ಇದೆ. ಇದು ಸದ್ಯಕ್ಕೆ ಸುಸ್ಥಿರ ಕೃಷಿ ಅಭಿವೃದ್ಧಿಯ ಬಗ್ಗೆ ಚಿಂತನೆ, ಚರ್ಚೆಗೆ ಒಂದು ವೇದಿಕೆಯಾಗಬಯಸುತ್ತದೆಯೇ ಹೊರತು ಒಂದು ಪರಿಹಾರವಾಗುತ್ತದೆ ಎಂದು ಹೇಳುವ ಶಕ್ತಿ ನಮಗಿನ್ನೂ ಬರಬೇಕಾಗಿದೆ. ನಾವೀಗ, ದೇಶೀಯ ಜ್ಞಾನ, ತಂತ್ರಜ್ಞಾನ, ಅನುಶೋಧನೆ, ಸಂಸ್ಥೆಗಳನ್ನು ದಾಖಲಿಸುವ ಮೂಲಕ ಅದಕ್ಕೆ ಒಂದು ವ್ಯವಸ್ಥಿತ ರೂಪ ಕೊಡಲು ಮೊದಲ ಹೆಜ್ಜೆ ಇಡುತ್ತಿರುವೆವು. ಈ ಮೂಲಕ ಹಿತ್ತಲಗಿಡವನ್ನು ವಿಜ್ಞಾನಿಗಳತ್ತ ಕೊಂಡೊಯ್ದು, ಅದನ್ನು ಪ್ರಯೋಗಾಲಯ, ಸಂಶೋಧನಾಲಯಗಳನ್ನು ಹೊಕ್ಕಿಸುವಂತೆ ಮಾಡುವುದು ನಮ್ಮ ಮೊದಲ ಗುರಿಯಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ, ಧ್ಯಾನಗಳ ಬೀಜ ಮೊಳಕೆಯ ಮೂಲಕ ಹಸುಗಳಲ್ಲಿನ ಗರ್ಭಧಾರಣೆಯನ್ನು ನಿರ್ಧರಿಸುವ ಡಾ. ವೀಣಾ ಮತ್ತು ಡಾ. ನರೇಂದ್ರನಾಥ್‌ರ ಪ್ರಯೋಗ ನಮ್ಮ ಮುಂದೆ ಅಪಾರ ಸಾಧ್ಯತೆಗಳನ್ನು ಇಡುವಂತಾಗಿದೆ.

ಮಿಗಿಲಾಗಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಈ ದೇಶೀಯ ಜ್ಞಾನ, ತಂತ್ರಜ್ಞಾನ, ಅನುಶೋಧನೆಗಳು ಮತ್ತು ಸಂಸ್ಥೆಗಳ ಬಗ್ಗೆ ಏಳುತ್ತಿರುವ ಆಸಕ್ತಿ ನಮಗಿಂದು ಅರಿವಾಗುತ್ತಿದೆ. ಅದೂ, ವಿಶ್ವವಿಂದು ಪ್ರಾಚೀನ ಪರಂಪರೆ ಹೊಂದಿರುವ ಭಾರತದಂತಹ ರಾಷ್ಟ್ರವನ್ನು ಈ ಬಗ್ಗೆ ಈಗ ಹೆಚ್ಚು ಹೆಚ್ಚು ನೋಡುವಂತಾಗಿದೆ. ವಿಶ್ವಮಟ್ಟದಲ್ಲಿ ಈ ಬಗ್ಗೆ ಪ್ರಾಮಾಣಿಕ ಕಾಳಜಿ ಹೊಂದಿರುವ ಹಲವು ಸಂಸ್ಥೆಗಳು ನಮ್ಮ ಹನೀಬೀ, ಹಿತ್ತಲಗಿಡದಂತಹ ಪತ್ರಿಕೆಗಳೊಡನೆ ಸಹಕರಿಸಲು, ಮುಂದೆ ಬರುವುದು ಸಹಜ. ಈ ನಿಟ್ಟಿನಲ್ಲಿ ನೆದರ್‌ಲ್ಯಾಂಡಿನ "ದೇಶೀಯ ಜ್ಞಾನ ಮತ್ತು ಅಭಿವೃದ್ಧಿ ಮಾನೀಟರ್" [Indigeneous Knowledge and Development Monitor] ನಮಗೆ ಪತ್ರ ವ್ಯವಹಾರ ಮಾಡಿ, ನಮ್ಮಿಂದ ಮಾಹಿತಿ, ಸಹಕಾರ ಕೋರಿರುತ್ತಾರೆ.

ಸುಸ್ಥಿರ ಕೃಷಿ –ಒಂದು ದೃಷ್ಟಿಕೋನ

ಪ್ರಕಾಶ್ ಕಮ್ಮರಡಿ

ಸುಸ್ಥಿರ ಕೃಷಿ [SUSTAINABLE AGRICULTURE] ಇಂದು ವಿಜ್ಞಾನಿಗಳಿಗೆ, ಆಯೋಜಕರಿಗೆ, ರಾಜಕಾರಣಿಗಳಿಗೆ ಹೀಗೆ ಎಲ್ಲರಿಗೆ ಅತ್ಯಂತ ಪ್ರಿಯವಾದ ಶಬ್ದವಾಗಿದೆ. ಈ ಶಬ್ದದ ಉಗಮ, ಇಂದು ಜಗತ್ತಿನ ಬೃಹತ್ ಸಂಸ್ಥೆಗಳಾದ ವಿಶ್ವಸಂಸ್ಥೆಯಿಂದ ಹಿಡಿದು ವಿಶ್ವಬ್ಯಾಂಕ್‌ಗಳವರೆಗೆ ಎಲ್ಲಾ ಜಪಿಸುತ್ತಿರುವ, ಹೊಸತೊಂದು ಅಭಿವೃದ್ಧಿ ರೀತಿ "ಸುಸ್ಥಿರ ಅಭಿವೃದ್ಧಿ" [SUSTAINABLE DEVELOPMENT] ಈ ಕಲ್ಪನೆಯ ಹಿನ್ನೆಲೆಯಲ್ಲೇ ಅಡಗಿರುತ್ತದೆ. ಜಾಗತಿಕ ಮಟ್ಟದಲ್ಲಿ ಈ ಬಗ್ಗೆ ಇಷ್ಟೊಂದು ಕಾಳಜಿ ಉಂಟಾಗಿರಲು ಮುಖ್ಯ ಕಾರಣಗಳೇನೆಂಬುದನ್ನು ನಾವು ಮೊದಲು ಅರ್ಥಮಾಡಿಕೊಳ್ಳ ಬೇಕಾಗಿದೆ.



ಇಂದು ಪಶ್ಚಿಮದ ಸಿರಿವಂತ ಜಗತ್ತು ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಅನಾಹುತಗಳಿಗೆಲ್ಲಾ ಎಚ್ಚೆತ್ತುಕೊಂಡಿವೆ. ಆದರೆ ಅವಕ್ಕೆ ಪರಿಹಾರ ಕಾಣದೆ ತತ್ತರಿಸುವಂತಾಗಿವೆ. ವಿಜ್ಞಾನ ತಂತ್ರಜ್ಞಾನಗಳನ್ನೇ ಮುಖ್ಯವಾಗಿಟ್ಟುಕೊಂಡು ಇತಿ ಮಿತಿ ಇಲ್ಲದ ಅಭಿವೃದ್ಧಿ ಸಾಧಿಸಬಹುದು, ಆ ಮೂಲಕ ಬೇಕೆನಿಸುವಷ್ಟು ವಸ್ತು, ಸೇವೆಗಳ ಸೃಷ್ಟಿ ಮಾಡುತ್ತಾ ತಮ್ಮ ಎಂದೆಂದೂ ಹಿಂಗದ 'ಅನುಭೋಗ ಪ್ರವೃತ್ತಿ'ಯನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗಬಹುದು ಎನ್ನುವ ಪಶ್ಚಿಮದ ಆ ಭ್ರಮೆ ಈಗ ನಿಧಾನವಾಗಿ ಕರಗುವಂತಾಗಿದೆ. ಇಂತಹ ಅಭಿವೃದ್ಧಿ ಪಥ ಬಡತನ, ಅಸಮಾನತೆಗಳನ್ನು ಹೋಗಲಾಡಿಸುವುದು ಇರಲಿ ಅದನ್ನು ಮತ್ತಷ್ಟು ಉಲ್ಬಣಗೊಳಿಸಿರುವ ವಿಚಾರದ ಬಗ್ಗೆ ಯಾರೂ ಇದುವರೆಗೆ ತಲೆಕೆಡಿಸಿಕೊಂಡಿರಲಿಲ್ಲ. ಆದರೆ ಈಗ ಇವುಗಳೆಲ್ಲ ಒಂದಕ್ಕೊಂದು ಕೊಂಡಿ ಹಾಕಿಕೊಂಡಿದ್ದು, ಅದರ ಮೂಲಕ ಒಂದು 'ವಿಷವರ್ತುಲ'ವೇ ಏರ್ಪಾಡಾಗಿ, ನಮ್ಮ ಜೀವನಾಧಾರ ನೆಲ, ಜಲ, ಸಸ್ಯ, ಅರಣ್ಯ, ಜೀವ, ಜಂತುಗಳಿಗೆ ಒಟ್ಟಾರೆ ನಮ್ಮ 'ಜೀವ ರಕ್ಷಕ ಪರಿಸರಕ್ಕೆ' ಅಪಾಯ ತಂದೊಡ್ಡುವಂತಾಗಿವೆ. ಇದರ ನೇರ ಪರಿಣಾಮ ಪಶ್ಚಿಮದ ಆ 'ಜೀವನ ರೀತಿ'ಯ ಮೇಲಾಗುವಂತಾಗಿದೆ. ಇಂದು ನಿಧಾನವಾಗಿ ಕಾವೇರುತ್ತಿರುವ ಪರಿಸರವಾಗಲೀ, ಯುರೋಪ್ ರಾಷ್ಟ್ರಗಳ ತಲೆ ಮೇಲೆ ಸುರಿಯುತ್ತಿರುವ ಆಮ್ಲ ಮಳೆಯಾಗಲೀ, ವಾತಾವರಣ ಮಾಲಿನ್ಯದಿಂದ ನಮ್ಮ ಆಕಾಶ ರಕ್ಷಾಕವಚ ತೆಳುವಾಗುತ್ತಾ ರಂಧ್ರವೇರ್ಪಡುವಂತಾಗಿರುವುದಾಗಲೀ, ಹಾಗೇ ನಮ್ಮ ಪಶ್ಚಿಮ ಘಟ್ಟಗಳಲ್ಲಿನ ಅರಣ್ಯ ಮತ್ತು ಅಲ್ಲಿನ ಜೀವ ವೈವಿಧ್ಯತೆಯ ನಾಶವಾಗಲೀ ಇವುಗಳೆಲ್ಲಾ, ನಮ್ಮ ಅಭಿವೃದ್ಧಿ ಪಥದ ಪ್ರತ್ಯಕ್ಷ ಪರಿಣಾಮಗಳೆಂದು ಪಶ್ಚಿಮಕ್ಕೆ ಈಗ ಸ್ಪಷ್ಟವಾಗತೊಡಗಿದೆ. ಹೀಗೆ ಕಂಗೆಟ್ಟ ಪಶ್ಚಿಮಕ್ಕೆ ದಿಕ್ಕು ಕಾಣದಂತಾಗಿದ್ದು ಅಲ್ಲಿನ ಜನತಾಂತ್ರಿಕ ಸಮಾಜವಾದಿಗಳಿಂದ. ಪರಿಸರ, ಅಭಿವೃದ್ಧಿ, ಬಡತನ ಅಸಮಾನತೆ-

ಇವುಗಳ ಕೊಂಡಿಗಳನ್ನು ಅರ್ಥಮಾಡಿಕೊಂಡು, ಮಾನವ ಕೋಟಿಗೆ ಒಂದು ಹೊಸ ದಿಕ್ಕು, ಒಂದು ಪರ್ಯಾಯ ಅಭಿವೃದ್ಧಿ ಪಥವನ್ನು ತೋರಿಸುವಂತೆ ನಾರ್ವೆದೇಶದ ಇಂದಿನ ಸಮಾಜವಾದಿ ಪ್ರಧಾನಿ ಶ್ರೀಮತಿ ಗ್ರೊ. ಹರ್ಲೆಂ. ಬ್ರೂಟ್‌ಲ್ಯಾಂಡ್‌ರವರನ್ನು ವಿಶ್ವಸಂಸ್ಥೆ ಕೋರಿತು. ಇದರ ಪರಿಣಾಮವಾಗಿ, 1987ರ ಹೊತ್ತಿಗೆ ಶ್ರೀಮತಿ ಬ್ರೂಟ್‌ಲ್ಯಾಂಡ್‌ರಿಂದ ಅತ್ಯಂತ ಮಹತ್ವದ ವರದಿ ''ನಮ್ಮೆಲ್ಲರ ಸಾಮಾನ್ಯ ಭವಿಷ್ಯ'' [Our Common Future] ಹೊರಬಂದು, ಅದರ ಮೂಲಕ 'ಸುಸ್ಥಿರ ಅಭಿವೃದ್ಧಿ' ಈ ಪರಿಕಲ್ಪನೆಗೆ ಒಂದು ಸ್ಪಷ್ಟರೂಪ ದೊರೆಯುವಂತಾಯಿತು. ನಂತರದ 'ರಿಯೊ ಜಾಗತಿಕ ಪರಿಸರ ಮತ್ತು ಅಭಿವೃದ್ಧಿ' ಮೇಲಿನ ಸಮ್ಮೇಳನ ಈ ಸುಸ್ಥಿರ ಅಭಿವೃದ್ಧಿ ಪರಿಕಲ್ಪನೆಯನ್ನು ಯಾವುದೇ ರಾಷ್ಟ್ರದ ಅಭಿವೃದ್ಧಿಗೆ ಒಂದು 'ಕಾರ್ಯಸೂಚಿ'ಯನ್ನಾಗಿಮಾಡಿತು.

ನಮ್ಮ ದೇಶದಲ್ಲಿ ಲಕ್ಷಾಂತರ ನಾಟಿ ತಳಿ ಬತ್ತದ ಬಳಕೆ ಇದ್ದು ಈಗ ಬರಬರುತ್ತಾ ಇವುಗಳ ಸಂಖ್ಯೆ ಕ್ಷೀಣಗೊಂಡು ಕೆಲ ಸಹಸ್ರಕ್ಕೆ ಇಳಿದಿದೆಯಂತೆ. ಈ ಶತಮಾನದ ಅಂತ್ಯಕ್ಕೆ ಇವುಗಳ ಸಂಖ್ಯೆ ನೂರಕ್ಕಿಳಿಯಬಹುದೆಂದು ಊಹೆ. ಅಂದಮೇಲೆ ಮುಂದೆ ತಳಿ ಸೃಷ್ಟಿಯಾಗಲಿ, ಜೈವಿಕ ತಂತ್ರಜ್ಞಾನವಾಗಲೀ ಹೇಗೆ ಸಾಧ್ಯ?

ಬ್ರೂಟ್‌ಲ್ಯಾಂಡ್ ವರದಿಯ ರೀತ್ಯ ಸುಸ್ಥಿರ ಅಭಿವೃದ್ಧಿ ಎಂದರೆ ''ಮುಂದಿನ ತಲೆಮಾರಿನವರು ತಮ್ಮ ಅಭಿವೃದ್ಧಿಯನ್ನು ಪೂರೈಸಿಕೊಳ್ಳುವ ಅವರ ಸಾಮರ್ಥ್ಯವನ್ನು ಮೊಟಕುಗೊಳಿಸದಂತೆ, ಇಂದಿನ ತಲೆಮಾರಿನ ಎಲ್ಲರ "ಅಗತ್ಯ"ವನ್ನು ಪೂರೈಸುವಂತೆ ಮಾಡುವ ಅಭಿವೃದ್ಧಿ ಪ್ರಕ್ರಿಯೆ". ಇಲ್ಲಿ ಉಳ್ಳವರ ಅನುಭೋಗದ ಬಗ್ಗೆ ಮಾರುತಿ ಕಾರು, ವೀಡಿಯೋ, ಕಲರ್ ಟಿವಿಗಳ ಬಗ್ಗೆ ಮಾತಿಲ್ಲ, ಬದಲಿಗೆ ಅಭಿವೃದ್ಧಿ ಪ್ರಕ್ರಿಯೆ ಎನ್ನುವುದರಲ್ಲಿ ಜನಸಾಮಾನ್ಯರ ಜೀವನ ಅಗತ್ಯಗಳಾದ ಅನ್ನ, ನೀರು, ವಸತಿ, ವಸ್ತ್ರಗಳನ್ನು ಮೊದಲು ಪೂರೈಸುವ ವಿಚಾರ ಅಡಗಿದೆ. ಈ ಮೂಲಕ ಇಲ್ಲಿ ಅಭಿವೃದ್ಧಿ ಪ್ರಕ್ರಿಯೆಯನ್ನು ಎಲ್ಲರ ಹಿತ ಕಾಯುವ ''ಸಮಾನತೆ''ಅಂಶದೊಡನೆ ಬೆಸುಗೆ ಹಾಕುವಂತೆ ಮಾಡಲಾಗಿದೆ. ಜೊತೆಗೆ ಮುಂದಿನ ತಲೆಮಾರಿನ ಜನರ ಅಗತ್ಯಗಳ ವಿಚಾರವನ್ನು ಎತ್ತುವುದರ ಮೂಲಕ ಅಭಿವೃದ್ಧಿ ಮತ್ತು ಸಮಾನತೆಗಳಿಗೆ ''ಅಂತರ್ ತಲೆಮಾರುಗಳ''ಆಯಾಮ ಒದಗಿಸುವಂತಾಗಿದೆ. ಇದು, ನಮ್ಮ ಎಡ, ಪ್ರಗತಿಪರ, ಸಮಾಜವಾದಿ ಚಿಂತಕರ ಕಲ್ಪನೆಗೂ ಈವರೆಗೆ ಹೊಳೆಯದಾಗಿತ್ತು. ಹೀಗೆ, ಈ 'ಸುಸ್ಥಿರ ಅಭಿವೃದ್ಧಿ' ಪರಿಕಲ್ಪನೆ, ಆಧುನಿಕ ಜಗತ್ತು ಕಂಡ ಅತ್ಯಂತ ಪ್ರಗತಿದಾಯಕ ಪರಿಕಲ್ಪನೆ ಎಂದರೆ ತಪ್ಪಾಗಲಾರದು.

ಇನ್ನು ಈ ಸುಸ್ಥಿರ ಅಭಿವೃದ್ಧಿಯ ಸಾಧನೆಯ ಮಾತು ಸುಲಭದ್ದೇನೂ ಅಲ್ಲ. ಇದಕ್ಕೆ ನಮ್ಮ ಚಿಂತನೆಯಲ್ಲಿ ಮಾತ್ರವಲ್ಲ ನಮ್ಮ ಬದುಕಿನ ಶೈಲಿಯಲ್ಲೂ ಅಪಾರ ಬದಲಾವಣೆ ಅಗತ್ಯವಾಗಿರುತ್ತೆ. ಇದಕ್ಕೆ ಹಲವು ಪೂರ್ವಭಾವಿ ಅಗತ್ಯಗಳು ಬೇಕಾಗಿದ್ದು ಅವುಗಳಲ್ಲಿ ಮುಖ್ಯವಾದ ಎರಡರ ಬಗ್ಗೆ ಈಗ ಪಶ್ಚಿಮದ ಚಿಂತಕರಲ್ಲಿ ಒಮ್ಮತಾಭಿಪ್ರಾಯ ಏರ್ಪಾಡಾಗಿದೆ. ಅವುಗಳೆಂದರೆ,

1. ನೈಸರ್ಗಿಕ ಸಂಪನ್ಮೂಲಗಳ ಮಟ್ಟವನ್ನು ಕಾಪಾಡುವುದು:

ಯಾವುದೇ ಉತ್ಪಾದನೆ, ಅಭಿವೃದ್ಧಿಗೆ ವಿವಿಧ ಸಂಪನ್ಮೂಲಗಳು ಬೇಕಾಗಿರುತ್ತವೆ. ಈ ಸಂಪನ್ಮೂಲಗಳನ್ನು ಮಾನವನಿರ್ಮಿತ ಮತ್ತು ಪ್ರಕೃತಿದತ್ತ ಸಂಪನ್ಮೂಲಗಳೆಂದು ಸ್ಥೂಲವಾಗಿ ಎರಡು ಗುಂಪು ಮಾಡಬಹುದು. ಪ್ರಕೃತಿದತ್ತ ಸಂಪನ್ಮೂಲಗಳಿಗೆ ಉದಾಹರಣೆ ಎಂದರೆ ಅರಣ್ಯ, ಜಲ, ಎಣ್ಣೆ, ಖನಿಜ ಇತ್ಯಾದಿಗಳು. ಮಾನವ ನಿರ್ಮಿತ ಸಂಪನ್ಮೂಲಗಳೆಂದರೆ ಯಂತ್ರಗಳು, ಕಾರ್ಖಾನೆ; ವಾಹನಗಳು. ಇದುವರೆಗಿನ ಅಭಿವೃದ್ಧಿ ಪ್ರಕ್ರಿಯೆಯ ಮೂಲವಾದ ಎಂದರೆ, ಈ ಮನುಷ್ಯಕೃತ ಸಂಪನ್ಮೂಲಗಳನ್ನು ಅಧಿಕ ಅಧಿಕ ಉತ್ಪತ್ತಿ ಮಾಡುತ್ತಾ, ಕೈಗಾರೀಕರಣ, ನಗರೀಕರಣ ಏರ್ಪಾಡು ಮಾಡುತ್ತಾ ಮುಂದುವರೆಯುವುದು, ಅದೂ ಪ್ರಕೃತಿದತ್ತ ಸಂಪನ್ಮೂಲಗಳಾದ ಅರಣ್ಯ, ಖನಿಜ, ಎಣ್ಣೆ ಇತ್ಯಾದಿಗಳ ನಿರಂತರ ಶೋಷಣೆ ಅಥವಾ ವಿನಾಶದ ಮೂಲಕ. ಸುಸ್ಥಿರ ಅಭಿವೃದ್ಧಿ ಈ ವಾದವನ್ನು ಒಪ್ಪುವುದಿಲ್ಲ. ಇಂದಿನ ಮತ್ತು ಮುಂದಿನ ಜನಾಂಗಗಳ ಉಳಿವಿಗೆ, ಈ ನೈಸರ್ಗಿಕ ಸಂಪನ್ಮೂಲಗಳ ಮಟ್ಟ ಕಾಪಾಡುವುದು ಅನಿವಾರ್ಯವಾಗಿರುತ್ತೆ. ಅಷ್ಟೇಕೆ, ಬರಿದೇ ಮಾನವ ನಿರ್ಮಿತ ಸಂಪನ್ಮೂಲಗಳಿಂದ ಅಭಿವೃದ್ಧಿ ಸಾಧಿಸುತ್ತೇವೆ ಎನ್ನುವುದು ಮೂರ್ಖತನವಾದೀತು.

ಪ್ರಕೃತಿದತ್ತ ಸಂಪನ್ಮೂಲಗಳಿಲ್ಲದೇ ಈ ಮಾನವನಿರ್ಮಿತ ಸಂಪನ್ಮೂಲಗಳು ಕೆಲಸ ಮಾಡುವುದಾದರೂ ಹೇಗೆ? ಅವು ಒಂದಕ್ಕೊಂದು ಪೂರಕವಲ್ಲವೆ? ಖನಿಜ ಖಾಲಿಯಾದಾಗ ಕಾರ್ಖಾನೆಗಳು, ಎಣ್ಣೆ ಬರಿದಾದಾಗ ವಾಹನಗಳು ನಡೆಯುವುದಾದರೂ ಹೇಗೆ? ಅರಣ್ಯ ಕಡಿದು, ಖನಿಜ ಖಾಲಿ ಮಾಡಿ, ಎಣ್ಣೆ ಬಾವಿ ಬತ್ತಿಸಿ ಕಾರ್ಖಾನೆ-ನಗರಗಳನ್ನು ನಿರ್ಮಾಣ ಮಾಡುವಂತಹ ಅಭಿವೃದ್ಧಿ ಸ್ಥಿರವಾದುದಲ್ಲ. ಅದು ಎಂದಾದರೊಂದು ದಿನ ಕುಸಿಯುವಂತಹದು. ಮಿಗಿಲಾಗಿ, ಪ್ರಾಕೃತಿಕ ಸಂಪನ್ಮೂಲಗಳ ಪರಿಧಿಯನ್ನು ನಾವಿಂದು ವಿಸ್ತೃತಪಡಿಸಬೇಕಾಗಿದೆ. ವಾಯು, ಜಲ, ಜೀವ ವೈವಿಧ್ಯತೆ, ಅಸಂಖ್ಯಾತ ಸಸ್ಯ, ಪ್ರಾಣಿ, ಪಶು ಪಕ್ಷಿಗಳೆಲ್ಲಾ, ಮಿಗಿಲಾಗಿ, ಪ್ರಕೃತಿ ನೀಡುತ್ತಿರುವ ನೂರಾರು ಸೇವೆಗಳು, ಇವೆಲ್ಲಾ ನಮ್ಮ ಅಭಿವೃದ್ಧಿಗೆ ಒಂದಲ್ಲೊಂದು ವಿಧಗಳಲ್ಲಿ ಅನಿವಾರ್ಯವಾಗಿದ್ದು, ಇವುಗಳ ರಕ್ಷಣೆಯು ಅಷ್ಟೇ ಮಹತ್ವದ್ದಾಗಿರುತ್ತದೆ.

ಇನ್ನು ಮುಖ್ಯ ಪ್ರಶ್ನೆ ಎಂದರೆ ಈ ರೀತಿ ಪ್ರಾಕೃತಿಕ ಸಂಪನ್ಮೂಲಗಳ ಮಟ್ಟವನ್ನು ಇಳಿಸದೇ, ಅಭಿವೃದ್ಧಿ ಹೇಗೆ ಸಾಧ್ಯ ಎಂಬುದು. ಇದಕ್ಕೆ ಮೊದಲು ಉತ್ತರ ಹುಡುಕಬೇಕಾಗಿರುವುದು ''ನಮ್ಮ ಅಗತ್ಯಗಳೇನು ಮತ್ತು ಅಗತ್ಯಗಳೆಷ್ಟು'' ಎಂಬ ಪ್ರಶ್ನೆಗಳಿಂದ. ನಮ್ಮೆಲ್ಲರ ಜೀವನಾವಶ್ಯಕಗಳತ್ತ, ಅನ್ನ, ವಸತಿ, ವಸ್ತ್ರಗಳ ಪೂರೈಕೆಯತ್ತ ನಮ್ಮ ಅಭಿವೃದ್ಧಿ ಪಥವನ್ನು ತಿರುಗಿಸಿದ್ದಲ್ಲಿ, ಈ ವರೆಗೂ ಕಂಡಂತಹ ಈ ಪ್ರಾಕೃತಿಕ ಸಂಪನ್ಮೂಲಗಳ ವಿನಾಶ ಆಗುತ್ತಿರಲಿಲ್ಲ. ಬದಲಿಗೆ, ಉಳ್ಳವರ ಎಂದೆಂದೂ ಹಿಂಗದ 'ಅನುಭೋಗ' ಪ್ರವೃತ್ತಿಯತ್ತ ಅಭಿವೃದ್ಧಿ ತಿರುಗಿದಂತೇ ಈ ಪ್ರಾಕೃತಿಕ ಸಂಪನ್ಮೂಲಗಳ ವಿನಾಶ ಅತಿಯಾಗುತ್ತಾ ಬಂದಿರುತ್ತದೆ. ಈ ಹಿನ್ನೆಲೆಯಲ್ಲೇ ಗಾಂಧೀಜಿ ಎತ್ತಿದ ''ಎಲ್ಲರ ಅಗತ್ಯಗಳ ಪೂರೈಕೆಗೆ ಈ ಪ್ರಕೃತಿಯಲ್ಲಿ ಅರ್ಥವಿದೆಯೇ ಹೊರತು ಉಳ್ಳವರ ಅತಿ ಆಸೆ, ದುರಾಸೆಗಳ ಈಡೇರಿಕೆಗೆ ಅಲ್ಲ''ಮಾತು ಮತ್ತಷ್ಟು ಅರ್ಥಪೂರ್ಣವಾಗುವುದು. ಇದು ಸ್ವಲ್ಪ ತಾತ್ವಿಕ ಮಾತಾದಲ್ಲಿ, ಇದಕ್ಕೆ ಕೆಲ ವ್ಯಾವಹಾರಿಕ ಪರಿಹಾರಗಳನ್ನೂ ಸೇರಿಸಬಹುದು. ಖನಿಜ, ಎಣ್ಣೆಗಳನ್ನು ಸಂಪೂರ್ಣ ಬಳಸದೇ ಇರುವುದು ಅಸಾಧ್ಯವಾದಲ್ಲಿ, ಇವುಗಳ ಹಿತವಾದ, ಮಿತವಾದ, ಯೋಗ್ಯ ರೀತಿಯ ಬಳಕೆಯತ್ತ ಯೋಚಿಸಬೇಕು. ನಿರಂತರವಾಗಿ ಲಭ್ಯವಾಗಬಹುದಾದ 'ಬದಲೀ ಮೂಲ'ಗಳನ್ನಾದರೂ ಯೋಚಿಸಬೇಕು. ಉದಾ: ಜೈವಿಕ ಅನಿಲ, ವಾಯು, ಸೌರಶಕ್ತಿಗಳಂತಹವು. ಇವೆಲ್ಲಕ್ಕಿಂತ ಮುಖ್ಯವಾಗಿ, ಅರಣ್ಯದಂತಹ ಪುನರ್ ಉತ್ಪತ್ತಿ ಸಾಧ್ಯತೆಯಿರುವ ಸಂಪನ್ಮೂಲಗಳ ಮಟ್ಟವನ್ನು ಕಾಪಾಡುವುದಷ್ಟೇ ಅಲ್ಲ, ಹೆಚ್ಚಿಸಲೂ ಅಪಾರ ಅವಕಾಶಗಳಿರುತ್ತದೆ. ಇನ್ನು ವಾಯು, ಜಲ, ಜೀವ ಜಂತುಗಳೂ, ಒಟ್ಟಾರೆ ಪರಿಸರವೇ ಉತ್ಪಾದನಾ ದೃಷ್ಟಿಯಿಂದ ಅತ್ಯಗತ್ಯ ಸಂಪನ್ಮೂಲಗಳೆಂದು ಒಪ್ಪಿದಲ್ಲಿ, ನಮ್ಮ ಅಭಿವೃದ್ಧಿಯಿಂದ ವಾಯು ಮಲಿನವಾಗುವುದನ್ನು, ಜಲ ಬತ್ತುವುದನ್ನು, ಪರಿಸರ ಹಾಳಾಗುವುದನ್ನು, ಜೀವ ಜಂತುಗಳು ನಾಶವಾಗುವುದನ್ನಾದರೂ ಕನಿಷ್ಠ ತಡೆಗಟ್ಟುವುದು ಅತ್ಯಗತ್ಯವಾಗುತ್ತದೆ. ಈ ದೃಷ್ಟಿಯಿಂದ, ಪ್ರಕೃತಿದತ್ತ ಮತ್ತು ಮಾನವ ನಿರ್ಮಿತ ಸಂಪನ್ಮೂಲಗಳೆರಡನ್ನೂ ವೃದ್ಧಿ ಪಡಿಸುತ್ತಾ, ಅವುಗಳ ಬಳಕೆಯಲ್ಲಿ ಸಮತೋಲನ ಸಾಧಿಸುವಂತಹ ಅಭಿವೃದ್ಧಿ ಪಥವನ್ನು ನೋಡಬೇಕಾಗಿದೆ.

೩. ಜೀವ ವೈವಿಧ್ಯತೆಯನ್ನು ಕಾಪಾಡುವುದು:

ಜೀವ ವೈವಿಧ್ಯತೆ (BIO DIVERSITY) ಎಂಬುದು ಮನುಕುಲದ ಉಳಿವಿಗೆ ಜೀವಾಳವಾಗಿರುತ್ತದೆ ಎಂದರೆ ತಪ್ಪಾಗಲಾರದು. ಪ್ರಕೃತಿಯಲ್ಲಿರುವ ನೂರಾರು ಜಾತಿಯ ಗಿಡ, ಮರ, ಸಸ್ಯ, ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ, ಇತ್ಯಾದಿ ಜೀವಜಂತುಗಳು; ಅವುಗಳಲ್ಲಿ ಉಪಜಾತಿಗಳು, ವಿಭೇದ, ಪ್ರಭೇದಗಳು ನಾಶವಾಗದೇ ನಿರಂತರವಾಗಿ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳುವುದೇ ಜೀವ ವೈವಿಧ್ಯತೆಯ ರಕ್ಷಣೆ ಎನ್ನಬಹುದು. ಇದು ಒಂದು ಉತ್ಪಾದನಾ ವ್ಯವಸ್ಥೆಯ ಸದೃಢತೆಗೆ ಅಡಿಪಾಯ ಒದಗಿಸುತ್ತದೆ ಎನ್ನುವುದಕ್ಕೆ ಕೆಳಗಿನ ಮೂರು ಕಾರಣ ನೀಡಬಹುದು.

ಮೊದಲನೆಯದಾಗಿ, ಈ ಜೀವ ವೈವಿಧ್ಯತೆಯೇ ನಿಜವಾದ ಪ್ರಾಕೃತಿಕ ಸಂಪನ್ಮೂ ತಾನೆ. ಸೂಕ್ಷ್ಮವಾಗಿ ಒಳಹೊಕ್ಕು ನೋಡಿದಾಗ ಯಾವುದೇ ಉತ್ಪಾದನಾ ಪ್ರಕ್ರಿಯೆ, ಅದು ಕೈಗಾರಿಕೆ ಆಗಿರಲಿ, ಕೃಷಿ ಆಗಿರಲಿ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಒಂದಿಲ್ಲೊಂದು ವಿಧದಲ್ಲಿ ಪ್ರಕೃತಿಯ ಈ ಜೀವರಾಶಿಗಳ ಮೇಲೆ ಅವಲಂಬಿತವಾಗೇ ಇರುತ್ತದೆ. ಔಷಧಿಯಂತಹ ಉದ್ಯಮಗಳಲ್ಲಿ ಇದು ನೇರವಾಗಿರುತ್ತದೆ. ಇಂದು ಲಭ್ಯವಿರುವ ಔಷಧಿಗಳಲ್ಲಿ ಮುಕ್ಕಾಲು ಪಾಲು ಸಹಸ್ರಾರು ಗಿಡ ಮೂಲಿಕೆ, ಸಸ್ಯಗಳು ಇತ್ಯಾದಿ ಮೇಲೆ ನೇರ ಅವಲಂಬಿತ ವಾಗಿರುತ್ತವೆ. ಭವಿಷ್ಯದಲ್ಲಿ ನಮ್ಮ ರೋಗ, ರುಜಿನಗಳ ವಿರುದ್ಧ ಹೋರಾಡಲು, ಯಾವ ಸಸ್ಯ, ಗಿಡ ಮೂಲಿಕೆಗಳು ಅಗತ್ಯವೆಂದು ಹೇಳಲಾಗದು. ಹಾಗಾಗಿ ಈ ಜೀವ ವೈವಿಧ್ಯತೆಯ ರಕ್ಷಣೆ ಅನಿವಾರ್ಯವಾಗಿರುತ್ತದೆ.

ಇನ್ನು ಕೃಷಿ ಉತ್ಪಾದನೆಯಂತೂ ಈ ಜೀವ ವೈವಿಧ್ಯತೆಯ ಮೇಲೆ ನೇರವಾಗಿ ನಿಂತಿರುತ್ತದೆ ಎನ್ನಬಹುದು. ಹೊಸ ಹೊಸ ತಳಿಗಳ ಸೃಷ್ಟಿಸುವುದರ ಮೂಲಕ ನಮ್ಮ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು ಹಿಂದೆಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಈಗೀಗ ಈ ನಿಟ್ಟಿನಲ್ಲಿ ಅಂಗಾಂಶ ಕೃಷಿ (TISSUE CULTURE) ಜೈವಿಕ ತಂತ್ರಜ್ಞಾನ (BIO TECHNOLOGY) ಇತ್ಯಾದಿ ಇತ್ಯಾದಿಗಳ ಮಾತು ಹೆಚ್ಚು ಕೇಳಿ ಬರುತ್ತದೆ. ನಮ್ಮ ತಳಿ ವೈವಿಧ್ಯತೆ, ಅವುಗಳ ಜಾತಿ, ಪ್ರಭೇದಗಳು ವೃದ್ಧಿಯಾಗುತ್ತಿದ್ದರೆ ಮಾತ್ರ ಇವೆಲ್ಲ ತಂತ್ರಗಳ ಬಳಕೆ ಸಾಧ್ಯ ತಾನೆ. ಉದಾಹರಣೆಗೆ ನಮ್ಮ ದೇಶದಲ್ಲಿ ಲಕ್ಷಾಂತರ ನಾಟಿ ತಳಿ ಬತ್ತದ ಬಳಕೆ ಇದ್ದು ಈಗ ಬರಬರುತ್ತಾ ಇವುಗಳ ಸಂಖ್ಯೆ ಕ್ಷೀಣಗೊಂಡು ಕೆಲ ಸಹಸ್ರಕ್ಕೆ ಇಳಿದಿದೆಯಂತೆ. ಈ ಶತಮಾನದ ಅಂತ್ಯಕ್ಕೆ ಇವುಗಳ ಸಂಖ್ಯೆ ನೂರಕ್ಕಿಳಿಯಬಹುದೆಂದು ಊಹೆ. ಅಂದಮೇಲೆ ಮುಂದೆ ತಳಿ ಸೃಷ್ಟಿಯಾಗಲಿ, ಜೈವಿಕ ತಂತ್ರಜ್ಞಾನವಾಗಲೀ ಹೇಗೆ ಸಾಧ್ಯ. ಹೀಗೆ ಜೀವ ವೈವಿಧ್ಯತೆಯ ನಾಶ ಎಂದರೆ ನಾವು ನಿಂತಿರುವ ಮರದಕೊಂಬೆಯೊಂದನ್ನು ನಾವೇ ಕಡಿಯುವ ದುಸ್ಸಾಹಸಕ್ಕೆ ಕೈಹಾಕಿದಂತೆ.

ಇನ್ನು ಮುಂಬರುವ ಜನಾಂಗದ ಆಯ್ಕೆಯ ಸ್ವಾತಂತ್ರ್ಯವನ್ನು, ಅದರ ಅಭಿವೃದ್ಧಿ ಸಾಧ್ಯತೆಯನ್ನು ಕಾಪಾಡಬೇಕೆಂದರೆ, ಈ ಜೀವ ವೈವಿಧ್ಯತೆಯ ಮಟ್ಟವನ್ನು ಹಾಗೇ ಉಳಿಸಿ, ಅವರಿಗೆ ಅದನ್ನ ಬಳುವಳಿಯಾಗಿ ಬಿಡುವುದು ಅತ್ಯಂತ ಸೂಕ್ತವಾಗಿರುತ್ತದೆ.

ಜೀವ ವೈವಿಧ್ಯತೆ ಸುಸ್ಥಿರ ಅಭಿವೃದ್ಧಿಗೆ ನೀಡುವ ಮತ್ತೊಂದು ಕೊಡುಗೆ. ಅಂದರೆ, ಅದು ಹೊರಗಿನ ಒತ್ತಡ ಮತ್ತು ಆಘಾತಗಳ

ವಿರುದ್ಧ ಒದಗಿಸುವ ''ಸಹಜ ವಿಮೆ'' (INSURANCE). ಒಂದು ಉತ್ಪಾದನಾ ವ್ಯವಸ್ಥೆಯ ಮೇಲೆ ವಿವಿಧ ರೀತಿಯ ''ಒತ್ತಡಗಳು'' (STRESSES) ಮತ್ತು ''ಆಘಾತಗಳು'' (SHOCKS) ಬೀಳುತ್ತಲೇ ಇರುತ್ತವೆ. ಒತ್ತಡಗಳು ಪದೇ ಪದೇ ಬಂದು ತೊಂದರೆ ಕೊಡುವಂತಹವು. ಇವುಗಳ ಸಂಖ್ಯೆ ಹೆಚ್ಚಿದ್ದು, ಪರಿಣಾಮ ಮಾತ್ರ ಅಂತಹ ಗಮನಾರ್ಹವಾಗಿರುವುದಿಲ್ಲ. ಉದಾಹರಣೆಗೆ ಆಗಾಗ್ಗೆ ಬೀಳುತ್ತಲೇ ಇರುವ ಚಿಕ್ಕ ಪುಟ್ಟ ಕೀಟಗಳು, ರೋಗಗಳ ಹಾವಳಿ, ಮಳೆಯ ಪ್ರಮಾಣದಲ್ಲಿ ಏರಿಳಿತ, ಭೂಸವೆತ, ಕೂಲಿಗಳ, ಹೂಡಿಕೆಗಳ ಅಭಾವ, ಉತ್ಪನ್ನಗಳ ಬೆಲೆಯಲ್ಲಿ ಏರಿಳಿತ ಇತ್ಯಾದಿ ಇತ್ಯಾದಿ. ಒಂದರ್ಥದಲ್ಲಿ ಇವುಗಳು ಉತ್ಪಾದನಾ ವ್ಯವಸ್ಥೆಗೆ 'ಕಿರುಕುಳ' ಕೊಡುವಂತಹವೇ ಹೊರತು, ಗಂಭೀರ ಸ್ವಭಾವದ ಹೊಡೆತ ಕೊಡುವಂತಹವಲ್ಲ. ಆಘಾತಗಳು ಒಮ್ಮಿಂದೊಮ್ಮೆಲೇ ದಿಢೀರನೆ ಬಂದೆರಗುವಂತಹವು; ಅದೂ ಊಹೆಗೂ ನಿಲುಕದಂತೆ. ಉದಾಹರಣೆಗೆ ಅತಿವೃಷ್ಟಿ, ಅನಾವೃಷ್ಟಿ, ಭಾರೀ ಪೀಡೆಗಳ ಹಾವಳಿ, ಬೆಲೆಗಳ ದಿಢೀರನೆ ಏರಿಳಿತ ಇತ್ಯಾದಿ. ಒಂದು ರೀತಿಯಲ್ಲಿ ಒತ್ತಡ ಮತ್ತು ಆಘಾತಗಳ ನಡುವೆ ಗಮನಾರ್ಹವಾದ ಗುಣಾತ್ಮಕ ವ್ಯತ್ಯಾಸವಿರದೇ ತೀವ್ರತೆ, ಮಟ್ಟಗಳಲ್ಲಿ ವ್ಯತ್ಯಾಸ ಇರುತ್ತದೆ. ಒಂದು ಉತ್ಪಾದನಾ ವ್ಯವಸ್ಥೆಯ ಮೇಲೆ ಬೀಳುತ್ತಿರುವ ಈ ಎಲ್ಲಾ ಒತ್ತಡ, ಆಘಾತಗಳನ್ನು ಎದುರಿಸುತ್ತಾ, ಆ ವ್ಯವಸ್ಥೆ ಮುಂದುವರೆಯುತ್ತಿದ್ದರೆ ಅದು ಸದೃಢವಾಗಿದೆ ಎನ್ನಬಹುದು. ಈ ತತ್ವದ ಆಧಾರದ ಮೇಲೆ, ಆ ಒಂದು ಉತ್ಪಾದನಾ ಪದ್ಧತಿಯನ್ನು 'ಸುಸ್ಥಿರ ಅಭಿವೃದ್ಧಿ' ಎನ್ನಬಹುದು. ಉತ್ಪಾದನಾ ವ್ಯವಸ್ಥೆ ಒಂದರ ಈ ರೀತಿಯ ಸದೃಢತೆಗೂ, ಆ ವ್ಯವಸ್ಥೆ ಕಾಪಾಡಿಕೊಂಡು ಬಂದಿರುವ ಜೀವ ವೈವಿಧ್ಯತೆಗೂ ನೇರ ಸಂಬಂಧವಿರುವುದು ಈಗ ಸ್ಪಷ್ಟವಾಗುತ್ತದೆ. ಇದಕ್ಕೆ ಕೃಷಿಯನ್ನೇ ಉದಾಹರಣೆಗೆ ತೆಗೆದುಕೊಳ್ಳಬಹುದು. ಒಂದು ಕೃಷಿ ಉತ್ಪಾದನಾ ವ್ಯವಸ್ಥೆ ಒಂದೇ ವಿಧದ ಬೆಳೆ ಅಥವಾ ಏಕೈಕ ತಳಿಯ ಮೇಲೆ ನಿಂತಿದ್ದರೆ ಅದು ಹೆಚ್ಚು ಆತಂಕಕಾರಿ ಎನ್ನಬಹುದು. ಅಂತಹ ಪದ್ಧತಿಗೆ ಈ ಮೇಲೆ ತಿಳಿಸಿದ ಯಾವುದೇ ಒತ್ತಡ, ಅಥವಾ ಆಘಾತಗಳು ಬಂದಲ್ಲಿ ರೈತರು ತಲೆ ಎತ್ತಲಾರದಷ್ಟು ಪ್ರಮಾಣದಲ್ಲಿ ಉತ್ಪಾದನೆ ಕಡಿತವಾಗಿ, ನಷ್ಟ ಅನುಭವಿಸುವಂತಾಗುತ್ತದೆ. ಬದಲಿಗೆ ವಿವಿಧ ತಳಿಗಳು, ವಿವಿಧ ಬೆಳೆಗಳು, ಧಾನ್ಯ, ಹಣ್ಣು, ತರಕಾರಿ, ಪಶುಪಾಲನೆ ಇತ್ಯಾದಿಗಳ ಮೇಲೆ ನಿಂತಿರುವ ''ವೈವಿಧ್ಯ ಕೃಷಿ'' (DIVERSIFIED AGRICULTURE) ಇಂತಹ ಒತ್ತಡ ಮತ್ತು ಆಘಾತಗಳನ್ನು ಎದುರಿಸಲು ಹೆಚ್ಚು ಶಕ್ತವಾಗಿರುತ್ತದೆ. ಒಂದರಲ್ಲಾದ ನಷ್ಟ ಮತ್ತೊಂದರಲ್ಲಿ ಕೂಡಿ ಬಂದು ಒಟ್ಟಾರೆ ಉತ್ಪಾದನೆ ಸ್ಥಿರವಾಗಿರುತ್ತದೆ. ಇದೇ ತತ್ವವನ್ನು ಒಂದು ಸಮಗ್ರ ಮಟ್ಟದಲ್ಲಿ-ರಾಜ್ಯ, ರಾಷ್ಟ್ರಮಟ್ಟಕ್ಕೂ ವಿಸ್ತರಿಸಿ ಅವುಗಳ ಉತ್ಪಾದನಾ ಸದೃಢತೆ ಅಥವಾ ಸುಸ್ಥಿರತೆಯನ್ನು ಯೋಚಿಸಬಹುದು. ಈ ರೀತಿ ಜೀವ ವೈವಿಧ್ಯತೆ ಎಂಬುದು ಉತ್ಪಾದನಾ ವ್ಯವಸ್ಥೆ ಒಂದಕ್ಕೆ ಒದಗಿಸುತ್ತಿರುವ ''ಸಹಜ ವಿಮೆ'' ಎಂದರೆ ತಪ್ಪಾಗಲಾರದು. ಈ ವೈವಿಧ್ಯತೆ ಅಧಿಕವಾದಷ್ಟೂ, ಉತ್ಪಾದನಾ ವ್ಯವಸ್ಥೆ ಗಟ್ಟಿಯಾಗಿರುತ್ತದೆ.

ಇನ್ನು ಈ ಜೀವ ವೈವಿಧ್ಯತೆ ಮನುಕುಲಕ್ಕೆ ನೀಡುತ್ತಿರುವ ಮತ್ತೊಂದು ಕಾಣಿಕೆ ಎಂದರೆ ''ಜ್ಞಾನ''ದ ಸಂರಕ್ಷಣೆ ಮತ್ತು ಸತತ ಪೂರೈಕೆ. ಜೀವ ವೈವಿಧ್ಯತೆಯೇ ನಿಜವಾದ ಅರ್ಥದಲ್ಲಿ ಮಾಹಿತಿ ಅಥವಾ ಜ್ಞಾನ ಎನ್ನಬಹುದು. ಈ ಜ್ಞಾನ ಇಂದು ಮಾನವ ಮೆದುಳಿನಲ್ಲಾಗಲೀ, ಮುದ್ರಣಗೊಂಡ ಪುಸ್ತಕ ಅಥವಾ ಕಂಪ್ಯೂಟರ್ ಡಿಸ್ಕ್‌ಗಳಲ್ಲಾಗಲೀ ಶೇಖರವಾಗಿರುತ್ತದೆ ಎಂದರೆ ಅದು ತಪ್ಪು ಕಲ್ಪನೆಯಾಗಿರುತ್ತದೆ. ಇಂದು ವಿಜ್ಞಾನ, ತಂತ್ರಜ್ಞಾನ ಮುಂದುವರೆದು, ಆ ಮೂಲಕ ಪ್ರಗತಿ ಸಾಧಿಸುವಂತಾಗಲು, ಪ್ರಕೃತಿಯಲ್ಲಿ ಹುದುಗಿರುವ ಈ ಅಪಾರ ಜ್ಞಾನಗಂಗೆಯನ್ನು ಅರಿತು, ಅಳವಡಿಸಿಕೊಳ್ಳುವಂತಾಗಿರುವುದೇ ಮೂಲಕಾರಣ ತಾನೆ. ಅದು ಅಣುವಿನ ವಿನ್ಯಾಸದಿಂದ ಹಿಡಿದು ದಾಸವಾಳದ ಹೂ ರಚನೆವರೆಗೆ ಇರಬಹುದು. ಇಂದು ಇಂತಹ ಅಮೂಲ್ಯ ಜೀವ ವೈವಿಧ್ಯತೆಯ ನಾಶ ಎಂದರೆ, ಜ್ಞಾನದ ಬುಡಕ್ಕೆ ಕೊಡಲಿ ಏಟು ಹಾಕಿದಂತಾಗುತ್ತದೆ. ನಮ್ಮಲ್ಲಿ ಹಿಂದೆಂದಿನಿಂದಲೂ ಲಭ್ಯವಿದ್ದ ನೂರಾರು ನಾಟಿ ತಳಿಗಳು ಮಾಯವಾಗುತ್ತಿವೆ ಎಂದರೆ ಅವುಗಳಲ್ಲಿ ಹುದುಗಿರುವ ಹಲವು ಜೀನ್‌ಗಳ ರೂಪದ ಮಾಹಿತಿನಾಶ ಎಂದಾಯ್ತು. ಇದು ಮುಂದೆಂದಾದರೂ ಹೊಸ ತಳಿ ಒಂದರ ಸೃಷ್ಟಿಯ ಅವಕಾಶವನ್ನೇ ಕಳೆದುಕೊಂಡಂತಾಗುತ್ತದೆ. ಹಾಗೇ ನಮ್ಮ ಪಶ್ಚಿಮ ಘಟ್ಟದ ಸಹಜ ಅರಣ್ಯಗಳ ಸಸ್ಯವೈವಿಧ್ಯತೆಯ ನಾಶ ಎಂದರೆ ಮುಂದೆ ಎಂದಾದರೂ ಭವಿಷ್ಯದ ರೋಗ ರುಜಿನಗಳ ವಿರುದ್ಧ ಹೋರಾಡುವ ಔಷಧಿಗಳ ಸೃಷ್ಟಿಗೆ ಬೇಕಾದ ಅಮೂಲ್ಯ ಗಿಡ ಮೂಲಿಕೆಗಳು, ಹಾಗೇ ಅವುಗಳಲ್ಲಿ ಹುದುಗಿರುವ ಅಪಾರ ಮಾಹಿತಿಗಳ ನಾಶ ಎಂದಾಯ್ತು. ಮುಂದಿನ ತಲೆಮಾರುಗಳ ಆಯ್ಕೆಯ ಸಾತಂತ್ರ್ಯವನ್ನು ಕಾಪಾಡ ಬೇಕೆಂದರಂತೂ ಈ ಜೀವ ವೈವಿಧ್ಯತೆಯ ರಕ್ಷಣೆ ಅನಿವಾರ್ಯವಾಗಿರುತ್ತದೆ. ಸುಸ್ಥಿರ ಅಭಿವೃದ್ಧಿ ಮತ್ತು ಜೀವ ವೈವಿಧ್ಯತೆಗಳ ಕೊಂಡಿ ಸಂಕೀರ್ಣವಾಗಿದ್ದು ಅಷ್ಟೇ ಅನಿಶ್ಚಯವಾಗಿರುವುದರಿಂದ, ಈ 'ಜೀವ ವೈವಿಧ್ಯತೆ' ಮಟ್ಟ ಹಾಳಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕನಿಷ್ಠ ಜಾಣತನವಾಗುತ್ತದೆ.

ನಮ್ಮ ಪಶ್ಚಿಮ ಘಟ್ಟದ ಸಹಜ ಅರಣ್ಯಗಳ ಸಸ್ಯವೈವಿಧ್ಯತೆಯ ನಾಶ ಎಂದರೆ ಮುಂದೆ ಎಂದಾದರೂ ಭವಿಷ್ಯದ ರೋಗ ರುಜಿನಗಳ ವಿರುದ್ಧ ಹೋರಾಡುವ ಔಷಧಿಗಳ ಸೃಷ್ಟಿಗೆ ಬೇಕಾದ ಅಮೂಲ್ಯ ಗಿಡ ಮೂಲಿಕೆಗಳು, ಹಾಗೇ ಅವುಗಳಲ್ಲಿ ಹುದುಗಿರುವ ಅಪಾರ ಮಾಹಿತಿಗಳ ನಾಶ ಎಂದಾಯ್ತು.

II

ಸುಸ್ಥಿರ ಕೃಷಿ

ಈ ಎಲ್ಲಾ ಹಿನ್ನೆಲೆಯಲ್ಲೇ ಸುಸ್ಥಿರ ಕೃಷಿ ಅಭಿವೃದ್ಧಿಯನ್ನು ವ್ಯಾಖ್ಯಾನಿಸುವುದಾದಲ್ಲಿ ಅದು ''ಇಂದು ಮತ್ತು ಮುಂದೆ ಜೀವನಾವಶ್ಯಕ ವಸ್ತುಗಳಾದ ಅನ್ನ, ನೀರು, ಹಾಲು, ಹಣ್ಣು, ತರಕಾರಿ ಇತ್ಯಾದಿಗಳನ್ನು ಎಲ್ಲರ ಕೈಗೆ ಸತತವಾಗಿ ಎಟುಕುವಂತೆ ಪೂರೈಕೆ ಮಾಡುವ ಅಭಿವೃದ್ಧಿ''ಎನ್ನಬಹುದು.

ಈ ವ್ಯಾಖ್ಯೆಯ ರೀತಿಯಲ್ಲೇ ಹೋಗುವುದಾದಲ್ಲಿ, ಸುಸ್ಥಿರ ಕೃಷಿ ಅಭಿವೃದ್ಧಿ ಎಂಬುದು ಮೂರು ಮುಖ್ಯ ಉದಾರ ದೃಷ್ಟಿಕೋನಗಳನ್ನೂ ಒಳಗೊಂಡಿರಬೇಕಾಗುತ್ತದೆ. ಅವುಗಳೆಂದರೆ ಉತ್ಪಾದಕತೆಯ ದೃಷ್ಟಿಕೋನ, ಸಮಾನತೆಯ ದೃಷ್ಟಿಕೋನ ಮತ್ತು ಅಂತರ್ ತಲೆಮಾರುಗಳ ದೃಷ್ಟಿಕೋನ. ಈ ಮೂರು ದೃಷ್ಟಿಕೋನಗಳು ಮೇಲ್ನೋಟಕ್ಕೆ ಬೇರೆ ಬೇರೆ ಎನಿಸಿದರೂ, ಒಳಹೊಕ್ಕು ನೋಡಿದಾಗ ಒಂದಕ್ಕೊಂದು ಹೊಂದಿಸಿಕೊಂಡಿರುವುದು ಅರಿವಾಗುತ್ತದೆ. ಇವುಗಳ ಬಗ್ಗೆ ಸ್ವಲ್ಪ ವಿವಿರವಾದ ಚರ್ಚೆ ಸುಸ್ಥಿರ ಕೃಷಿಯ ಬಗ್ಗೆ ಹೆಚ್ಚು ಬೆಳಕು ಚೆಲ್ಲಬಹುದಾಗಿರುತ್ತದೆ.

1. ಉತ್ಪಾದಕತೆ ಹೆಚ್ಚಳದ ದೃಷ್ಟಿಕೋನ:

ಒಂದೆಡೆ ಜನಸಂಖ್ಯೆಯ ಹೆಚ್ಚಳ, ಇನ್ನೊಂದೆಡೆಯಿಂದ ಜನರ ಕೊಳ್ಳುವ ಶಕ್ತಿ ಅಥವಾ ಆದಾಯದ ಹೆಚ್ಚಳ ಈ ಎರಡು ಕಾರಣಗಳಿಂದ ಕೃಷಿ ಉತ್ಪನ್ನಗಳು ಅಥವಾ ಆಹಾರದ ಮೇಲೆ ಬೇಡಿಕೆ ಸತತವಾಗಿ ಏರುತ್ತಲೆ ಇರುತ್ತದೆ. ಹಾಗಾಗಿ ಸುಸ್ಥಿರ ಕೃಷಿ ಎನ್ನುವುದು ಸತತವಾಗಿ ಏರುತ್ತಿರುವ ಈ ಬೇಡಿಕೆಯನ್ನು ಎದುರಿಸಲು ಕೃಷಿ ಉತ್ಪನ್ನಗಳ ಉತ್ಪಾದಕತೆಯನ್ನು ಎಷ್ಟು ಸಾಧ್ಯವೋ ಅಷ್ಟರ ಮಟ್ಟಕ್ಕೆ ಹೆಚ್ಚಿಸುವಂತಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಇಂದು ಕೃಷಿವಿಜ್ಞಾನ ಕೇಂದ್ರಗಳಲ್ಲಿ, ಸಂಶೋಧನಾಲಯಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳು ಮತ್ತಷ್ಟು ಹೆಚ್ಚಬೇಕಾಗುತ್ತದೆ. ಆದರೆ ಅದು ಮುಂದೆ ಚರ್ಚಿಸಲಿರುವ ಮತ್ತೆರೆಡು ಸುಸ್ಥಿರ ಕೃಷಿ ಅಭಿವೃದ್ಧಿಯ ದೃಷ್ಟಿಕೋನ ಗಳನ್ನೂ ಒಳಗೊಂಡಿರಬೇಕಾಗಿರುತ್ತದೆ.

2. ಸಮಾನತೆಯ ದೃಷ್ಟಿಕೋನ:

ಉತ್ಪಾದಕತೆ ಹೆಚ್ಚಳದ ದೃಷ್ಟಿಕೋನ ವ್ಯಕ್ತಿಗತವಾಗಿ ರೈತರ ಮಟ್ಟದಲ್ಲಿ ನೋಡುವಂತಾಗಿದ್ದು, 'ನನಗೆ'ಎಂಬ ಭಾವನೆಗೆ ಹೆಚ್ಚು ಒತ್ತುಕೊಡುವುದಾಗಿರುತ್ತದೆ. ಇದರ ಮೇಲೆ ಸಮಾನತೆಯ ದೃಷ್ಟಿಕೋನದ ಪ್ರಭಾವ ತರುವುದರಿಂದ ಈ ಸಂಕುಚಿತ ಮಾಯವಾಗಿ ''ನಮ್ಮೆಲ್ಲರಿಗೆ'' ಎಂಬ ತತ್ವಕ್ಕೆ ಹೆಚ್ಚು ಮಹತ್ವ ಬರುವಂತಾಗುತ್ತದೆ. ಉತ್ಪಾದಕತೆಯ ಹೆಚ್ಚಳದ ಲಾಭ ಕೆಲವರಿಗೆ ಮಾತ್ರವಾಗಿರದೇ ಇದು ಸಂಬಂಧಿಸಿದ ಎಲ್ಲರಿಗೂ ಹಂಚಿಕೆಯಾಗುವಂತಿರಬೇಕೆನ್ನುವುದೇ ಸಮಾನತೆ ದೃಷ್ಟಿಕೋನದ ಮೂಲ ಉದ್ದೇಶವಾಗಿರುತ್ತದೆ. ಅಂದರೆ ಕೃಷಿ ಅಭಿವೃದ್ಧಿ ಎನ್ನುವುದು ಬಡತನ, ನಿರುದ್ಯೋಗ ಇತ್ಯಾದಿ ಪಿಡುಗುಗಳನ್ನೂ ಗಮನದಲ್ಲಿಟ್ಟುಕೊಂಡು, ಅವುಗಳಿಗೆ ಪರಿಹಾರವನ್ನು ತನ್ನ ವ್ಯಾಪ್ತಿಯೊಳಗೆ ತರುವಂತಿರಬೇಕಾಗುತ್ತದೆ. ಅಭಿವೃದ್ಧಿಯಿಂದ ಈ ಪಿಡುಗುಗಳಿಗೆ ಸೂಕ್ತ ಪರಿಹಾರ ಸಿಗದೆ, ಅವುಗಳು ಮತ್ತಷ್ಟು ಉಲ್ಬಣಗೊಳ್ಳುವಂತಾದಲ್ಲಿ ಒಂದಲ್ಲೊಂದು ದಿನ ಅವುಗಳು ಈ ಉತ್ಪಾದಕತೆಗೆ ಅಥವಾ ಒಟ್ಟಾರೆ ಅಭಿವೃದ್ಧಿಗೇ ಮಾರಕವಾಗುವ ಸಾಧ್ಯತೆಯಿರುತ್ತದೆ. ಈ ಕೆಳಗಿನ ಉದಾಹರಣೆಗಳು, ಸಮಾನತೆಯ ಅಂಶಗಳೂ ಸುಸ್ಥಿರ ಕೃಷಿ ಅಭಿವೃದ್ಧಿಯಲ್ಲಿ ಹೇಗೆ ಮಹತ್ವವಾಗುತ್ತದೆ ಎಂಬುದರ ಮೇಲೆ ಬೆಳಕು ಚೆಲ್ಲುತ್ತವೆ.

1) ನಿರುದ್ಯೋಗ ಮತ್ತು ಬಡತನ ಅತಿಯಾಗಿರುವ ಪ್ರದೇಶಗಳಲ್ಲಿ, ಜನರನ್ನು ಮತ್ತಷ್ಟು ನಿರುದ್ಯೋಗಿಗಳನ್ನಾಗಿ ಮಾಡುವ ಅಥವಾ ಅವರ ಉದ್ಯೋಗವನ್ನು ಕಸಿಯುವ ಟ್ರಾಕ್ಟರ್ ಅಥವಾ ಕಂಬೈನರ್‌ಗಳಂತಹ ತಂತ್ರಜ್ಞಾನದ ಬಳಕೆ.

2) ಆಹಾರದ ಅಭಾವ, ಹಾಹಾಕಾರವಿರುವ ಸ್ಥಳಗಳಲ್ಲಿ ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ ಇತ್ಯಾದಿಗಳನ್ನು ತಂಬಾಕು, ರೇಶ್ಮೆ ಉತ್ಪಾದನೆಗೆ ಬಳಸುವುದು.

3) ಲಾಭ ಅಥವಾ ವಾಣಿಜ್ಯ ದೃಷ್ಟಿಯನ್ನು ಮಾತ್ರ ಇಟ್ಟುಕೊಂಡು, ರಸಗೊಬ್ಬರ, ಕ್ರಿಮಿ, ಕೀಟ, ಕಳೆನಾಶಕ, ರಾಸಾಯನಿಕ ವಸ್ತುಗಳನ್ನು ಅತೀ ಬಳಕೆ ಮಾಡಿ, ಆಹಾರ, ತರಕಾರಿ, ಹಣ್ಣು, ನೀರು, ಇತ್ಯಾದಿಗಳನ್ನು ವಿಷಮಯಗೊಳಿಸುವುದು.

4) ಭೂಸುಧಾರಣಾ ಕ್ರಮಗಳಿಂದ ಭೂಮಿಯ ಹಂಚಿಕೆ ವಿಚಾರವನ್ನು ಸರಿಪಡಿಸುವುದು. ಹಾಗೇ ಅಂತರ್ಜಲದ ಸೂಕ್ತ ಬಳಕೆಗೂ ಪರಿಹಾರ ಹುಡುಕುವುದು.

5) ಹೊಲಗಳಲ್ಲಿ ದುಡಿಯುವ ಕೃಷಿ ಕಾರ್ಮಿಕರಿಗೆ ಒಳ್ಳೆಯ ಕೂಲಿ, ಹಿತಕರ ವಾತಾವರಣ ಮತ್ತು ಕಾಳಿನ ರೂಪದಲ್ಲಿ ಭಾಗಶಃ ಕೂಲಿ ನೀಡುವುದು.

6) ಗ್ರಾಹಕರಿಗೆ ಯೋಗ್ಯದರದಲ್ಲಿ, ರಾಸಾಯನಿಕಗಳಿಂದ ಮುಕ್ತ ಧಾನ್ಯ, ತರಕಾರಿ, ಹಣ್ಣು ಹಂಪಲು ಇತ್ಯಾದಿ ಅವಶ್ಯಕ ವಸ್ತುಗಳು ಸದಾ ಲಭ್ಯವಾಗುವಂತೆ ಮಾಡುವುದು.

7) ಕೃಷಿ ಉತ್ಪಾದನೆಯಲ್ಲಿ ಪುರುಷರೊಡನೆ ಸಮಭಾಗಿಗಳಾಗಿರುವ ರೈತ ಮಹಿಳೆಯರು ಮತ್ತು ಮಹಿಳಾ ಕಾರ್ಮಿಕರಿಗೂ ಯೋಗ್ಯ

ವೇತನ, ರಾಸಾಯನಿಕಗಳ ಅತೀ ಬಳಕೆಯಿಂದ ಮುಕ್ತವಾದಂತಹ ಹಿತಕರ ವಾತಾವರಣ ದೊರೆಯುವಂತೆ ಮಾಡುವುದು.

8) ಇವೆಲ್ಲಕ್ಕಿಂತ ಮುಖ್ಯವಾಗಿ, ಕೃಷಿ ಉತ್ಪಾದನೆ ಕ್ರಿಯೆಯಲ್ಲಿ, ಅದರಲ್ಲೂ ಮುಖ್ಯವಾಗಿ ನೈಸರ್ಗಿಕ ಸಂಪನ್ಮೂಲಗಳ ಬಳಕೆಯಲ್ಲಿ 'ಅನ್ಯರ ಮೇಲಾಗುವ ಅಗೋಚರ ಪರಿಣಾಮ' [EXTERNALITY] ಬಗ್ಗೆ ಅತ್ಯಂತ ಜಾಗರೂಕವಾಗಿ ರುವುದು. ಉದಾಹರಣೆಗೆ ಒಬ್ಬ ರೈತ ತನ್ನ ಕೊಳವೆ ಬಾವಿಯಿಂದ ಅತೀ ಆಳಕ್ಕಿಳಿದು ಇತಿಮಿತಿ ಇಲ್ಲದಂತೆ ಅಂತರ್ಜಲ ಹೀರತೊಡಗಿದರೆ, ಸುತ್ತಮುತ್ತಲಿನ ಬಾವಿಗಳು ಬತ್ತಿಹೋಗಿ, ಅವರ ಬೆಳೆಗಳಿಗೆ, ಮಿಗಿಲಾಗಿ ಕುಡಿಯುವ ನೀರಿಗೇ ತೊಂದರೆಯಾಗುವುದು, ಸುಸ್ಥಿರ ಅಭಿವೃದ್ಧಿಯ ಲಕ್ಷಣವಾಗುವುದಿಲ್ಲ.

3. ಅಂತರ್ ತಲೆಮಾರುಗಳ ದೃಷ್ಟಿಕೋನ:

ಉತ್ಪಾದನೆಯ, ಅಭಿವೃದ್ಧಿಯ ಲಾಭ ಇಂದು ಮಾತ್ರವಲ್ಲ, ಮುಂದೂ, ಎಂದೆಂದಿಗೂ ನಿರಂತರವಾಗಿ ಮುಂಬರುವ ತಲೆಮಾರುಗಳಿಗೆಲ್ಲಾ ಲಭ್ಯವಾಗುತ್ತಿರಬೇಕೆನ್ನುವುದೇ ಸುಸ್ಥಿರ ಕೃಷಿಯ ಮೂಲತತ್ವವಾಗಿರುತ್ತದೆ. ಇಲ್ಲಿ ಮುಂಬರುವ ತಲೆಮಾರುಗಳೆಂದರೆ, ಯಾವುದೋ ಅಸ್ಪಷ್ಟ ಜನಾಂಗಗಳ ಕಲ್ಪನೆಯಲ್ಲ. ಬದಲಿಗೆ, ನಾವೇ ವಯಸ್ಸಾಗಿ, ನಮ್ಮ ಮಕ್ಕಳು, ಮರಿಮಕ್ಕಳೂ,ಸುಖ, ಸಂತಸ, ಸಮೃದ್ಧಿಯಿಂದಿರಬೇಕೆನ್ನುವ ಆಶಯ. ಈ ಕೆಳಗಿನ ಕೆಲವು ಉದಾಹರಣೆಗಳಿಂದ, ಅಂತರ್ ತಲೆಮಾರುಗಳ ದೃಷ್ಟಿಕೋನ, ಸುಸ್ಥಿರ ಕೃಷಿ ಅಭಿವೃದ್ಧಿಯಲ್ಲಿ ಎಷ್ಟು ಮಹತ್ವದ್ದಾಗಿರುತ್ತದೆ ಎಂಬುದು ಅರಿವಾಗುತ್ತದೆ.



1) ರಸಾಯನಿಕಗಳ ಸತತ ಬಳಕೆಯಿಂದ 'ನೆಲದ' ಚೈತನ್ಯವನ್ನು ಬರಡುಮಾಡಿ ಅದರ ರಚನೆ, ಗುಣ ಲಕ್ಷಣಗಳನ್ನು ಹಾಳುಮಾಡಿ, ಅದರಲ್ಲಿ ನೆಲೆಸಿರುವ ಸಹಸ್ರಾರು ಸೂಕ್ಷ್ಮಾಣುಗಳು, ಎರೆಹುಳಗಳ ನಾಶ ಮಾಡಿ ಇಂದು ಮಾತ್ರ ಪಡೆಯುವ ಬೆಳೆ, ಲಾಭ ಮುಂದೂ ದೊರೆಯಬಹುದೆ? ಅದರ ವೆಚ್ಚ ಏರಲಾರದೆ?

2) ಇದೇ ರೀತಿ ಈ ಹಿಂದೆ ಚರ್ಚಿಸಿರುವಂತೆ ನಮ್ಮ ನಾಟಿ ತಳಿಗಳ ನಾಶ ಮತ್ತು ಅದರ ಮುಂದಿನ ಪರಿಣಾಮ.

3) ನೂರಾರು ಅಡಿಗಳಷ್ಟು ಆಳದಲ್ಲಿದ್ದ ನೀರನ್ನು ಹೀರಿ, ಅತೀ ಜಲ ಬೇಡುವ ರೇಶ್ಮೆ, ಬತ್ತ, ಕಬ್ಬುಗಳನ್ನು ಒಂದು ಪ್ರದೇಶದಲ್ಲಿ ಎಲ್ಲಿಯವರೆಗೆ ಬೆಳೆಯಲು ಸಾಧ್ಯ? ಹಾಗೆ, ನಾಲೆ ನೀರಾವರಿ ಆಶ್ರಯದಲ್ಲಿ 'ನಿಂತ ನೀರಿನ ' ಬತ್ತದಂತಹ ಬೆಳೆಗಳ ಬೇಸಾಯಕ್ಕೆ ಕೊನೆ ಹತ್ತಿರವಾಗುತ್ತಿಲ್ಲವೆ?

4) ಗ್ರಾಮೀಣ ವ್ಯವಸ್ಥೆಯಲ್ಲಿ ಅನಾದಿಕಾಲದಿಂದಲೂ ಕೃಷಿ ಉತ್ಪಾದನೆಯ ಬೆನ್ನೆಲುಬಾಗಿದ್ದ ಗೋಮಾಳ, ಅರಣ್ಯ, ಕೆರೆ, ಕಟ್ಟೆ, ಕಾಲುವೆ ಇವುಗಳ ರಚನೆ ಇಂದು ನಾಶವಾಗುತ್ತಿರುವಾಗ ನಮ್ಮ ಕೃಷಿ ವ್ಯವಸ್ಥೆಗೆ ಭವಿಷ್ಯ ಇದೆಯೆ?

5) ನಮ್ಮ ಕೃಷಿ ಉತ್ಪಾದನೆ ಹೊರಗಿನ ವಸ್ತುಗಳಾದ ರಸಗೊಬ್ಬರ, ಕ್ರಿಮಿ, ಕೀಟ, ಕಳೆನಾಶಕಗಳು, ಡೀಸಲ್ ಎಣ್ಣೆ, ವಿದ್ಯುಚ್ಛಕ್ತಿ ಇತ್ಯಾದಿಗಳ ಮೇಲೆ ಅತಿಯಾಗಿ ಅವಲಂಬಿತವಾದಲ್ಲಿ, ಇವುಗಳ ಪೂರೈಕೆ ಮುಂದೆ ನಿರಂತರವಾಗಿ ಆಗುತ್ತದೆ ಹಾಗೇ ಇವುಗಳ ಬೆಲೆ ರೈತರ ಕೈಗೆಟುಕುವ ಮಟ್ಟದಲ್ಲಿ ಇರುತ್ತದೆ ಎನ್ನಲು ಯಾವ ಭರವಸೆ ಇದೆ?

ಈ ಎಲ್ಲಾ ಹಿನ್ನೆಲೆಯಲ್ಲಿ ಯೋಚಿಸಿದಾಗ ಸುಸ್ಥಿರ ಕೃಷಿ ಈ ಕೆಳಗಿನ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1) ಉತ್ಪಾದಕತೆಯನ್ನು ಸತತವಾಗಿ ಹೆಚ್ಚಿಸುತ್ತಿರಬೇಕು.

2) ಆದರೆ ಉತ್ಪಾದನಾ ವೆಚ್ಚ ಏರದಂತೆ ಜಾಗರೂಕವಾಗಿರಬೇಕು.

3) ಅದು ಜನರ ಜೀವನಾವಶ್ಯಕ ವಸ್ತುಗಳನ್ನು ಮೊದಲು ಸಂಪೂರ್ಣ ಪೂರೈಸುವಂತಾಗಬೇಕು.

4) ಈ ಜೀವನಾವಶ್ಯಕ ಕೃಷಿ ಉತ್ಪನ್ನಗಳು ಎಲ್ಲರ ಕೈಗೆಟುಕುವಂತಾಗಬೇಕು. ಬೆಲೆ ಮಿತವಾಗಿದ್ದು,ಅವುಗಳು ಆರೋಗ್ಯಪೂರ್ಣವಾಗಿರಬೇಕು.

5) ಇದು ಕೃಷಿಯ ಮೇಲೆ ನೇರವಾಗಿ ಮತ್ತು ಪರೋಕ್ಷವಾಗಿ ಅವಲಂಬಿತವಾಗಿರುವ ಎಲ್ಲ ಗ್ರಾಮೀಣ ಜನರ ಹಿತ ಕಾಯುವಂತಿರಬೇಕು. ಅಂದರೆ ರೈತರಿಗೆ ಅಧಿಕ ಆದಾಯ, ಕೃಷಿ

ಕಾರ್ಮಿಕರಿಗೆ ಉದ್ಯೋಗ, ಒಳ್ಳೆ ಕೂಲಿ ದೊರಕಿಸುವಂತಾಗಬೇಕು. ಜೊತೆಗೆ ಕೃಷಿ ಉತ್ಪಾದನೆಯ ಮೇಲೆ ಹೊಂದಿಕೊಂಡಿರುವ ಬಡಗಿ, ಕಮ್ಮಾರ, ನೇಕಾರ ಇತ್ಯಾದಿ ಗ್ರಾಮೀಣ ಕಸುಬುದಾರರಿಗೆ ಉದ್ಯೋಗ ಭರವಸೆಯನ್ನು ಕಾಯ್ದುಕೊಂಡು ಬರಬೇಕು.

6) ರೈತ ಮಹಿಳೆಯರು, ಮಹಿಳಾ ಕಾರ್ಮಿಕರು ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದರಿಂದ ಅವರ ವೇತನ, ಸ್ಥಿತಿಗತಿಗಳನ್ನು ಅವರುಕೆಲಸ ಮಾಡುವ ವಾತಾವರಣದ ಬಗ್ಗೆ ಚಿಂತಿಸಬೇಕಾಗುತ್ತದೆ. ಮಿಗಿಲಾಗಿ ಅವರು ಉತ್ಪಾದನೆಯಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ ಪ್ರಮುಖ ಸ್ಥಾನ ವಹಿಸುವಂತಿರಬೇಕು. ತಳಿ ಆಯ್ಕೆ, ಆಹಾರದ ಪೌಷ್ಠಿಕಾಂಶತೆ, ಅಂತರ್ ಜಲದ ಬಳಕೆ ಇತ್ಯಾದಿ ವಿಚಾರಗಳು ಮಹಿಳೆಯರಿಗೇ ಹೆಚ್ಚು ಸಂಬಂಧಿಸಿರುವುದರಿಂದ ಅವರ ನಿರ್ಧಾರ ಇಲ್ಲಿ ಅತ್ಯಂತ ಮಹತ್ವದ್ದಾಗಿರುತ್ತದೆ.

7) ಸುಸ್ಥಿರ, ಕೃಷಿ, ಉತ್ಪಾದನೆ ಎಂಬುದು ಆಂತರಿಕವಾಗಿ ಸುಲಭವಾಗಿ, ಅಲ್ಪ ವೆಚ್ಚದಲ್ಲಿ ನಿರಂತರವಾಗಿ ದೊರಕುವ ಸಂಪನ್ಮೂಲಗಳ ಮೇಲೆ ಹೆಚ್ಚು ಅವಲಂಬಿತವಾಗಿರುತ್ತದೆ. ಉದಾಹರಣೆಗೆ ಕೊಟ್ಟಿಗೆ ಗೊಬ್ಬರ, ಮಳೆ ನೀರು, ಜಾನುವಾರುಗಳ ಶ್ರಮ, ಸೌರಶಕ್ತಿ ಇತ್ಯಾದಿಗಳು.

8) ಸುಸ್ಥಿರ ಕೃಷಿ ಉತ್ಪಾದನೆಯಲ್ಲಿ ಸಂಪನ್ಮೂಲಗಳ ಬಳಕೆ ಮಾಡುವಾಗ ಅನ್ಯರಿಗೆ, ಪರಿಸರಕ್ಕೆ ಇತರ ಪ್ರಾಣಿ, ಪಶು, ಪಕ್ಷಿ ಜೀವಜಂತುಗಳಿಗೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಅಪಾಯ ಬರುವಂತಾಗಬಾರದು.

9) ಕೃಷಿ ಉತ್ಪಾದನೆಯ ಅವಿಭಾಜ್ಯ ಅಂಗಗಳಾದ ನೆಲ, ನೀರು, ಪರಿಸರಗಳ ಸಂರಕ್ಷಣೆಯಾಗುವುದಷ್ಟೇ ಅಲ್ಲ ಅವುಗಳ ಗುಣ, ಲಕ್ಷಣ, ಒಟ್ಟಾರೆ ಉತ್ಪಾದಕ ಶಕ್ತಿ ವೃದ್ಧಿಯಾಗುವಂತಿರಬೇಕು.

10) ಕೃಷಿ ಅಭಿವೃದ್ಧಿಗೆ ಸದೃಢತೆ ಒದಗಿಸುವ 'ಜೀವ ವೈವಿಧ್ಯತೆ'- ಜಾನುವಾರು, ವೃಕ್ಷ, ಸಸ್ಯ, ಜೀವಜಂತುಗಳ ತಳಿ, ಪ್ರಭೇದ, ವಿಭೇದಗಳೆಲ್ಲವೂ ಈ ಉತ್ಪಾದನಾ ಪ್ರಕ್ರಿಯೆಯಲ್ಲಿ ಸಂರಕ್ಷಣೆಯಾಗುವುದು ಮಾತ್ರವಲ್ಲ ಅವು ಸತತವಾಗಿ ವೃದ್ಧಿಯಾಗುವಂತಿರಬೇಕಾಗುತ್ತದೆ.

ನಮ್ಮ ಕೃಷಿ ಅಭಿವೃದ್ಧಿ ಪರಿಕಲ್ಪನೆಯೇ ಇಂದು ಸಂಕುಚಿತ ಗೊಂಡಿದ್ದು ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು ಆಯೋಜಕರೂ ಇಂದು ಇದನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸಿಕೊಳ್ಳುತ್ತಿರುವಾಗ ''ಸುಸ್ಥಿರ ಕೃಷಿ ಅಭಿವೃದ್ಧಿ''ಯ ಮೇಲಿನ ಲಕ್ಷಣಗಳು ಅಸಾಧ್ಯ ಎನಿಸಬಹುದು ಅಥವಾ ಹಾಸ್ಯಾಸ್ಪದವೂ, ವಿರೋಧಾಭಾಸವೂ ಎನಿಸಬಹುದು. ಒಂದು ಪ್ರಗತಿದಾಯಕ, ಹೊಸಕಲ್ಪನೆಗೆ ಇದು ಸಹಜವಾದದ್ದೇ. ಆದರೆ, ಈ ಕೆಳಗಿನ ಅಂಶಗಳನ್ನು ಗಮನಿಸಿದಲ್ಲಿ, ಸುಸ್ಥಿರ ಅಭಿವೃದ್ಧಿಯ ಮೇಲಿನ ಟೀಕೆ ಕೆಲಮಟ್ಟಿಗೆ ತಿಳಿಯಾಗಬಹುದು.

1) ಸುಸ್ಥಿರ ಕೃಷಿ ಅಭಿವೃದ್ಧಿಗೆ ವಿಜ್ಞಾನದಷ್ಟೇ ಆಚಾರ, ವಿಚಾರ,ನಂಬಿಕೆ, ಕಾಯಿದೆ, ಕಟ್ಟಲೆಗಳು ಇತ್ಯಾದಿ ಸಾಮಾಜಿಕ ಮತ್ತು ಸಾಂಸ್ಕೃತಿಕ "ಸಂಸ್ಥೆಗಳೂ" (INSTITUTIONS) ಅತ್ಯಗತ್ಯವಾಗಿರುತ್ತದೆ.

2) ಇದು ಮನುಷ್ಯ ಕೇಂದ್ರೀಕೃತವಾಗಿದ್ದು, ರೈತಸಮುದಾಯದ ಸಂಪೂರ್ಣ ಸಹಭಾಗತ್ವದಿಂದ ಅಭಿವೃದ್ಧಿ ಸಾಧಿಸುವಂತಹದೇ ಹೊರತು, ತಂತ್ರಜ್ಞಾನ ಕೇಂದ್ರೀಕೃತವಾಗಿದ್ದು, ಆತನನ್ನು ಬದಿ ತಳ್ಳುವಂತಹದ್ದಲ್ಲ.

3) ಇದರ ಉದ್ದೇಶ ಕೃಷಿಯನ್ನು ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ನಂಬಿದ ಎಲ್ಲರ ಹಿತಕಾಯುವುದೇ ಹೊರತು ಬರಿದೇ ಭೂ ಒಡೆಯರ ಲಾಭಾಂಶ ಹೆಚ್ಚಿಸುವುದಲ್ಲ.

4) ಇದರ ಪ್ರಾಯೋಗಿಕ ಅಥವಾ ಅನ್ವಯಕ "ಘಟಕ" (UNIT) ವಿಸ್ತೃತವಾದ ಒಂದು ''ಕೃಷಿ ಪರಿಸರ ವ್ಯವಸ್ಥೆ'' [AGRO ECO SYSTEM] ಉದಾ: ಒಂದು ಗ್ರಾಮ ಅಥವಾ ಒಂದು ಜಲಾಯನ ಪ್ರದೇಶವೇ ಹೊರತು ಸಂಕುಚಿತ ಹೊಲ ಅಥವಾ ಫಾರಂ ಅಲ್ಲ. ಅಂದರೆ, ಸುಸ್ಥಿರ ಕೃಷಿ ಎಂಬುದು ಒಂದು ಜಲಾನಯನ ಪ್ರದೇಶದ ಎಲ್ಲಾ ಭೂಮಿಯ ಉತ್ಪಾದನೆ ಹೆಚ್ಚಿಸುವಂತಹದ್ದು ಅಥವಾ ಒಂದು ಗ್ರಾಮದ ಎಲ್ಲಾ ಜನರ ಆದಾಯ, ಲಾಭ ಹೆಚ್ಚಿಸುವಂತಹದ್ದೇ ಹೊರತು ಒಬ್ಬ ರೈತನ ಬರಿದೇ ಒಂದು ಬೆಳೆ, ಆತನ ಹೊಲ ಅಥವಾ ಫಾರಂನ ಆದಾಯ ವೃದ್ಧಿ ಪಡಿಸುವಂತಹದ್ದಲ್ಲ.

5) ಇದರ ಗುರಿ ಕೆಲವರ ಇಂದಿನ ಹಿತ ಕಾಯುವುದು ಮಾತ್ರ ಅಲ್ಲ. ಬದಲಿಗೆ ಎಲ್ಲರ ಇಂದು-ಮುಂದಿನ ಹಿತ ಕಾಪಾಡುವಂತಹದ್ದು.

ಈ ಎಲ್ಲ ಹಿನ್ನೆಲೆಗಳಲ್ಲಿ ಹಿತ್ತಲಗಿಡ ವಿವಿಧ ವಿಚಾರಗಳನ್ನು ಚರ್ಚೆಗೆ ಎತ್ತಿಕೊಳ್ಳುತ್ತಲಿದ್ದು, ಆ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿಯ ಸಾಧ್ಯತೆಗಳನ್ನು ಪರಿಶೀಲಿಸಲಿದೆ.

ದೇಶೀಯ ಶೇಖರಣಾ ವಿಧಾನಗಳು

ಅರುಣ ಕುಮಾರ ವಿ.ಕೆ.

ರೈತರೇ ಅನುಸರಿಸಿಕೊಂಡು ಬಂದಿರುವ ವಿವಿಧ ರೀತಿಯ ಧಾನ್ಯ, ಬೀಜ ಶೇಖರಣೆ ಪದ್ಧತಿಗಳು ನಮ್ಮ ಮುಂದೆ ವಿವಿಧ ಸಾಧ್ಯತೆಗಳನ್ನು ತೆರೆದಿಟ್ಟಿವೆ. ಅವರು ಬಳಸುವ ಬೇವಿನಸೊಪ್ಪು, ಲಕ್ಕಿ ಸೋಪ್ಪು, ಮುಂಡುಗದಕಾಯಿ ಸ್ಥಳೀಯವಾಗಿ, ನಿರಂತರವಾಗಿ ದೊರಕುವಂತಹವು. ವೆಚ್ಚದ ದೃಷ್ಟಿಯಿಂದಲೂ ಇವು ಅತ್ಯಲ್ಪ ಎಂದರೆ ತಪ್ಪಾಗಲಾರದು. ಮಿಗಿಲಾಗಿ ಇವುಗಳ ಬಳಕೆಯಿಂದ ಯಾವುದೇ ರೀತಿಯ ಪರಿಸರ ಮಾಲಿನ್ಯ ಆಗಲೀ ಆಹಾರದ ಮಲಿನತೆಯಾಗಲೀ ಆಗದು ಬತ್ತ, ರಾಗಿ, ತೊಗರಿ, ಅವರೆ, ಜೋಳ, ಈ ಧಾನ್ಯಗಳ ಹಾಗೇ ಹಾಗಲ ಬೀಜ ಇವುಗಳು ಕೆಡದಂತಿಡುವ ಕೆಲ ನಾಟಿ ತಂತ್ರಗಳನ್ನು ಈ ಮುಂದೆ ಕೊಡಲಾಗಿದೆ.

ಆಹಾರ ಧಾನ್ಯಗಳಿಗೆ ಹುಳ ಬರದಂತೆ ನಮ್ಮ ರಾಜ್ಯದ ವಿವಿದೆಡೆಗಳಲ್ಲಿ ಅನುಸರಿಸುತ್ತಿರುವ ವಿವಿದ ನಾಟಿ ಪದ್ಧತಿಗಳ ಒಂದು ಸಮೀಕ್ಷೆ :



ಬತ್ತ :

1) ಲಕ್ಕಿ ಸೊಪ್ಪು (ನಕ್ಕಲಿ ಸೊಪ್ಪು) ಅಥವಾ ಮುತ್ತಗದ ಹೂವು ಅಥವಾ ಕಣಗಿಲ ಹೂವನ್ನು ಬತ್ತದ ಕಣಜದಲ್ಲಿ ಬೆರಿಸಿ ಇಟ್ಟರೆ ಹುಳು ಹತ್ತುವುದಿಲ್ಲ. (ಶಿವಮೊಗ್ಗ)

2) ಮುಂಡುಗದ ಕಾಯಿಯನ್ನು ಬತ್ತದಲ್ಲಿ ಬೆರಿಸಿಟ್ಟರೆ ಹುಳು ಬರದು. (ಶಿವಮೊಗ್ಗ)

3) ಲಕ್ಕಿ ಸೊಪ್ಪು ಅಥವಾ ಬೇವಿನೆಲೆಯನ್ನು ಬತ್ತದಲ್ಲಿ ಬೆರಿಸಿಟ್ಟರೆ ಹುಳ ಹತ್ತುವುದಿಲ್ಲ. (ಗೌರಿಬಿದನೂರು)

ರಾಗಿ :

1) ರಾಗಿ ಕಾಳು ತುಸು ಬೆಳ್ಳಗೆ ಅಗುವವರೆಗೆ ಸುಣ್ಣವನ್ನು ಲೇಪಿಸಿಟ್ಟರೆ ಹುಳ ಹತ್ತಿರ ಬರುವುದಿಲ್ಲ. (ಪೆನುಗೊಂಡ ಸಮೀಪ)

2) ಒಂದು ಹಿಡಿ ತುಂಬೆ ಹೂವನ್ನು ರಾಗಿ ಮೂಟೆಯಲ್ಲಿ ಬೆರಿಸಿ ಇಡಿ. ಹುಳ ಹಿಡಿಯದು.

ಜೋಳ :

ಬೇವಿನ ಸೊಪ್ಪು ಮತ್ತು ಉಪ್ಪನ್ನು ಜೋಳದಲ್ಲಿ ಬೆರೆಸಿಟ್ಟರೆ ಹುಳ ಬರದು. (ಸಾಮಾನ್ಯ ವಾಡಿಕೆ)

ತೊಗರಿ ಅವರೆ :

1) ಇಸುಂದಾರಿ (Clerodendron inerme) ಲಕ್ಕಿ ಸೊಪ್ಪು ಮತ್ತು ಒಂದು ಹಿಡಿ ಮೆಣಸಿನಕಾಯಿ ಇವುಗಳನ್ನು ಬೀಜಕ್ಕೆ ಉಪಯೋಗಿಸುವ ತೊಗರಿ, ಅವರೆ, ಉದ್ದುಗಳಲ್ಲಿ ಬೆರಸಿ ಇಟ್ಟರೆ ಹುಳು ಹತ್ತುವುದಿಲ್ಲ.

2) ಅವರೆ, ತೊಗರಿ ಬೀಜಗಳನ್ನು ತೇವವಿರುವ ಕೆಂಪು ಮಣ್ಣಿನಲ್ಲಿ ಕಲಸಿ ಬಳಿಕ ತೇವ ಆರುವವರೆಗೂ ಬಿಸಿಲಿನಲ್ಲಿ ಒಣಗಿಸಿ ಶೇಖರಿಸಿದರೆ ಹುಳುವಿನ ಹಾವಳಿ ಇರದು.

3) ಹಳದಿ ಬಣ್ಣದ ಹಿಂಡ್ಲೆಚ್ಚಕಾಯಿ (ಬಳ್ಳಿಯಲ್ಲಿ ಆಗುವ ಕಾಯಿ, ತುಂಬಾ ಕಹಿ) ಬೀಜಕ್ಕೆ ಉಪಯೋಗಿಸುವ ತೊಗರಿಯಲ್ಲಿ ಇಟ್ಟರೆ ಹುಳದ ಬಾಧೆ ಕಡಿಮೆಯಾಗುತ್ತದೆ. (ಸಣ್ಣಯ್ಯ, ನರಸೀಪುರ)

4) ಬತ್ತದ ಹೊಟ್ಟಿನ ರಾಶಿಗೆ ಸ್ವಲ್ಪ ಬೆಂಕಿ ಹತ್ತಿಸಿ. ಮೇಲೆ ಕರಿಯ ಹೊದಕೆಯನ್ನು ಹೊದ್ದಿರುವ ಬತ್ತದ ಹೊಟ್ಟಿನ ರಾಶಿ ಒಳಗಡೆ ಬಿಳಿಯ ಬೂದಿಯನ್ನು ಹೊಂದಿರುತ್ತದೆ. ಈ ಬೂದಿಯನ್ನು ಹೆಸರುಕಾಳು, ಉದ್ದು, ತೊಗರಿಗೆ ಕೊಯಿಲಾದ ನಂತರ ಸೇರಿಸಿ, ಹಾಕಿಟ್ಟರೆ ಹುಳ ಹಿಡಿಯುವುದಿಲ್ಲ. (ಕೊರಂಬಳ್ಳಿಯ ಮುದುಕರೊಬ್ಬರು)

ರೈತ ಅನುಶೋಧನೆಗಳು


ಶಿವರಾಜ್,ಕೆ.

ನಮ್ಮ ವಿದ್ಯಾವಂತ ಪ್ರಗತಿಪರ ರೈತರು ಕಂಡುಹಿಡಿದ ತಂತ್ರಜ್ಞಾನಗಳಂತೂ ರೈತ ಸಮುದಾಯದ ಅನ್ವೇಷಣಾ ಶಕ್ತಿಗೆ ಸಾಕ್ಷಿಗಳಾಗಿವೆ. ನಮ್ಮ ಕರಾವಳಿ ಪ್ರಾಂತ್ಯದ ಅಡಿಕೆ, ತೆಂಗು ಬೆಳೆಗಾರರು ಸದಾ ಸಂಶೋಧನಾ ಪ್ರವೃತ್ತಿಯವರಾಗಿದ್ದು, ಅವರ ಅಗತ್ಯಕ್ಕೆ ಅನುಗುಣವಾಗಿ, ಸುಲಭ ವಿನ್ಯಾಸದಿಂದ ರಚಿಸಿರುವ ಮೂರು ಕೃಷಿ ಉಪಕರಣಗಳನ್ನು ಈ ಮುಂದೆ ಕೊಡಲಾಗಿದೆ. ಈ ಯಂತ್ರೋಪಕರಣಗಳನ್ನು ವಿನ್ಯಾಸ ಮಾಡುವಾಗ ಅತ್ಯಂತ ಸೂಕ್ಷ್ಮವಾದ ಅಗತ್ಯಗಳನ್ನೂ ಕೂಡ ಅವರು ಗಮನದಲ್ಲಿಡುತ್ತಾರೆ. ಉದಾಹರಣೆಗೆ ಅಡಿಕೆ ತೋಟಗಳಲ್ಲಿ ಮರದಿಂದ ಬಿದ್ದಂತಹ ಅಡಿಕೆ ಸೋಗೆಯನ್ನು ಹಾಳೆಯಿಂದ ಬೇರ್ಪಡಿಸುವುದು ಸಾಮಾನ್ಯ ಪದ್ಧತಿ. ಇದನ್ನು ಕಡಿಯಲು ಬಳಸುವ ಮರದ ಮೂರು ಕಾಲಿನ ಸಾಧನ ಪ್ರತಿವರ್ಷವೂ ಕಡಿತದ ಹೊಡತಕ್ಕೆ ಸವೆಯುವುದು ಸಾಮಾನ್ಯ. ಇದನ್ನು ಗಮನಿಸಿ ಇಬ್ಬರು ರೈತರು ರಚಿಸಿದ ಸ್ಟಾಂಡ್‌ಗಳು ಸರಳವೂ ಅಷ್ಟೇ ಪರಿಣಾಮಕಾರಿಯಾಗಿಯೂ ಇವೆ. ಉದಾರೀಕರಣ, ಗ್ಯಾಟ್ ಒಪ್ಪಂದಗಳ ಅಡಿಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಅಥವಾ ನಮ್ಮಲ್ಲಿನ ದೊಡ್ಡ ಕಂಪೆನಿಗಳ ಅನ್ವೇಷಣೆಗಳ 'ಭೌದ್ಧಿಕ ಸನದ್ದಿನ ಹಕ್ಕಿನ' (Intellectual Property Rights) ಬೆಲೆ ಕಟ್ಟುವ ಅವಕಾಶ ಇದೆ. ಆದರೆ ರೈತ ಮೂಲದ ಇಂತಹ ಅನ್ವೇಷಣೆ ಗಳನ್ನು ಕೂಡಾ ಬೆಲೆ ಕಟ್ಟಿ, ಅದರ ಫಲ ಅವರಿಗೆ ತಲುಪುವಂತೆ ಮಾಡುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರ ಹುಡುಕಬೇಕಾಗಿದೆ.

1) ಸೋಗೆ ಕಡಿಯಲು 'ಸೋವಿ ಸ್ಟಾಂಡ್' :

ಶಿರಸಿಯ ಸುತ್ತಮುತ್ತ ಅಡಿಕೆ ಸೋಗೆ ಕಡಿಯಲು ಮೂರು ಕಾಲಿರುವ ಮರ (ಹಸೆಬಂಟ ಅಥವಾ ಬಂಟಮಣೆ)ವನ್ನು ಬಳಸುತ್ತಾರೆ. ಇದು ಬಹು ಬೇಗ ಸವೆದು ಮತ್ತು ಮರ ಕಡಿಯುವ ತೊಂದರೆಯನ್ನು ತಪ್ಪಿಸಲು ಪುಟ್ಟನ್ಮನೆ ಕೃಷಿಕ ರವಿ ಹೆಗಡೆ ಸರಳವಾದ ಸ್ಟಾಂಡನ್ನು ತಯಾರಿಸಿಕೊಂಡಿದ್ದಾರೆ.


ಈ ಉಪಕರಣ ಮುಂಚಿನ 'ಹಸೆಬಂಟ'ದ ತತ್ವವನ್ನು ಒಳಗೊಂಡಿದ್ದು ಇದರಲ್ಲಿ ಕಡಿಯುವ ಬಾಗ ಮಾತ್ರ ಮರದ್ದಾಗಿ, ಉಳಿದದ್ದು ಹೆಚ್ಚು ಬಾಳಿಕೆ ಬರುವ ಕಬ್ಬಿಣದ್ದಾಗಿದೆ. ಇಲ್ಲಿ ಮೂರು ಕಾಲುಗಳಿಗೆ ಮುಕ್ಕಾಲು ಇಂಚು ವ್ಯಾಸ 23 ಇಂಚು ಉದ್ದದ ಪೈಪನ್ನು ಬಳಸಿಕೊಳ್ಳಲಾಗಿದೆ. ನಂತರ, ಈ ತ್ರಿಕೋನಾಕೃತಿಯ ಪೈಪುಗಳ ತಲೆಯನ್ನು ವೃತ್ತಾಕಾರದ 11 ಇಂಚು ಉದ್ದದ ಕಬ್ಬಿಣದ ಪಟ್ಟಿಗೆ ಜೋಡಿಸಲಾಗಿದೆ. ಮಧ್ಯದಲ್ಲಿ ಆಧಾರಕ್ಕೆಂದು ಕಬ್ಬಿಣದ ದಪ್ಪ ಸರಿಗೆಯ ವೃತ್ತವೂ ಇದೆ. ಅದೇ ದಪ್ಪ ಸರಿಗೆಯನ್ನು ಕೆಳಗೆ ಮೂರು ಕಾಲುಗಳಿಗೆ



ಒಂದ್ಕೊಂದು ಆಧಾರ ಮಾಡಿಕೊಳ್ಳಲೂ ಬಳಸಲಾಗಿದೆ. ಇಷ್ಟೇ ಈ ಉಪಕರಣದ ಬಿಡಿ ಭಾಗಗಳು. ನಮಗೆ ಬೇಕಾದ ಎತ್ತರದ ತುಂಡನ್ನು ಸ್ಟಾಂಡಿನಲ್ಲಿ ಸಿಕ್ಕಿಸಿಕೊಳ್ಳಬಹುದು. ಆ ತುಂಡು ತಲೆ 11 ಇಂಚಿಗಿಂತ ಉದ್ದವಾಗಿದ್ದರಾಯಿತು. 11 ಇಂಚು ಏಕೆಂದರೆ ತುಂಡು ಕತ್ತಿಯ ಹೊಡೆತ ಬಿದ್ದಾಗ ಪುಟಿಯಬಾರದೆಂದು. ವರ್ಷ ವರ್ಷ ಸವೆದರೆ ತುಂಡನ್ನು ಮಾತ್ರ ಬೇರೆ ಹಾಕಿಕೊಂಡರಾಯಿತು.

2) ಸೋಗೆ ಕೊಚ್ಚುವ ಇನ್ನೊಂದು ಮಿನಿ ಸ್ಟಾಂಡು :

ಶಿರಸಿ ತಾಲ್ಲೂಕು ಬೆಟ್ಟಕೊಪ್ಪದ ಕೃಷಿಕ ಎಸ್. ಜಿ. ಹೆಗಡೆ ವಿನ್ಯಾಸಗೊಳಿಸಿದ ಸ್ಟಾಂಡ್ ಮತ್ತಷ್ಟು ಸರಳವಾಗಿದ್ದು, ಇದರಲ್ಲಿ ಮರದ ತುಂಡನ್ನು ಹಿಡಿದುಕೊಳ್ಳಲು ಬಳಸುವ ಕಬ್ಬಿಣದ ಸ್ಟಾಂಡ್ ಚಿಕ್ಕದಾಗಿದ್ದು, ಸೋಗೆ ಕಡಿಯಲು ಬಳಸುವ ಮರದ ತುಂಡನ್ನು ಅಗತ್ಯಕ್ಕೆ ಬೇಕಾದಷ್ಟು ಉದ್ದಕ್ಕೆ ಬಳಸಬಹುದಾಗಿದೆ. ಇದು ತೋಟದಲ್ಲಿ ಅಲ್ಲಲ್ಲಿ ಸಾಗಿಸಲು ಸುಲಭವಾಗಿರುತ್ತದೆ. ಹಿಡಿಕೆ ಹಾಗೂ ಮರದ ತುಂಡುಗಳನ್ನು ಬೇರೆ ಮಾಡಿದರಂತೂ ಇನ್ನೂ ಅನುಕೂಲ. ಕೆಲಸದ ನಂತರ ಮನೆಯಲ್ಲಿ ಸ್ವಲ್ಪ ಜಾಗದಲ್ಲೇ ಸುಲಭವಾಗಿ



ಕೂಡಿಡಬಹುದಾಗಿದೆ. ಆದರೆ, ಈ ಸ್ಟಾಂಡನ್ನು ತೋಟದಲ್ಲಿ ಬಳಸುವಾಗ ಅದಷ್ಟು ಸಮತಟ್ಟಾದ ಜಾಗದ ಅಗತ್ಯ ಬರುತ್ತದೆ.

3) ಅಡಿಕೆ ಸುಲಿಯುವ ಯಂತ್ರ :

ಒಣ ಅಡಿಕೆ ಸುಲಿಯುವ ಯಂತ್ರಗಳಲ್ಲಿ ಚಿಕ್ಕ ಹಿಡುವಳಿದಾರನ ನಿರೀಕ್ಷೆಗೆ ತೀರಾ ಹತ್ತಿರವಾದ ಹಾಗೂ 2 - 3 ಹಿಡುವಳಿದಾರರು ಒಂದು ಗೂಡಿ ಕೊಳ್ಳಬಹುದಾದ ಬೆಲೆಯನ್ನು ಹೊಂದಿರುವ ಚಿಕ್ಕ ಯಂತ್ರ (ಸುಮಾರು 25 ಕಿಲೋ ಭಾರ) ವನ್ನು ವಿಟ್ಲದ ನರಸಿಂಹ ಭಟ್‌ರವರು 1991ರಲ್ಲಿ ಆವಿಷ್ಕರಿಸಿದ್ದಾರೆ. ಈ ಯಂತ್ರವು ನೂರರಲ್ಲಿ 80 ಅಡಿಕೆಯನ್ನು ಚೆನ್ನಾಗಿ ಸುಲಿಯುತ್ತದೆ. ಅಕಸ್ಮಾತ್ತಾಗಿ ಸಂಗ್ರಾಹಕದಲ್ಲಿ ಹಾಕಿದ ಅಡಿಕೆ ಹೆಚ್ಚಾಗಿ ಅಪ್ಪಿತಪ್ಪಿ ಎರಡೆರಡು ಅಡಿಕೆ ಇಳಿದು ಬಂತೆಂದರೆ ಹೆಚ್ಚುವರಿ ಅಡಿಕೆ ಸುಲಿಯಲ್ಪಡದೆ 'ಬೈಪಾಸ್' ಆಗಿ ಹೊರಬಂದು ಬೀಳುತ್ತದೆ. ಅಡಿಕೆಗೆ ಗಾಯಗಳಾಗುವುದಿಲ್ಲ. ಈ ಯಂತ್ರದ ಅನಾನುಕೂಲತೆಗಳೆಂದರೆ, ಅಡಿಕೆಗೆ ಒಣಸಿಪ್ಪೆ ಬಲವಾಗಿ ಅಂಟಿಕೊಂಡಿರುವಂತಹ 'ಉಳ್ಳಾಗಡ್ಡೆ'ಯನ್ನು ಈ ಯಂತ್ರ ಸುಲಿಯುವುದಿಲ್ಲ. ಪರಚಿ ಬಿಟ್ಟು ಬಿಡುತ್ತದೆ. ಅತಿ ಚಿಕ್ಕ ಅಡಿಕೆ, ಅಂದರೆ ಈ ಯಂತ್ರದ ರೋಲರ್ ವೀಲ್‌ಗಳ ನಡುವಣ ಎಡೆಯಷ್ಟು ತೀರಾ ಚಿಕ್ಕ ಅಡಿಕೆ ಹುಡಿಯಾಗುವುದಿದೆ.

ಹೆಚ್ಚಿನ ವಿವರಗಳಿಗೆ : ಎಸ್. ನರಸಿಂಹ ಭಟ್ಟ, ಅರಮನೆ ರಸ್ತೆ, ವಿಟ್ಲ, ದ. ಕ. (ಕೃಪೆ: ಅಡಿಕೆ ಪತ್ರಿಕೆ)

ಪ್ರಯೋಗಾಲಯ ಹೊಕ್ಕ ಹಿತ್ತಲಗಿಡ

ನಮ್ಮ ದೇಶೀಯ ಜ್ಞಾನ, ತಂತ್ರಜ್ಞಾನ ವ್ಯವಸ್ಥೆಗೆ, ಒಟ್ಟಾರೆ ನಮ್ಮ ಹಿತ್ತಲಗಿಡ ಪ್ರತಿಪಾದಿಸ ಹೊರಟಿರುವ ತತ್ವಗಳಿಗೆ ನಮ್ಮ ಕೃಷಿ ವಿಜ್ಞಾನಿಗಳು ಸ್ಪಂದಿಸುವಂತಾದಲ್ಲಿ ಎಂತಹಾ ಮಹತ್ವಪೂರ್ಣ ಫಲಿತಾಂಶ ಹೊರತರಲು ಸಾಧ್ಯ ಎನ್ನಲು ಈ ಮುಂದಿನ ಒಂದು ಪ್ರಯೋಗದ ಬಗೆಗಿನ ಲೇಖನವೇ ಸಾಕ್ಷಿಯಾಗಿರುತ್ತದೆ. ಇಂತಹ ಹೆಚ್ಚು ಹೆಚ್ಚು ಪ್ರಯೋಗಗಳು, ಸಂಶೋಧನೆಗಳು, ನಮ್ಮ ವಿಜ್ಞಾನಿ ಸಮುದಾಯದಿಂದ ಹೊರ ಬರುವಂತಾಗಲೆಂದು ಹಿತ್ತಲಗಿಡ ಹಾರೈಸುತ್ತದೆ.

ಹಸುಗಳಲ್ಲಿ ಗರ್ಭಧಾರಣೆಯ ಒಂದು ಸರಳ ಪರೀಕ್ಷೆ

ನಾಲ್ಕು ಸಾವಿರ ವರ್ಷಗಳಷ್ಟು ಹಿಂದೆಯೇ ಈಜಿಪ್ಟ್‌ನ ವೈದ್ಯರು ಗೋಧಿ ಮತ್ತು ಬಾರ್ಲಿ ಬೀಜಗಳನ್ನು ಹೆಂಗಸರ ಮೂತ್ರದ ಮೂಲಕ ಮೊಳಕೆ ಬರಿಸುವಂತಹ ಸರಳ ಪರೀಕ್ಷೆಯಿಂದ ಅವರಲ್ಲಿ ಗರ್ಭಧಾರಣೆ ಆಗಿದೆಯೆ ಮತ್ತು ಶಿಶು ಗಂಡೊ, ಹೆಣ್ಣೊ ಎಂಬುದನ್ನು ನಿರ್ಧರಿಸುವಂತಾಗಿದ್ದರು ಎಂದರೆ ಆಶ್ಚರ್ಯವಾಗುತ್ತದೆ. ಈ ತತ್ವವನ್ನು ಹಸುಗಳಿಗೆ ವಿಸ್ತರಿಸಿ, ಅವುಗಳಲ್ಲಿ ಗರ್ಭಧಾರಣೆಯನ್ನು ನಿರ್ಧರಿಸುವ ಕಾರ್ಯದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಇಬ್ಬರು ಪಶುವೈದ್ಯರಾದ ಡಾ. ವೀಣಾ ಮತ್ತು ಡಾ. ನರೇಂದ್ರನಾಥ್ ಯಶಸ್ಸು ಸಾಧಿಸಿದ್ದಾರೆ. ಅವರ ಸಂಶೋಧನೆಯ ಸಂಕ್ಷಿಪ್ತ ವಿವರ ಈ ರೀತಿ ಇದೆ: ಗಬ್ಬ ನಿಂತಿರುವ ಮತ್ತು ಗಬ್ಬ ವಿಲ್ಲದ, ಎರಡೂ ದನಗಳ ಮೂತ್ರವನ್ನು ಬೇರೆ ಬೇರೆಯಾಗಿ ತೆಗೆದುಕೊಂಡು ಅದರ ನಾಲ್ಕರಷ್ಟು ಪ್ರಮಾಣದ ನೀರು ಬೆರಸಿ, ಗೋಧಿ ಬೀಜಗಳನ್ನು ಹಾಕಿ ಮೊಳಕೆ ಬರಿಸಲಾಯ್ತು. ಗಬ್ಬದ ದನದ ಮೂತ್ರದಲ್ಲಿ ಶೇ. 50ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬೀಜಗಳು ಮೊಳಕೆ ಒಡೆದಿದ್ದರೆ, ಗಬ್ಬ ನಿಂತಿರದ ದನದ ಮೂತ್ರದಲ್ಲಿ ಈ ಪ್ರಮಾಣ ಶೇ. 75 ಕ್ಕಿಂತ ಅಧಿಕವಾಗಿತ್ತು. ಅದೇ ರೀತಿ, ಮೊಳಕೆ ಒಡೆದ ಸಸಿಯ ಕಾಂಡದ ಉದ್ದ ಗಬ್ಬ ನಿಂತಿರದ ದನದ ಮೂತ್ರದ ಗುಂಪಿನಲ್ಲಿ ಸರಾಸರಿ 4 ಸೆಂ. ಮೀಟರ್ ಇದ್ದರೆ, ಗಬ್ಬದ ದನಗಳ ಮೂತ್ರದ ಮೂಲಕ ಬೆಳೆದ ಸಸಿಗಳಲ್ಲಿ ಒಂದು ಸೆಂಟಿ ಮೀಟರ್ ಉದ್ದವೂ ಇರಲಿಲ್ಲ. ಅಂದರೆ ಗಬ್ಬ ನಿಂತಿರುವ ಹಸುಗಳ ಮೂತ್ರದಲ್ಲಿ ಬೀಜ ಮೊಳಕೆ ಒಡೆಯುವುದನ್ನೂ ಹಾಗೇ ಸಸಿಯ ಕಾಂಡ ಬೆಳೆಯುವುದನ್ನೂ ತಡೆಯುವ ಶಕ್ತಿ ಇದೆ ಎಂದಾಯ್ತು.

31ನೇ ಪುಟಕ್ಕೆ

ಜೀವ ವೈವಿಧ್ಯತೆ ಮತ್ತು ಸುಸ್ಥಿರ ಕೃಷಿ



ಜೀವ ವೈವಿಧ್ಯತೆ ಮತ್ತು ಸುಸ್ಥಿರ ಕೃಷಿಗಳ ನಡುವಿನ ಕೊಂಡಿ ಈಗ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಲಿದೆ. ಇದು ಹೊರಗಿನ ಆಘಾತ, ಒತ್ತಡಗಳ ವಿರುದ್ಧ ಇಂದಿನ ಕೃಷಿ ಉತ್ಪಾದನೆಗೆ ರಕ್ಷಣೆ ಕೊಟ್ಟರೆ, ಮುಂದಿನ ತಲೆಮಾರಿಗೆ ಜ್ಞಾನ ಮತ್ತು ಮಾಹಿತಿಗಳನ್ನು ಜೀವಂತವಾಗಿ ಕಾಪಾಡಿಡುತ್ತದೆ. ಮಿಗಿಲಾಗಿ ನಿರಂತರ ಕೃಷಿ ಅಭಿವೃದ್ಧಿಗೆ ಹೊಸ ಹೊಸ ತಳಿಗಳನ್ನು ಸೃಷ್ಟಿ ಮಾಡುವಲ್ಲಿ, ಆಧುನಿಕ ತಂತ್ರಗಳಿಂದ ಅಂಗಾಂಶ ಕೃಷಿ, ಜೈವಿಕ ತಂತ್ರಜ್ಞಾನಗಳ ಬಳಕೆಗೆ ಅಗತ್ಯವಾದ ವಂಶವಾಹಿನಿಗಳ (Genes)ನ್ನು ಅವುಗಳ ವೈವಿದ್ಯತೆಯನ್ನು ಸದಾ ಕಾಪಾಡಿಡುವಂತೆ ಮಾಡುತ್ತದೆ. ಹೀಗೆ ಮನುಕುಲದ ಉಳಿವಿಗೆ ಏಳಿಗೆಗೆ ಅನಿವಾರ್ಯವಾದ ಈ ಜೀವ ವೈವಿಧ್ಯತೆಯ ಸಂರಕ್ಷಣೆಯ ಕ್ರಮ ಹೇಗೆ ಎಂದು ಇಂದು ಅವಶ್ಯಕವಾಗಿ ಚಿಂತಿಸಬೇಕಾಗಿದೆ.

ಸ್ಥಳೀಯವಾಗಿ ಆಯಾ ಪರಿಸರದಲ್ಲೇ ವಿವಿಧ ಸಸ್ಯ ತಳಿಗಳ ರಕ್ಷಣೆಯಾದಲ್ಲಿ ಅವುಗಳ ವಂಶವಾಹಿನಿಗಳೂ ಸಂಪೂರ್ಣ ರಕ್ಷಣೆಯಾಗುವುದು ಎಂಬುದು ವಿಜ್ಞಾನಿಗಳ ಅಭಿಮತ. ಆದರೆ ಎಲ್ಲೆಲ್ಲಿಂದಲೋ ಹುಡುಕಿ ತಂದು ಸಂಶೋಧನಾ ಕೇಂದ್ರಗಳಲ್ಲಿ 'ಜೀನ್ ಬ್ಯಾಂಕ್'ಗಳಲ್ಲಿಡುವ ಈಗಿನ ಕ್ರಮ ಈ ದೃಷ್ಟಿಯಿಂದ ಅಷ್ಟು ಸೂಕ್ತವಾಗಲಾರದು. ಈ ಹಿನ್ನೆಲೆಯಲ್ಲಿ, ರೈತ ಸಮುದಾಯದೊಳಗೆ ಉಳಿದುಕೊಂಡು ಬಂದಿರುವ ವಿವಿಧ ತಳಿಗಳತ್ತ ಅವಶ್ಯಕವಾಗಿ ಗಮನ ಹರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಎರಡು ಲೇಖನಗಳನ್ನು ಮುಂದೆ ಕೊಡಲಾಗಿದೆ.

ಮೊದಲನೇ ಲೇಖನದಲ್ಲಿ ಮಲೆನಾಡ ಪ್ರಾಂತ್ಯದ ಪ್ರಗತಿ ಪರ ರೈತರೊಬ್ಬರು, ಬೌದ್ಧಿಕ ಸನದ್ದಿನ ಹಕ್ಕಿನ ಪರಿವೆಯೇ ಇಲ್ಲದೇ, ಬರಿದೇ ಹವ್ಯಾಸಕ್ಕಾಗಿ 30 ವಿಧದ ಹಲಸಿನ ತಳಿಗಳನ್ನು ಸಂಗ್ರಹಿಸಿರುವ ವರದಿ ನೀಡಲಾಗಿದೆ. ಅಂದಮೇಲೆ, ಈ ಅಮೂಲ್ಯ ಜೀವ ವೈವಿಧ್ಯತೆಯ ರಕ್ಷಣೆ ಭಾರ ಯಾರ ಮೇಲೆ ಹಾಕುವುದು ಸೂಕ್ತ ಎಂಬ ಪ್ರಶ್ನೆಗೆ ಉತ್ತರ ಇದರಿಂದ ದೊರಕಿದಂತಾಗುತ್ತದೆ. ಈ ಪ್ರಶ್ನೆಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಎರಡನೇ ಲೇಖನದಲ್ಲಿ, ಅದೇ ಮಲೆನಾಡು ಪ್ರಾಂತ್ಯದಲ್ಲಿ, ಹಿತ್ತಲ ತರಕಾರಿ, ಕಾಯಿ ಪಲ್ಯೆಗಳ ನಾಟಿ ತಳಿಗಳ ಬೀಜ ವೈವಿಧ್ಯತೆಯನ್ನು ವರ್ಷಾನುಗಟ್ಟಲೆ ಜೋಪಾನವಾಗಿ ಕಾಪಾಡಿಕೊಂಡು ಬಂದಿರುವ ನಮ್ಮ ಗ್ರಾಮೀಣ ಮಹಿಳೆಯರತ್ತ ನೋಡಿದಾಗಲಂತೂ, ಪೂರ್ತಿ ಉತ್ತರ ದೊರಕಿದಂತಾಗುತ್ತಿದೆ. ಅನಾದಿ ಕಾಲದಿಂದಲೂ, ನಮ್ಮ ಮಹಿಳೆಯರು ನೈಸರ್ಗಿಕ ಸಂಪನ್ಮೂಲಗಳೊಡನೆ ಸಹಜವಾದ, ನೇರವಾದ ಸಹಯೋಗ ಹೊಂದಿರುವುದರಲ್ಲಿ ಸಂಶಯವಿರಲಾರದು. ಅದು ಕುಡಿಯುವ ನೀರಿರಬಹುದು, ಉರಿಸುವ ಕಟ್ಟಿಗೆ ಇರಬಹುದು, ರುಚಿ ಮತ್ತು ಪೌಷ್ಟಿಕತೆಯ ದೃಷ್ಟಿಯಿಂದ ವಿವಿಧ ತಳಿ ಧಾನ್ಯ ತರಕಾರಿಗಳಿರಬಹುದು. ಹಾಗಾಗಿ, ಈ ಎಲ್ಲಾ ಸಂಪನ್ಮೂಲಗಳ ವಿನಾಶದ ನೇರ ಪರಿಣಾಮವೂ ಮಹಿಳೆಯರ ಮೇಲೆ ಆಗುವುದರಿಂದ, ಇವುಗಳ ರಕ್ಷಣೆಯ ಕಾರ್ಯದಲ್ಲಿ ಅಷ್ಟೇಕೆ ಒಟ್ಟಾರೆ ಸುಸ್ಥಿರಕೃಷಿ ಅಭಿವೃದ್ಧಿ ಕಾರ್ಯದಲ್ಲೇ ಮಹಿಳೆಯರನ್ನು ಪೂರ್ತಿ ಸಹಭಾಗಿಗಳಾಗಿ ಮಾಡಿಡುವುದು ಅತ್ಯಂತ ಸೂಕ್ತವಾಗುತ್ತದೆ.

1 ಹಳ್ಳಿಯ ಮೂಲೆಯಲ್ಲೊಂದು ಹಲಸಿನ ತಳಿ ಸಂಗ್ರಹಾಲಯ

ತೇಜಸ್ವಿನಿ ಮತ್ತು ಪ್ರಕಾಶ್

ತೀರ್ಥಹಳ್ಳಿ ತಾಲ್ಲೂಕಿನ ನಗಡಹಳ್ಳಿ ಗ್ರಾಮದ ವಾಸುದೇವ ಮೂರ್ತಿಯವರಿಗೆ ಬೇರೆ ಬೇರೆ ವಿಧದ ಹಲಸಿನ ಗಿಡದ ಸಂಗ್ರಹಣೆ ಒಂದು ಹವ್ಯಾಸ. ಎಲ್ಲಾದರೂ ಹೊರಗೆ ಹೋದಾಗ ಅಪರೂಪವಾಗಿ ಕಂಡ ಹಲಸಿನ ಬೀಜವನ್ನು ತಂದು ತಮ್ಮ ತೋಟದಲ್ಲಿ ಬೆಳೆಸಿದ್ದಾರೆ. ಆ ಹಣ್ಣುಗಳ ಮೂಲ ಸ್ಥಳ, ಬೆಳೆಸಿದ ವ್ಯಕ್ತಿಗಳ ಅಥವಾ ಇನ್ನಾವುದಾದರೂ ಆಧಾರದ ಮೇಲೆ ಈ ತಳಿಗಳಿಗೆ ಅವರದ್ದೇ ಆದ ವಿಶಿಷ್ಟ ಹೆಸರು ನೀಡಲಾಗಿದೆ. ಒಟ್ಟಾರೆ ಈಗ ಅವರ ಬಳಿ ಸುಮಾರು ೩೦ ಜಾತಿಯ ಹಲಸು ತಳಿಗಳಿವೆ. ಹಣ್ಣು ಅಥವಾ ತೊಳೆಯ ಗಾತ್ರ, ವಾಸನೆ, ಬಣ್ಣ, ರುಚಿ ಇವುಗಳಲ್ಲಿ ಪ್ರತಿ ಜಾತಿಗೂ ಅದರದ್ದೇ ಆದ ವೈಶಿಷ್ಟ್ಯಗಳಿವೆ. ಅವರ ಸಂಗ್ರಹದಲ್ಲಿರುವ ಕೆಲವು ತಳಿಗಳ ವಿವರ ಈ ಕೆಳಗಿನಂತಿರುತ್ತದೆ.-

ಕ್ರ.ಸಂ.	ಹೆಸರು	ಮರದಲ್ಲಿ ಬಿಡುವ ಕಾಯಿಗಳು	ತೊಳೆಯ ಬಣ್ಣ	ಸರಾಸರಿ ಒಂದು ಹಣ್ಣಿನ ತೂಕ	ವೈಶಿಷ್ಟತೆ
1.	ಚಂದ್ರಬಕ್ಕೆ	4-5	ಕೇಸರಿ	5 ರಿಂದ 8 ಕೆ.ಜಿ.	-
2.	ಪನ್ನೇರಲ ಬಕ್ಕೆ	20	-	15 ರಿಂದ 20 ಕೆ.ಜಿ.	ಪನ್ನೇರಲ ಹಣ್ಣಿನ ಪರಿಮಳ
3.	ಮಲೇಶಿಯನ್‌ಜಾಕ್	5-6	ಕೆಂಪು ಮಿಶ್ರಿತ ಹಳದಿ	20ಕೆ.ಜಿ	-
4.	ರುದ್ರಾಕ್ಷಿ	50-60	ಅರಿಶಿಣ	4 ರಿಂದ 5 ಕೆ.ಜಿ.	ಸಣ್ಣ ಹಣ್ಣು
5.	ಮಲ್ಲಿಗೆ ಬಕ್ಕೆ	10 12	ಅರಿಶಿಣ	4 ರಿಂದ 5 ಕೆ.ಜಿ.	ತೆಳುವಾದ ತೊಳೆ
6.	ಜಡೆ ಬಕ್ಕೆ	50 -100	-	5 ರಿಂದ 8 ಕೆ.ಜಿ.	ತೆಳುವಾದ ತೊಳೆ
7.	ಜೇನು ಬಕ್ಕೆ	10- 12		8ರಿಂದ 10 ಕೆ.ಜಿ.	ಜೇನುತುಪ್ಪದಂತೆ ಸಿಹಿ
8.	ಎಮ್ಮೆಕೊಟ್ಟಿಗೆ ಮರ	8-10	ಕಡು ಹಳದಿ	10 ಕೆ.ಜಿ	-
9.	ಬಳಗಟ್ಟೆ ಬಕ್ಕೆ	7-8	ಅರಿಶಿಣ	25 ಕೆ.ಜಿ.	ದೊಡ್ಡತೊಳೆ, ಹಸಿರು ಬಣ್ಣದ್ದಾಗಿರುತ್ತದೆ
10.	ಕೊಪ್ಪಲು ಬಕ್ಕೆ		ಕೆಂಪು	5 ಕೆ.ಜಿ.	ತುಂಬಾ ಸಿಹಿ
11.	ಚಂದ್ರಬಕ್ಕೆ ತರಹದ್ದು	4	ಕೆಂಪು	8 ಕೆ.ಜಿ.	ಗಿಡ್ಡ ತೊಳೆ
12.	ದೊಡ್ಡ ಗಂಡು ಮರ	15	ಅರಿಶಿಣ	10 ಕೆ.ಜಿ.	-
13.	ಕಲ್ಲುಪಟ ಮರ	20	ಅರಿಶಿಣ	4 ರಿಂದ 5 ಕೆ.ಜಿ.	ಉದ್ದನೆಯ, ಸಪೂರವಾದ, ಭಾರೀ ಪರಿಮಳ

2 ಮಲೆನಾಡ ಹಿತ್ತಲು

ತೇಜಸ್ವಿನಿ

ಮಲೆನಾಡು ಪ್ರಾಂತ್ಯದ ಕೊಪ್ಪ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಅಡಿಕೆ ಮತ್ತು ಭತ್ತ ಮುಖ್ಯ ಬೆಳೆಗಳು. ತರಕಾರಿ ಇಲ್ಲಿ ಮುಖ್ಯ ಬೆಳೆ ಅಲ್ಲ. ಬದಲಿಗೆ ಅದು ದಿನ ನಿತ್ಯದ ಬಳಕೆಗೆ ಮಾತ್ರ. ಅದರ ಜವಾಬ್ದಾರಿ ಏನಿದ್ದರೂ, ಮನೆಯ ಹೆಂಗಸರ ಪಾಲಿಗೆ. ಸೌತೆ. ಬೀನ್ಸ್ ಅಥವಾ ಹುರುಳಿಕಾಯಿ, ಬದನೆ, ಟೊಮೆಟೊ, ಹರಿವೆ ಇವು ಮುಖ್ಯ ತರಕಾರಿಗಳು ಪೇಟೆಯಲ್ಲಿ ಸಿಗುವ ಒಂದೇ ರೀತಿಯ, ಒಂದೇ ರುಚಿಯ ಔಷಧಿ ಸಿಂಪಡಣೆಯ ತರಕಾರಿಗಳಲ್ಲ. ಇವು ಹಿತ್ತಲಲ್ಲೇ ಹಿಂದೆಂದಿನಿಂದಲೋ ಬಂದ ಬೀಜಗಳೇ. ಒಬ್ಬರಿಂದ ಮತ್ತೊಬ್ಬರಿಗೆ ಹಂಚಿ ಹರಡಿ ಅನೇಕ ತಳಿ ವೈವಿಧ್ಯಗಳು ಇಂದಿಗೂ ಉಳಿದು ಬಂದಿದೆ.

ಬೀಜ ಸಂಗ್ರಹ ರೀತಿ:

ಕಾಗದದಲ್ಲಿ ಸುತ್ತಿ ಡಬ್ಬದಲ್ಲಿ ಭದ್ರವಾಗಿ ಮುಚ್ಚಿ, ಹೊಗೆಯಾಡುವ ಬೆಚ್ಚಗಿನ ಅಡುಗೆ ಮನೆಯ ಅಟ್ಟದ ಮೇಲಿಡುವ ಬೀಜಗಳನ್ನು ವರ್ಷಕ್ಕೊಮ್ಮೆ ಬಿತ್ತಿ, ಬೆಳೆದು ಮತ್ತೆ ಪುನಃ ಸಂಗ್ರಹಿಸಿಡಲಾಗುತ್ತದೆ.

ಬಿತ್ತನೆ :

ಬೀಜ ಬಿತ್ತಿದೊಡನೆ ಬರುವ ಇರುವೆ ಕಾಟಕ್ಕೆ ಅವರವರೇ ಉಪಾಯ ಹುಡುಕಿಕೊಂಡಿದ್ದಾರೆ. ಕುಂಬರಕೊಡು ಗ್ರಾಮದ ಸತ್ಯಭಾಮನವರ ಪ್ರಕಾರ ಮೆಣಸು, ಬದನೆಗಳಂತಹ ಬೀಜವನ್ನು ಒದ್ದೆ ಮಾಡಿ ಬಟ್ಟೆಯಲ್ಲಿ ಕಟ್ಟಿ ಮನೆಯ ಮಾಡಿನ ಮರದ ಪಟ್ಟಿಗೆಗೆ ತೂಗು ಬಿಡುತ್ತಾರೆ. ಇರುವೆ ಕಾಟವಿಲ್ಲದೆ ಮೊಳಕೆಯೊಡೆದ ಬೀಜವನ್ನು ಬಿತ್ತಿದರೆ ಅದು ಬೇಗನೆ ಬೇರು ಬಿಡುತ್ತದೆ. ಆದ್ದರಿಂದ ಇರುವೆಗೆ ಅದನ್ನು ಒಯ್ಯುವ ಅವಕಾಶವೇ ಸಿಗುವುದಿಲ್ಲ.

ತಳಿ ವೈವಿಧ್ಯತೆ

ಸೌತೆ :

ಎರಡು ಜಾತಿಗಳು ಮುಖ್ಯವಾಗಿ ಕಾಣಸಿಗುತ್ತದೆ. ಒಂದು ಗದ್ದೆ ಸೌತೆ. ಇನ್ನೊಂದು ಕುಂಬರ ಸೌತೆ. ಕಡು ಹಸಿರಿನ ಮೇಲೆ ಹಳದಿ ಪಟ್ಟಿಗಳುಳ್ಳದ್ದು ಗದ್ದೆ ಸೌತೆ. ಇದೇನಿದ್ದರು ಬೇಯಿಸಿದ ಅಡುಗೆಗೆ ಸೂಕ್ತ. ಕುಂಬರ ಸೌತೆ ಹಸಿಯಾಗಿ ತಿನ್ನಲು, ಬೇಯಿಸದೇ ಮಾಡುವ ಅಡುಗೆಗೆ ಹೇಳಿಸಿದ್ದು.

ಬದನೆ :

ಮುಖ್ಯವಾಗಿ ಎರಡು ವಿಧಗಳು. ಒಂದು ಗುಂಡಗಿ ಬದನೆ, ಇನ್ನೊಂದು ದಪ್ಪಕ್ಕೆ ಉದ್ದವಾದ ಹಸಿರು ಬಣ್ಣದ ಮೇಲೆ ಬಿಳಿ ಪಟ್ಟಿ ಇರುವ ಬದನೆ (ಬೀಜ ಜಾಸ್ತಿ). ಪ್ರಾಯಶಃ ತೂಕದಲ್ಲಿ ಎಲ್ಲಾ ಹೈಬ್ರಿಡ್ ತಳಿಗಳನ್ನು ಮೀರಿಯಾವು ಈ ಬದನೆಗಳು. ಇವರ ತಳಿ ಆಯ್ಕೆಯ ಮುಖ್ಯ ದೃಷ್ಟಿ ಅವು ಅದಷ್ಟು ಕಾಲ ಹೆಚ್ಚು ಕಾಯಿ ಬಿಡುವಂತವಾಗಿರಬೇಕು. ಈ ನಾಟೀ ತಳಿಗಳಿಗೆ ಹುಳ ಬೀಳುವುದು ಬಹು ಕಡಿಮೆ.

ಹರಿವೆ :

ಸಾಮಾನ್ಯವಾಗಿ ಪೇಟೆಯಲ್ಲಿ ಕಾಣಲು ಸಿಗದ ಬಿಳಿ ಹರಿವೆ ಮತ್ತು ಕೆಂಪು ಹರಿವೆ ಇಲ್ಲಿ ಮುಖ್ಯ ಬೆಳೆ. ಬಿಳಿ ಹರಿವೆಯ ದಂಟು ಪೂರಾ ಬಿಳಿ ಆದುರಿಂದಾಗಿಯೇ ಆ ಹೆಸರು. ಎಲೆ ಮಾತ್ರ ಹಸಿರು. ಇನ್ನು ಕೆಂಪು ಹರಿವೆಯ ದಂಟು ಕೆಂಪು ಅದರ ಎಲೆ ಕಂದು ಮಿಶ್ರಿತ ಹಸಿರು. ಇದರ ಸಾಂಬಾರು, ಹಸಿ ಪದಾರ್ಥಗಳ ದಟ್ಟ ಕೆಂಬಣ್ಣ ನೋಡಲು ಕಣ್ಣಿಗೆ ಹಬ್ಬ ತರುವಂತಹದ್ದು.

ಚೀನಿ ಕಾಯಿ : (ಸಿಹಿ ಕುಂಬಳ)

ಮಾಮೂಲಾಗಿ ಸಿಗುವ ಗುಂಡಗಿನ ಚೀನಿಕಾಯಿ ಒಂದು ಬಗೆಯಾದರೆ ನೋಡಲು ಅದೇ ಬಣ್ಣ, ಆದರೆ ದಪ್ಪಗೆ ಉದ್ದವಾಗಿ ದುಂಡಗಿರುವ ಚೀನಿಕಾಯಿ ಇನ್ನೊಂದು ಬಗೆಯದ್ದು. ಇದರ ತೂಕ ಕೆಲವೊಮ್ಮೆ ಆಳೊಬ್ಬನಿಗೆ ಹೊರಲು ಕಷ್ಟವಾಗಿರುವಷ್ಟು ಅಧಿಕವಾಗಿರುತ್ತದೆ.

ಇದಿಷ್ಟು ಕುಂಬರಕೊಡು ಗ್ರಾಮದ ಸತ್ಯಭಾಮನವರ ಸಂಗ್ರಹವಾದರೆ, ಬಿಳವಿನ ಕೊಡುಗೆ ಗ್ರಾಮದ ಜಯಂತಿಯವರ ಹಿತ್ತಲಲ್ಲಿ ಇನ್ನೊಂದಷ್ಟು ತರಕಾರಿಯ ಹೊಸಬಗೆಗಳು ಕಂಡುಬಂದವು.

ಅವರೆ :

1) ಮಾಗಿ ಅವರೆ : ಇದು ಬೆಂಗಳೂರು, ಕೋಲಾರ ಸುತ್ತಮುತ್ತಲಿನ ಹೊಲದ ಅವರೆಯಂತೆಯೇ ಕಾಣುತ್ತದೆ.

2) ಪಟ್ಟವರೆ : ಒಂದೊಂದು ಅವರೆಯೂ ಸುಮಾರು 15-16 ಸೆಂ. ಮೀ. ಉದ್ದ. ಕಾಯಿಯನ್ನು ತರಕಾರಿಯಾಗಿಯೂ ಬಳಸಬಹುದು. ಬೀಜ ಕೂಡ ಉಪಯೋಗ.

3) ಹುಲಿ ಅವರೆ : ಬೀಜದ ಮೇಲೆ ಪಟ್ಟೆ ಇರುವುದರಿಂದ ಅದನ್ನು ಕರೆಯುವುದೇ ಹುಲಿ ಅವರೆಯೆಂದು ಇದರ ಬೀಜವನ್ನು ಅಡಿಗೆಗೆ ಉಪಯೋಗಿಸುತ್ತಾರೆ.

ಬೀನ್ಸ್ ಅಥವಾ ಹುರುಳಿಕಾಯಿ :

1) ಚಟ್ಟು : ಗಿಡವಾಗಿ ಬೆಳೆದು ಸಾಧಾರಣವಾಗಿ ಪೇಟೆಯಲ್ಲಿ ಸಿಗುವ ಬೀನ್ಸ್ ಜಾತಿ, ಇದನ್ನು ಕರೆಯುವುದು ಚಟ್ಟು ಎಂದು.

2) ತಿಂಗಳವರೆ : ಇದು ಬೀನ್ಸ್ ಜಾತಿಯ ಬಳ್ಳಿ. ಮಳೆಗಾಲದಲ್ಲಿ ಅಂಗಳದಲ್ಲಿ ಒಂದಷ್ಟು ಮಣ್ಣು ಹಾಕಿ ಪಾಲು ಮಾಡಿ ಬೀಜ ನೆಟ್ಟು, ಗಿಡಕ್ಕೆ ಕೋಲಿನ ಆಸರೆ ಕೊಡಬೇಕು. ಹೊರಗೆ ಕಾಲಿಡಲೂ ಆಗದ ಮಳೆಗಾಲದ ಮಳೆಯಲ್ಲಿ ಹಿತ್ತಲಲ್ಲೇ ಇರುವ ಒಂದೊಂದು ಗಿಡವೂ ಸುಮಾರು 2 ಕೆ. ಜಿ.ಯಷ್ಟು ಕಾಯಿ ಕೊಡುತ್ತದೆ. 2 - 3ಸಲ ಕಾಯಿ ಕೊಯ್ಯಲು ಸಿಗುತ್ತದೆ.

3) ಡಬ್ಬಲ್ ಬೀನ್ಸ್ : ಇದು ಮಳೇಗಾಲದಲ್ಲಿ ಮಾತ್ರ ಬರುತ್ತದೆ. ದಪ್ಪನಾದ ಈ ಕಾಯಿ ತಿನ್ನಲು ರುಚಿ, ಕಾಳನ್ನು ಮಾತ್ರ ತೆಗೆದು ಕೂಡಾ ಉಪಯೋಗಿಸಬಹುದು. ನಾರು ಕಡಿಮೆ ಇರುವ ಈ ಕಾಯಿ ಪೇಟೆಯಲ್ಲಿ ನೋಡಲು ಕೂಡಾ ಸಿಗುವುದು ಕಷ್ಟ.

ತೊಂಡೆಕಾಯಿ :

ಇದರಲ್ಲೂ ಎರಡು ವಿಧ. ಒಂದು ಮಾಮೂಲಿ ತೊಂಡೆಯಾದರೆ ಇನ್ನೊಂದರ ಹೆಸರು ಗವಟೆಕಾಯಿ. ಇದು ನೋಡಲು ತೊಂಡೆಯಂತೆಯೇ ಇರುತ್ತದೆ. ಆದರೆ ಕಾಯಿಯ ಮೇಲಿನ ಗೀರುಗಳು ತೊಂಡೆಯಿಂದ ಭಿನ್ನವಾಗಿದೆ.

ಮಡ ಹಾಗಲ :

ಇದೊಂದು ರೀತಿಯ ಹಾಗಲ. ಆದರೆ, ಕಾಡಲ್ಲಿ ಸಣ್ಣ ಪುಟ್ಟ ಪೊದೆ ಮರಗಳಲ್ಲಿ ಬಳ್ಳಿ ಬಿಟ್ಟು ಮಾತ್ರ ಬೆಳೆಯುವಂತಹದ್ದು. ಹಿತ್ತಲಲ್ಲಿ ಬೆಳೆಸುವುದು ಅಪರೂಪ ಹಾಗೇ ಕಷ್ಟ. ಪ್ರಾಯಶಃ ನಮ್ಮ ಕಾಡುಗಳು ಉಳಿದರೆ ಮಾತ್ರ ಇಂತಹ ತಳಿಗಳು ಉಳಿಯುವುದು ಸಾಧ್ಯ.

ಕಮ್ಮರಡಿಯ ಸುವರ್ಣ ಮತ್ತು ಮನೋರಮರ ಹಿತ್ತಲಲ್ಲಿ ಮೇಲಿನ ಅವರೆ, ಬೀನ್ಸ್‌ಗಳ ಜೊತೆ ಕಂಡು ಬಂದ ಇನ್ನೊಂದು ಅವರೆ ತಳಿ ರೆಕ್ಕೆ ಅವರೆ : ಇದರ ಮೇಲಿನ ಎತ್ತರವಾದ ಗೀರುಗಳು ನೋಡಲು ರೆಕ್ಕೆಯಂತೆಯೇ ಕಾಣುವುದರಿಂದ ಇದರ ಹೆಸರು ರೆಕ್ಕೆ ಅವರೆ, ಎಂದು.

ಈ ಹಿನ್ನೆಲೆಯಲ್ಲಿ ಈಗ ಅತ್ಯವಶ್ಯಕವಾಗಿ ಎತ್ತಬೇಕಾಗಿರುವ ಪ್ರಶ್ನೆ ಎಂದರೆ, ಇಂತಹಾ ಅಮೂಲ್ಯ ಜೀವ ವೈವಿಧ್ಯತೆಯ ರಕ್ಷಣೆಯ ಭಾರ ಹೊರಲಿರುವ ನಮ್ಮ ರೈತರಿಗೆ, ಗ್ರಾಮೀಣ ಮಹಿಳೆಯರಿಗೆ, ಬುಡಕಟ್ಟು ಜನಾಂಗಗಳಿಗೆ ಅದರ ಲಾಭ ದೊರಕಿಸುವುದು ಹೇಗೆಂಬುದು. ಈ ಪ್ರಶ್ನೆಗೆ ಸೂಕ್ತ ಉತ್ತರ ದೊರಕದಿದ್ದಲ್ಲಿ ನಿಜವಾಗಿ ಜೀವ ವೈವಿಧ್ಯತೆಯನ್ನು ಸಂರಕ್ಷಿಸುತ್ತಿರುವವರಿಗೆ ಆ ಬಗ್ಗೆ ಪ್ರೋತ್ಸಾಹ ಕಡಿಮೆಯಾಗಿ ನಿರಾಸಕ್ತಿ ಬರಬಹುದು. ಇಲ್ಲವೇ ಅವರು ಮಾಡಿದ ಸಂರಕ್ಷಣೆಯನ್ನು ಇತರರು ಉಪಯೋಗಿಸಿ ಲಾಭಪಡೆದು, ಅವರನ್ನು ವಂಚಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರೈತಸಂಘ ಇಟ್ಟಿರುವ ಹೆಜ್ಜೆ ಅತ್ಯಂತ ಸ್ವಾಗತಾರ್ಹವಾಗಿದೆ. ಎಂ.ಡಿ.ನಂಜುಂಡ ಸ್ವಾಮಿಯವರ ನೇತೃತ್ವದ ಈ ಸಂಘಟನೆ 1993ರ ಅಕ್ಟೋಬರ್ ಎರಡರಂದು ಬೆಂಗಳೂರಿನಲ್ಲಿ ತೃತೀಯ ಜಗತ್ತಿನ ರೈತರ ಸಮಾವೇಶ ಏರ್ಪಡಿಸಿ, ಸಸ್ಯಗಳ ತಳಿಗಳ ಸಂರಕ್ಷಣೆಯ ನಿರ್ಣಯ ಒಂದನ್ನು ಕೈಗೊಂಡಿದೆ. ನಂತರ ಫೆಬ್ರವರಿಯಲ್ಲಿ ಗ್ಯಾಟ್‌ಗೆ ಪರ್ಯಾಯವಾಗಿ "ಸಮುದಾಯದ ಭೌದ್ಧಿಕ ಸನದ್ಧಿನ ಹಕ್ಕಿನ" (Community intellectual property Rights) ಸಂರಕ್ಷಣೆಗೆ ಒಂದು ಕರಡು ಕಾಯಿದೆಯನ್ನು ತಯಾರಿಸಿ ದೇಶದ ಇತರ ಪ್ರಮುಖ ರೈತ ಸಂಘಟನೆಗಳೊಡನೆ ಸೇರಿ ಕೇಂದ್ರ ಸರ್ಕಾರದ ಮುಂದಿಟ್ಟಿರುತ್ತದೆ. ಹಾಗೇ ನಾಟೀ ತಳಿಗಳ ಸಂರಕ್ಷಣೆಗಾಗಿ, ಬೆಳಗಾಂವ ಕಿತ್ತೂರಿನಲ್ಲಿ 'ಬೀಜ ಬ್ಯಾಂಕ್' ಒಂದನ್ನು ತೆರೆಯುವ ದೃಢ ಹೆಜ್ಜೆಯನ್ನು ಈ ಸಂಘಟನೆ ಈಗಾಗಲೇ ಇಟ್ಟಿರುತ್ತದೆ.



ಅಳಲೇಕಾಯಿ

ನಾಟೀ ವೈದ್ಯಕೀಯ ಪದ್ಧತಿಗಳು

ನಾಟಿ ಪದ್ಧತಿಯ ಉಗಮವು ಪುರಾತನ ವೈದ್ಯ ಪದ್ಧತಿಯಿಂದ ಬಂದದ್ದು ಎಂದರೆ ತಪ್ಪಾಗಲಾರದು. ಅದೂ ಸ್ಥಳೀಯವಾಗಿಯೇ ದೊರಕುವ 'ಅಳಲೇಕಾಯಿ'ಯಂತಹ ಅರಣ್ಯ ಉತ್ಪನ್ನಗಳಿಂದ ಮನುಷ್ಯರಿಗೆ ಬರುವ ವಿವಿಧ ರೋಗಗಳ ಉಪಶಮನಕ್ಕೆ ಬಳಕೆ ಮಾಡುವ ಮೂಲಕ. ಹಾಗಾಗಿ ಇಂದೂ ಹಳ್ಳಿಗಾಡಿನ ಪ್ರದೇಶದಲ್ಲಿ ಇಂತಹ 'ಅಳಲೇಕಾಯಿ ಪಂಡಿತರು'ಇದ್ದಾರೆ. ಇನ್ನು ಗಂಭೀರವಾಗಿ ಯೋಚಿಸಿದಾಗ ನಮ್ಮ 'ಆಯುರ್ವೇದ ವೈದ್ಯಕೀಯ' ಪದ್ಧತಿಗೆ ಸರಿಸಮಾನವಾದ ನಾಟಿ ಪದ್ಧತಿಗಳು ಇಂದು ಜಗತ್ತಿನಲ್ಲಿ ಎಲ್ಲೂ ದೊರಕಲಾರದು. ಈ ನಮ್ಮ ನಾಟೀ ವೈದ್ಯಕೀಯ ಪದ್ಧತಿಯೇ ನಮ್ಮ ಅರಣ್ಯಗಳು, ಗಿಡ ಮೂಲಿಕೆಗಳು, ಒಟ್ಟಾರೆ ಸಸ್ಯ ವೈವಿಧ್ಯತೆಯ ಮೇಲೇ ನಿಂತಿದೆ. ಹಾಗೇ ನಮ್ಮ ಆಧುನಿಕ ವೈದ್ಯಕೀಯ ಪದ್ಧತಿಯೂ ಕೂಡ. ನಮ್ಮ ಆಧುನಿಕ ವೈದ್ಯಕೀಯ ಪದ್ಧತಿ, ಆಧುನಿಕ ಕೃಷಿ ಪದ್ಧತಿಯಂತೆಯೇ ಹುಟ್ಟು ಹಾಕುತ್ತಿರುವ 'ಅಗೋಚರ - ಅಹಿತಕರ' ಪರಿಣಾಮಗಳ ಹಿನ್ನೆಲೆಯಲ್ಲಿ, ಇಂದು ನಮ್ಮ ನಾಟಿ ವೈದ್ಯಕೀಯ ಪದ್ಧತಿಗಳಿಂದ ಕಲಿಯುವುದು ಅಪಾರ ಇರುತ್ತದೆ. ಜೊತೆಗೆ, ಈ ಎಲ್ಲಾ ಔಷಧಿ ಸಸ್ಯಗಳೂ, ಗಿಡಮೂಲಿಕೆಗಳು ನಮ್ಮ ಕೃಷಿರಂಗಕ್ಕೆ ಸಂಬಂಧಿಸಿರುವುದರಿಂದ ನಾಟಿ ವೈದ್ಯಕೀಯ ಪದ್ಧತಿಗಳ ಬಗ್ಗೆ ಎರಡು ಲೇಖನಗಳನ್ನು ಈ ಮುಂದೆ ಕೊಡಲಾಗಿದೆ.

1. ಫಿಟ್ಸ್ (ಅಪಸ್ಮಾರ) ರೋಗಕ್ಕೊಂದು ಮದ್ದು

ಎಚ್. ನಾಗರಾಜ್, ಬರುಜನಕೊಪ್ಪ

ಫಿಟ್ಸ್ ರೋಗಕ್ಕೆ ಹಿರಿಯೂರು ತಾಲ್ಲೂಕಿನ ಬುರುಜನಕೊಪ್ಪ ಗ್ರಾಮದ ಹೆಚ್. ರುದ್ರಪ್ಪನವರು ತಮ್ಮದೇ ಆದ ಔಷಧಿ ಕಂಡುಹಿಡಿದಿರುವರು. ಒಣ ಬೇಸಾಯದ ಭೂಮಿಯ ಬದುವಿನ ಪಕ್ಕದಲ್ಲಿ ಕಂಡುಬರುವ ದ್ವಿದಳ (ಲೆಗ್ಯೂಮ್) ಜಾತಿಯ ಸರದಾಳಿಗೆಡ್ಡೆ ಅಥವಾ ಕಾಸಿನಸರ (Indographis scrphiphdia) ಎಂಬ ಹೆಸರಿನ ಒಂದು ಗಿಡವು ಈ ಔಷಧಿಯ ಮುಖ್ಯ ಮೂಲ. ಗಿಡದ ಬೇರನ್ನು ಒಣಗಿಸಿ, ಅದನ್ನು ಕುಟ್ಟಿ ಅದರಿಂದ ಬರುವಂತಹ ನುಣುಪಾದ ಪುಡಿಯನ್ನು ತೆಗೆದುಕೊಂಡು ಸಮಪ್ರಮಾಣದಲ್ಲಿ ಗೋರಂಜನೆ, ಕಸ್ತೂರಿ, ಕುಂಕುಮ, ಕೇಸರಿಯನ್ನು ಮೇಕೆಹಾಲಿನಲ್ಲಿ ಸೇರಿಸಿ ಚೆನ್ನಾಗಿ ಬೆರೆಸಲಾಗುತ್ತದೆ. ಇದನ್ನು ದಿನಕ್ಕೆರಡು ಬಾರಿಯಂತೆ 21 ದಿನ ರೋಗಿಗೆ ಕುಡಿಸಲು ರುದ್ರಪ್ಪನವರು ಆದೇಶಿಸುತ್ತಾರೆ. ಇದರ ಮೂಲಕ ಸುತ್ತಮುತ್ತಲಿನ ಸಾಕಷ್ಟು ರೋಗಿಗಳನ್ನು ಗುಣಪಡಿಸಿರುವುದಾಗಿ ತಿಳಿದು ಬಂದಿರುತ್ತದೆ.


2. ಹೊಟ್ಟೆ ಉಬ್ಬರಿಸಿರುವುದಕ್ಕೆ ಒಂದು ಸರಳ ಔಷಧಿ

ಆನಂದ ಆ. ಶ್ರೀ.

ಯಾವುದೇ ಪ್ರಚಲಿತ ಮದ್ದಿಗೆ ಕೂಡಲೇ ಶಮನವಾಗದ ಹೊಟ್ಟೆ ಉಬ್ಬರಕ್ಕೆ (ಅಸಿಡಿಟಿ ಅಥವಾ ಫ್ಲಾಟುಲೆನ್ಸ್) ಗುಣ ಕಂಡಿದ್ದು ಸುಳ್ಯದ ದಟ್ಟ ಅಡವಿಯ ನಡುವೆ ವಾಸಿಸುವ ಶ್ರೀ ದಯಾನಂದ ಕೋಟೆಯವರಿಗೆ ತಾಯಿ ಹೇಳಿದ ಮದ್ದಿನಿಂದ.

ಉರಿಯುತ್ತಿರುವ (ಕೆಂಪಗಿರುವ) ಎರಡು - ಮೂರು ಕೆಂಡದ ತುಂಡಿನ ಜೊತೆ ಸ್ವಲ್ಪ ಸುತ್ತಲ ಬೂದಿ (ಅರ್ಧ ಚಮಚದಷ್ಟು) ಯನ್ನು ತಣ್ಣೀರಿನ ಒಂದು ಲೋಟಕ್ಕೆ ಹಾಕಿ, ಎರಡು ನಿಮಿಷದ ನಂತರ ಸೋಸಿ ಕುಡಿದುಬಿಡಿ. ದೂರದರ್ಶನದ ಜಾಹೀರಾತು ಹೇಳುವ ರೀತಿ 'ತಕ್ಷಣ ಪರಿಣಾಮ' ಅನುಭವಿಸಿ ಎನ್ನುವ ಶ್ರೀ ದಯಾನಂದ ಕೋಟೆ ಕೃಷಿ ಪದವೀಧರರೂ ಕೂಡ.

(ಶೋಧನಾಲಯದಿಂದ : ಮೇಲಿನ ಅಂಶ ಪುಟ್ಟ ಪ್ರಯೋಗಕ್ಕೆ ಒಳಪಟ್ಟು ಗೆದ್ದಿದೆ. ತಣ್ಣೀರಿನ ರಸಸಾರ 7.4 ಇದ್ದರೆ ಕೆಂಡ ಮತ್ತು ಬೂದಿ ಬೆರೆಸಿದ ನೀರಿನ ರಸಸಾರ 9.3 ಬಂದಿತ್ತು. ರಸಸಾರ 6.5ಗಿಂತ ಮೇಲೆ ಹೋದಷ್ಟು ಕ್ಷಾರದ ಅಂಶ ಹೆಚ್ಚಾಗುತ್ತಾ ಅದಕ್ಕೆ ಆಮ್ಲವನ್ನು ಶಮನಗೊಳಿಸುವ ಶಕ್ತಿ ಅಧಿಕವಾಗುತ್ತದೆ. ಹೊಟ್ಟೆ ಉಬ್ಬರ (ಅಸಿಡಿಟಿ) ಗುಣ ಮಾಡಲು ಕೊಡುವ ಮಾತ್ರೆಗಳ ರಸಸಾರ ಕೂಡಾ 9.3ರ ಆಸುಪಾಸಿನಲ್ಲೇ ಇದ್ದೀತಲ್ಲವೇ?)



ದೇಶೀಯ ಸಂಸ್ಥೆಗಳು



ಒಂದು ಅಭಿವೃದ್ಧಿ ಪ್ರಕ್ರಿಯೆ

ಒಂದು ಅಭಿವೃದ್ಧಿ ಪ್ರಕ್ರಿಯೆಗೆ ವಿಜ್ಞಾನದಷ್ಟೇ ಅತ್ಯವಶ್ಯಕವಾಗಿ ಬೇಕಾಗಿರುವುದು ವಿವಿಧ 'ಸಂಸ್ಥೆಗಳು' (Institutions). ನಮ್ಮಲ್ಲಿ ಸರ್ಕಾರದಿಂದ ಹಿಡಿದು, ಕಾನೂನು, ಕೋರ್ಟ್, ಶೈಕ್ಷಣಿಕ ಸಂಶೋಧನ ಕೇಂದ್ರಗಳಂತಹ 'ವ್ಯವಸ್ಥಿತ' ಸಂಸ್ಥೆಗಳು ವಿಸ್ತೃತವಾಗಿಯೇ ಇವೆ ಎನ್ನಬಹುದು. ಇವುಗಳು ಒಂದಲ್ಲ ಒಂದು ವಿಧದಲ್ಲಿ ನಮ್ಮ ಅಭಿವೃದ್ಧಿ ಕಾರ್ಯದಲ್ಲಿ ಭಾಗಿಯಾಗುತ್ತಲೇ ಇರುವುವು. ಆದರೆ, ಆಚಾರ, ಸಂಪ್ರದಾಯ, ನಂಬಿಕೆ, ರೀತಿರಿವಾಜುಗಳ ರೂಪದಲ್ಲಿ ನಿಂತಿರುವ ಹಲವಾರು ನಾಟಿ ಮೂಲದ ಸಂಸ್ಥೆಗಳು ಇಂದು ಸುಸ್ಥಿರ ಅಭಿವೃದ್ಧಿ ಪರಿಕಲ್ಪನೆಯ ಹಿನ್ನಲೆಯಲ್ಲಿ ಮಹತ್ವ ಪಡೆಯುತ್ತಲಿವೆ. ಇವುಗಳಲ್ಲಿ ಕೆಲವು, ಅನಾದಿಕಾಲದಿಂದಲೂ ನಡೆದುಕೊಂಡು ಬರುತ್ತಲಿದ್ದು, ಇಂದಿಗೂ ನಮ್ಮ ಗ್ರಾಮೀಣ ಜನತೆಯ ನಡುವೆ ಜೀವಂತವಾಗಿರುವುದು ನಮ್ಮ ಅದೃಷ್ಟ ಎನ್ನಬೇಕು. ಉದಾಹರಣೆಗೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಕೆರೆ, ಕಾಲುವೆ, ಕಟ್ಟೆ, ಗೋಮಾಳ, ಅರಣ್ಯ ಮೊದಲಾದ 'ಸಮುದಾಯ ಸಂಪನ್ಮೂಲಗಳನ್ನು' ಪಂಚಾಯ್ತಿ ವ್ಯವಸ್ಥೆಯ ಮೂಲಕ ನಮ್ಮ ಹಿರಿಯರು ನೂರಾರು ವರ್ಷಗಳಿಂದ ನಿರ್ವಹಿಸುತ್ತಿದ್ದುದ್ದನ್ನು ಇಂದು ಜಗತ್ತೇ ನಿಬ್ಬೆರಗಾಗಿ ಪರೀಕ್ಷಿಸು ವಂತಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ನಾಟೀ ಮೂಲದ ಸಂಸ್ಥೆಗಳ ಬಗ್ಗೆ ಮೂರು ಮುಖ್ಯಲೇಖನ ಗಳನ್ನು ಕೊಡಲಾಗಿದೆ.

ಮೊದಲನೆಯದ್ದು, ನಮ್ಮ ಗ್ರಾಮೀಣ ಪಂಚಾಯ್ತಿಗೆ ಸಾದೃಶವಾದ ಮತ್ತೊಂದು ನಾಟೀ ಮೂಲದ ಧಾರ್ಮಿಕ ಸ್ವರೂಪದ ಸಂಸ್ಥೆಯಾದ 'ದೇವರ ಕಾಡುಗಳು' ಅಥವಾ 'ದೇವಬನ'ದ ಬಗ್ಗೆ. ನಮ್ಮ ಅಮೂಲ್ಯ ಅರಣ್ಯ ಸಂಪತ್ತನ್ನು ರಕ್ಷಿಸುವಲ್ಲಿ ಸರ್ಕಾರ, ಅರಣ್ಯ ಇಲಾಖೆ, ಕಾನೂನು ಕಟ್ಟಳೆಗಳು ಸೋಲುತ್ತಿರುವಾಗ, ಭ್ರಷ್ಟವಾಗುತ್ತಿರುವಾಗ 'ಕೊಡಗಿನ ದೇವರ ಕಾಡುಗಳು' ನಮ್ಮ ಕಣ್ಣುತೆರೆಸಬೇಕಾಗಿದೆ. ಇಂತಹ ನಾಟೀ ಮೂಲದ ಸಂಸ್ಥೆಗಳನ್ನು ಎಲ್ಲೆಡೆ ವಿಸ್ತರಿಸುವುದಾಗಲೀ, ಅಥವಾ ಅವುಗಳನ್ನೇ ಬೇರೆಡೆ ನಕಲು ಮಾಡುವುದಾಗಲೀ ಹಾಸ್ಯಾಸ್ಪದವಾಗಬಹುದು. ಆದರೆ ಅವುಗಳ 'ಮೂಲತತ್ವ'ವನ್ನು ಅರಿತು ಅದರ ಮಹತ್ವವನ್ನು ಮನಗಂಡು, ಆ ತತ್ವವನ್ನು ಎಷ್ಟರ ಮಟ್ಟಿಗೆ ನಮ್ಮ ಅರಣ್ಯ ಅಭಿವೃದ್ಧಿ ಯೋಜನೆಗಳಲ್ಲಿ ಅಳವಡಿಸುವುದು ಸಾಧ್ಯ ಎಂಬುದರತ್ತ ನಾವು ಯೋಚಿಸಬೇಕಾಗಿದೆ. ಇದೇ ರೀತಿ "ವಧುವಿನೊಡನೆ ತಳಿ ವಿನಿಮಯ" ಲೇಖನದಲ್ಲಿ, ತಳಿ ವೈವಿಧ್ಯತೆಯ ಹಾಗೇ ಸುಸ್ಥಿರ ಅಭಿವೃದ್ಧಿಯ ಕಲ್ಪನೆ ನಮ್ಮ

ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವುದರ ಕುರುಹಾಗಿದೆ. ಇನ್ನು ಮಳೆಯ ಮುನ್ಸೂಚನೆಯನ್ನು ಕುರಿತಾದಂತಹ ಲೇಖನದಲ್ಲಿನ ಲೋಕೋಕ್ತಿಗಳು ನಮ್ಮ ವಿಜ್ಞಾನ, ತರ್ಕ, ವ್ಯವಹಾರಿಕ ಜ್ಞಾನ, ಸಮರ್ಥನೆಗಳಿಗೆ ನಿಲುಕುವುದಿಲ್ಲ ಎಂದು ತಿರಸ್ಕರಿಸುವ ಬದಲಿಗೆ, ಇವುಗಳನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ನಮ್ಮ ಪ್ರಸ್ತುತ ವಿಜ್ಞಾನ, ತರ್ಕ, ಶಾಸ್ತ್ರ, ಸಮರ್ಥನೆಗಳಿಗೆ ಇನ್ನೂ ದಕ್ಕಿಲ್ಲ ಎನ್ನುವುದೇ ಸೂಕ್ತವಾಗಬಹುದು.

1. ಕೊಡಗಿನ ದೇವರ ಕಾಡುಗಳು

ಎಂ.ಜಿ.ನಾಗರಾಜ್ ಮತ್ತು ಎಂ.ಜಿ.ಚಂದ್ರಕಾಂತ್

ದೇವನೆಲೆ ಅಥವಾ ದೇಗುಲವಿರುವ ಕಾಡೇ ದೇವರ ಕಾಡು. ಈ ಕಾಡಿನ ವೃಕ್ಷಗಳ ರಕ್ಷಣೆಗೆ ನಿಯಮಗಳಿವೆ. ಕಾಡು, ದೇವನೆಲೆ, ದೇವರ ಸ್ಥಳ ಇವುಗಳ ತ್ರಿಕೂಟ ವ್ಯೂಹವೇ ಕೊಡಗಿನ ಕಾಡುಗಳ ಸಂರಚನೆಯಲ್ಲಿ ಕಾಣಬರುತ್ತದೆ. ವಿಗ್ರಹ, ಶಿಲೆ, ಮುಖವಾಡ, ತ್ರಿಶೂಲ, ಸ್ತಂಭ ಮುಂತಾದ ರೂಪದಲ್ಲಿ ದೇವಸಂಕೇತಗಳು ಈ ನೆಲೆಗಳಲ್ಲಿರುತ್ತವೆ. ದೇಗುಲದ ಒಳಗೆ ಅಥವಾ ಹೊರಗೆ, ಆವರಣ ಸಹಿತವಾದ ಅಥವಾ ರಹಿತವಾದ ವೇದಿಕೆಗಳ ಮೇಲೆ ಸಾಮಾನ್ಯವಾಗಿ ದೇವರ ಸಂಕೇತಗಳು ಕಂಡು ಬರುತ್ತವೆ. ದೈವ ಆರಾಧನೆಯ ಮೂಲಕ, ದೇವರ ಕಾಡನ್ನು ರಕ್ಷಿಸಿಕೊಂಡು ಬಂದ ಪರಿಸರ ಪ್ರಜ್ಞೆಯು ಕೊಡಗಿನಲ್ಲಿ ಬಹಳ ಹಿಂದಿನಿಂದಲೂ ಬಂದಿರುವುದಕ್ಕೆ ಈ ಕಾಡುಗಳ ಇಂದಿನ ಅಸ್ತಿತ್ವವೇ ಸಾಕ್ಷಿಯಾಗಿದೆ.

ದೇವರ ಕಾಡುಗಳ ಮರ ಕಡೆಯಬಾರದು, ಎಲೆ ತೆಗೆಯಬಾರದು, ಬಿದ್ದ ಮರಗಳನ್ನೂ ಅಲ್ಲಿಯೆ ಬಿಡಬೇಕು. ಒತ್ತುವರಿ ಅಥವಾ ಆಕ್ರಮಣ ಮಾಡಬಾರದು ಎಂದೆಲ್ಲಾ ನಿಯಮಗಳೂ ಕೊಡಗಿನ ದೇವರ ಕಾಡುಗಳಿಗಿವೆ.

ಕೊಡಗಿನ ದೇವರ ಕಾಡುಗಳನ್ನು ಬಸದಿ ಅಥವಾ ಜಿನಕಾಡು, ದೇವರ ಪೈನಾದ್ದಿ ಕಾಡು, ಕೈ ಮಡ ಅಥವಾ ಕಾರೋಣ ಕಾಡು, ಮರದ ಕಾಡು, ಹೊಲೆದೇವರ ಕಾಡು, ಸುದ್ದಿ ದೇವರ ಬನ, ಪಳ್ಳಿಕಾಡು ಎಂದು ವಿಂಗಡಿಸಬಹುದು. ಇವುಗಳಲ್ಲಿ ಕೆಲವಕ್ಕೆ ಶಾಸನಗಳಲ್ಲಿ ಅಸ್ತಿತ್ವದ ಪರೋಕ್ಷ ಸೂಚನೆ ಕಾಣಬರುತ್ತದೆ. ಕೆಲವು ಜಮಾಬಂದಿಯಲ್ಲಿ ದಾಖಲಾಗಿದೆ. ಕೆಲವು ಅರಣ್ಯ ಹಾಗೂ ರೆವಿನ್ಯೂ ಇಲಾಖೆಯಿಂದ ಸರ್ವೆ ನಂಬರ್ ಪಡೆದಿವೆ. 1863 - 70ರ ಅವಧಿಯಲ್ಲಿ ಮದರಾಸು ಸರ್ಕಾರದಿಂದ, ನಂತರ ಕರ್ನಾಟಕ ಸರ್ಕಾರದಿಂದ ಇವುಗಳ ಸರ್ವೆ ನಡೆದಿದೆ. ಈ ಕಾಡುಗಳಲ್ಲಿ ವಿವಿಧ ಜಾತಿಯ ಮರಗಳಿವೆ. ಸರ್ವೆ ಆಗಿರುವ ರೀತ್ಯ ಸಧ್ಯಕ್ಕೆ 346 ದೇವರ ಕಾಡುಗಳಿದ್ದು 1693.86 ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆದು ಬಂದಿದೆ

2. ಮಳೆಯಸೂಚನೆ

- ಲೋಕೋಕ್ತಿಗಳು

ಡಾ. ಬಿ. ಎ. ಗೋಲಾಕಿಯ

ಅನಾದಿಕಾಲದಿಂದಲೂ ಮಳೆಯ ಬರುವಿಕೆ ಮತ್ತು ಪ್ರಮಾಣ ವನ್ನು ನಿಸರ್ಗದ ನಿರ್ದಿಷ್ಟ ಪ್ರಾಣಿ ಮತ್ತು ಪಕ್ಷಿಗಳ ಕೂಗು, ಅವುಗಳ ಚಲನವಲನ, ವಾಯುಗುಣ, ನಕ್ಷತ್ರ, ಮೋಡ, ಚಂದ್ರ ಮುಂತಾದವುಗಳಲ್ಲುಂಟಾಗುವ ಬದಲಾವಣೆಗಳನ್ನು ಗುರುತಿಸಿ ಅದರ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು. ಅವುಗಳನ್ನು ನಾಣ್ನುಡಿಗಳಲ್ಲಿ, ಕವಿತೆಗಳಲ್ಲಿ, ಧರ್ಮಗ್ರಂಥಗಳಲ್ಲಿ, ಕಥೆಗಳಲ್ಲಿ ಈಗಲೂ ಕೂಡಾ ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಸೌರಾಷ್ಟ್ರದ ಒಂದು ಜನಾಂಗದ ಜನರು ಮಳೆಯ ಮುನ್ಸೂಚನೆ ಬಗ್ಗೆ ಅವರು ನಂಬಿರುವ ಲೋಕೋಕ್ತಿಗಳು ಈ ಕೆಳಕಂಡಂತಿವೆ.

1) ಧೂಳಿನಲ್ಲಿ ಗುಬ್ಬಚ್ಚಿಗಳು ಸ್ನಾನ ಮಾಡುವುದು. ಕಂಚಿನ ಪಾತ್ರೆಗಳು ಕಳೆಗುಂದುವುದು, ಆಕಾಶದಲ್ಲಿ ಕಡು ನೀಲಿ ಮೋಡಗಳ ಗೋಚರಣೆಗಳೆಲ್ಲ ಹೆಚ್ಚಾಗಿ ಮಳೆ ಬರುವ ಮುನ್ಸೂಚನೆಗಳು.

2) ಆಕಾಶದಲ್ಲಿ ನಸುಗೆಂಪುನೆಯ ಬಣ್ಣ ಗೋಚರಿಸಿದಾಗ ಅದು ತುಂಬಾ ಮಳೆ ಬರುವ ಸಂಕೇತ. ಅದಲ್ಲದೆ ಆಕಾಶ ಕಳೆಗುಂದಿದ ಹಳದಿ ಬಣ್ಣ ಇದ್ದಾಗ ಕಡಿಮೆ ಮಳೆ ಬರುವ ಸಂಭವ ಎಂದು ಊಹಿಸುತ್ತಾರೆ.

3) "ಕಚೆಂದ" ಎಂಬ ಪಕ್ಷಿಯ ಗಂಟಲಿನ ಕೆಳಭಾಗ ನಸುಗೆಂಪಿಂದ ಕೂಡಿದ್ದಲ್ಲಿ ಮತ್ತು ಉತ್ತರದಿಂದ ಪಶ್ಚಿಮದ ಕಡೆ ಗಾಳಿ ಬೀಸಿದಾಗ ಮಳೆ ಶೀಘ್ರದಲ್ಲಿ ಬರಬಹುದೆಂದು ನಿರೀಕ್ಷೆ.

4) ಚೈತ್ರ ಮಾಸದಲ್ಲಿ ಮಳೆ ಬಂದರೆ ಶ್ರಾವಣ ಮಾಸ ಪೂರ್ಣ ಶುಷ್ಕ ವಾತಾವರಣದಿಂದ ಕೂಡಿರುತ್ತದೆ.

5) ಆಷಾಢ ಮಾಸದ ಮೊದಲನೇ ದಿನ ಮಳೆ ಬಂದಲ್ಲಿ, ಆಷಾಢ ಮತ್ತು ಶ್ರಾವಣ ಮಾಸದ ಪೂರ್ಣಕಾಲ ಶುಷ್ಕ ವಾತಾವರಣದಿಂದ ಕೂಡಿರುತ್ತದೆ ಮತ್ತು ಭಾದ್ರಪದ ಮಾಸದಲ್ಲಿ ಮಳೆ ಬರುವ ಸಾಧ್ಯತೆಗಳಿವೆ.

6) ಆರ್ದ್ರಾ ಮಾಸದಲ್ಲಿ ಹೆಚ್ಚು ಗಾಳಿ ಬೀಸುವುದು ಮತ್ತು ಪ್ರಕಾಶಮಾನವಾದ ನಕ್ಷತ್ರಗಳ ಗೋಚರಿಕೆ ಮಳೆ ಬರದ ಮುನ್ಸೂಚನೆ.

7) ಉತ್ತರ ದಿಕ್ಕಿನಿಂದ ಮೊದಲ್ಗೊಂಡು ಪೂರ್ವದ ಕಡೆ ಹಿತವಾದ ಗಾಳಿ ಬೀಸಿದ ಪಕ್ಷದಲ್ಲಿ ಅದು ತಕ್ಷಣ ಮಳೆ ಬರುವ ಮುನ್ಸೂಚನೆ.

8) ಪೂರ್ವದಿಕ್ಕಿನಿಂದ ಗಾಳಿ ಬೀಸುವುದು, ಮಾವಿನ ಕಾಯಿಗಳು ಉದುರುವುದು ಆ ದಿಕ್ಕಿನಿಂದ ಮಳೆ ಬರಬಹುದೆಂದು ನಂಬಿಕೆ.

9) ಹೆಚ್ಚು ಮೊಸರು ಹುಳಿಯಾಗಿ ಬರುವ ವಾಸನೆ, ನವಿಲು ಪದೇ ಪದೇ ಕೂಗುವುದು, ಗಾಜಿನಲ್ಲಿರುವ ನೀರು ಅತ್ಯಲ್ಪ ವೇಳೆಯಲ್ಲಿ ಬೆಚ್ಚಗಾಗುವುದು ಇವೆಲ್ಲವುಗಳು ಮಳೆ ಬರುವಿಕೆಯ ಲಕ್ಷಣ.

10) ಬೆಳಗಿನ ವೇಳೆಯಲ್ಲಿ ಕಾಮನಬಿಲ್ಲು ಗೋಚರಿಸುವಿಕೆ. ಸಂಜೆ ವೇಳೆಯಲ್ಲಿ ಸೂರ್ಯನ ಕಿರಣಗಳು ನಸುಗೆಂಪು ಬಣ್ಣದಿಂದ ಪ್ರಕಾಶಮಾನವಾಗಿ ಗೋಚರಿಸುವುದು ಹೆಚ್ಚು ಮಳೆಯ ಮುನ್ಸೂಚನೆ.

11) ಕಾಮನಬಿಲ್ಲಿನಲ್ಲಿ ಹಸಿರು ಬಣ್ಣ ಹೆಚ್ಚು ಪ್ರಕಾಶಮಾನ ವಾಗಿದ್ದಾಗ ಮಳೆಯನ್ನು ಆಗಾಗ ನಿರೀಕ್ಷಿಸಬಹುದು.

12) ಹಸುಗಳು ರಾತ್ರಿ ವೇಳೆಯಲ್ಲಿಅಂಬಿಕ್ಕುವುದು (ವರ್ಲುವುದು) ನರಿಗಳು ಹಗಲಿನಲ್ಲಿಕೂಗುವುದು ತೀವ್ರ ಬರಸೂಚಿಕೆ.

13)ಹುಣ್ಣಿಮೆಯ ದಿನಗಳಲ್ಲಿ ಹೆಚ್ಚು ಮೋಡಗಳಿಂದ ಕೂಡಿದ್ದು ಹಾಗೂ ಬಿರುಗಾಳಿ ಇದ್ದ ಪಕ್ಷದಲ್ಲಿ ಅದು ಅತ್ಯಂತ ಕಡಿಮೆ ಮಳೆ ಬರುವ ಸೂಚನೆ.

14) 'ಚೈತ್ರಮಾಸ'ದಲ್ಲಿ ಚಂದ್ರಗ್ರಹಣ. ನಕ್ಷತ್ರ ಪುಂಜಗಳು ಮತ್ತು ಹುಣ್ಣಿಮೆಯ ಚಂದ್ರ ಪ್ರಕಾಶಮಾನವಾಗಿ ಕಂಗೊಳಿಸುವುದು. ಶುಷ್ಕ ವಾತಾವರಣದ ಮುನ್ಸೂಚನೆ.

15) 'ವೈಶಾಖ' ಮಾಸದ ಹುಣ್ಣಿಮೆಯ ದಿನಗಳಲ್ಲಿ ಶೀತ ಮಾರುತ ಬೀಸಿದಲ್ಲಿ ಮುಂಗಾರು ಅತ್ಯಂತ ಶೀಘ್ರದಲ್ಲಿ ಮುಗಿಯುತ್ತದೆಂಬ ಸೂಚನೆ.

16) 'ಬಿಲ್ಲಿ' ಮರದ ತುಂಬೆಲ್ಲ ಎಲೆಗಳು ಕಂಗೊಳಿಸಿದರೆ ಅದು ಮುಂಗಾರಿನಲ್ಲಿ ವಾಡಿಕೆ ಮಳೆಗಿಂತ ಕಡಿಮೆ ಮಳೆ ಆಗುವ ಸೂಚನೆ.

17) 'ಅರಳಿ ಮರಗಳು' ಹೆಚ್ಚು ಎಲೆಗಳಿಂದ ಕೂಡಿದ್ದರೆ ಅದು ಹೆಚ್ಚು ಮಳೆಯ ಮುನ್ಸೂಚನೆ.

18) 'ಟಿಟೋಡಿ' ಎಂಬ ಪಕ್ಷಿಯು ಭೂಮಿಯ ಮೇಲ್ಭಾಗದಲ್ಲಿ ಮೊಟ್ಟೆ ಇಟ್ಟಲ್ಲಿ ಅದು ಹೆಚ್ಚು ಮಳೆಯ ಮುನ್ಸೂಚನೆ. (ಟಿಟೋಡಿ ಹಕ್ಕಿಯ ಭೂಮೇಲ್ಭಾಗದಲ್ಲಿ ಮೊಟ್ಟೆ ಇಟ್ಟು ಬೀಳುವಂತಹ ಮಳೆಯ ನೀರು ಆ ಹಕ್ಕಿಯ ಮೊಟ್ಟೆಯನ್ನು ಸ್ಪರ್ಶಿಸುವುದಿಲ್ಲ ಎಂಬುದನ್ನು ಉತ್ತರ ಗುಜರಾತಿನ ಜನರು ಬಲವಾಗಿ ನಂಬಿದ್ದಾರೆ)

19) 'ಝೂತಿ' (Eetopanasiste) ಎಂಬ ಕೀಟ ಕಡಿಯುಲಿಕ್ಕೆ ಪ್ರಾರಂಭಿಸಿದರೆ ಅದು ಮಳೆ ಅತ್ಯಂತ ಬೇಗ ಪ್ರಾರಂಭಗೊಳ್ಳುತ್ತಿದೆಂಬ ಸೂಚನೆ.

20) ಹಕ್ಕಿಯು ನಸುಕಿಲ್ಲಿ 'ಭಾಪಯಾ' ಎಂಬ ಹಾಡನ್ನು ಹಾಡಿದ್ದಲ್ಲಿ ಅದು ಒಂದೆರೆಡು ದಿನಗಳಲ್ಲೇ ಮಳೆ ಬರುವ ಸೂಚನೆಯಾಗಿದೆ.


ಲೇಖಕರು ಸೌರಾಷ್ಟ್ರದ ಗಂಫೆ, ಭದಲಿ, ದುಂಕ (ದುಂಕ್) ಎಂಬ ಸಮುದಾಯದ ಜನರು ಮಳೆಯ ಮುನ್ಸೂಚನೆಯ ಬಗ್ಗೆ ನಂಬಿರುವ ಲೋಕೋಕ್ತಿಗಳನ್ನು ಸಂಗ್ರಹಿಸಿದ್ದು ಅವುಗಳನ್ನು ಮೇಲೆ ಕೊಡಲಾಗಿದೆ. (ಕೃಪೆ : ಹನಿ ಬೀ)



ವಧುವಿನೊಡನೆ ಬೀಜ ತಳಿಗಳು :

ಕೆಲವು ಜನಾಂಗಗಳಲ್ಲಿ ಮದುವೆಯಾಗಿ ಹೆಣ್ಣು ಗಂಡಿನ ಮನೆಗೆ ಬರುವಾಗ ತಂದೆಯ ಮನೆಯಿಂದ ಕೆಲವು ಭತ್ತದ ಬೀಜಗಳನ್ನು ತರುವುದು ಒಂದು ಸಂಪ್ರದಾಯ. ಇಂತಹ ಭತ್ತದ ಬೀಜಗಳನ್ನು ಗಂಡನ ಮನೆಯವರು ಅವರ ಭತ್ತದ ತಳಿಗಳೊಂದಿಗೆ ಸೇರಿಸಿ ಬೆಳೆಸಬೇಕು. ಸಂಪ್ರದಾಯದ ಮೂಲಕ ತಳಿ ಪ್ರಸರಣದ ಈ ಅಪೂರ್ವ ಪದ್ಧತಿ, ' ಹನಿ ಬೀ'ಯಲ್ಲಿ ದಾಖಲಾಗಿರುತ್ತದೆ. (ಕೃಪೆ: ಹನಿ ಬೀ)

ದೇಶೀಯ ತಂತ್ರಜ್ಞಾನ



ಸುಸ್ಥಿರ ಕೃಷಿ ಅಭಿವೃದ್ಧಿಯಲ್ಲಿ ತಂತ್ರಜ್ಞಾನ ಕೇಂದ್ರೀಯ ವಲ್ಲದಿದ್ದರೂ ಪ್ರಮುಖ ಸ್ಥಾನವಂತೂ ಇದ್ದೇ ಇದೆ. ಆದರೆ ಸಂಶೋಧನೆಗೆ, ಆ ತಂತ್ರಜ್ಞಾನಕ್ಕೆ ಚೌಕಟ್ಟು ಯಾವ ರೀತಿಯದ್ದು, ಅದರ ಬಳಕೆಗೆ ಪ್ರೇರಣೆ ಎಲ್ಲಿಂದ ಬರುತ್ತದೆ ಮತ್ತು ಅದರ ಗುರಿ ಯಾವ ದಿಕ್ಕಿನತ್ತ ಇರಬೇಕೆಂಬುದು ಇಲ್ಲಿ ಮುಖ್ಯ ಪ್ರಶ್ನೆಗಳಾಗಿರುತ್ತವೆ. ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಪಡೆದ ಮಾಹಿತಿ, ಜ್ಞಾನ ಮತ್ತು ಸಂಶೋಧನಾ ರೀತಿ ಆಧಾರದ ಮೇಲೆ ಇಂದು ನಮ್ಮ ಸಂಶೋಧನಾ ಕೇಂದ್ರಗಳು, ಕೃಷಿ ವಿಜ್ಞಾನ ಸಂಸ್ಥೆಗಳಿಂದ ಹೊರಬರುತ್ತಿರುವ ತಂತ್ರಜ್ಞಾನವಾದರೂ ನಮ್ಮ ಕೃಷಿಗೆ, ಒಟ್ಟಾರೆ ಗ್ರಾಮೀಣ ವ್ಯವಸ್ಥೆಗೆ ಪರಕೀಯವಾಗಿರುತ್ತದೆ ಎಂದರೆ ತಪ್ಪಾಗಲಾರದು. ಇಂತಹ "ತಂತ್ರಜ್ಞಾನದ ವರ್ಗಾವಣೆ"[Transfer of technology] ಈ ತತ್ವದ ಆಧಾರದ ಮೇಲೆ ನಿಂತಿರುವ ನಮ್ಮ ಇಂದಿನ ಕೃಷಿ ಅಭಿವೃದ್ಧಿ ನೀತಿಯಾದರೂ ನಮ್ಮ ರೈತರನ್ನು ಬರಿದೇ "ಸ್ವೀಕರಿಸುವವ" [Receiver]ನ ಸ್ಥಾನಕ್ಕೆ ತಳ್ಳುವುದರ ಮೂಲಕ ಆತನನ್ನು ಓರ್ವ ಮೂಕ ಪ್ರೇಕ್ಷಕನನ್ನಾಗಿ ಮಾಡಿದೆ. ಇದರ ಬದಲಿಗೆ, ನಮ್ಮ ರೈತ ಸಮುದಾಯದೊಳಗೆ ಅವರ ವಿಶಿಷ್ಟ ಸನ್ನಿವೇಶ, ಭೌಗೋಳಿಕ ರಚನೆ, ಅಗತ್ಯಗಳಿಗೆ ಅನುಗುಣವಾಗಿ ಸೃಷ್ಟಿಯಾಗಿದ್ದು ವರ್ಷಗಳಿಂದ ಹರಿದುಬರುತ್ತಿರುವ ದೇಶೀಯ ಜ್ಞಾನ ಮತ್ತು ತಂತ್ರಜ್ಞಾನ [Indigenous Knowledge & Technologies]ಗಳತ್ತ ನಾವಿಂದು ಅವಶ್ಯಕವಾಗಿ ದೃಷ್ಟಿ ಹರಿಸಬೇಕು. ಇಂತಹ ದೇಶೀಯ ತಂತ್ರಜ್ಞಾನ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುತ್ತಾ ಅವುಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸುತ್ತ ಅಥವಾ ಅವುಗಳ ತತ್ವದ ಆಧಾರದ ಮೇಲೆ ಹೊಸ ಆವಿಷ್ಕಾರಗಳನ್ನು ಮಾಡುವತ್ತ ನಮ್ಮ ವಿಜ್ಞಾನಿಗಳು ಇಂದು ಯೋಚಿಸಬೇಕಾಗಿದೆ.

ಇಲ್ಲಿ ಗಮನಿಸಬೇಕಾಗಿರುವ ಮತ್ತೊಂದು ವಿಚಾರ ಎಂದರೆ ಈ ದೇಶೀಯ ತಂತ್ರಜ್ಞಾನ ವ್ಯವಸ್ಥೆ ನಮ್ಮ ಗ್ರಾಮೀಣ ಪರಿಸರ, ಅದರ ಅಗತ್ಯ, ಇತ್ಯಾದಿಗಳಿಗೆ ಹೊಂದಿಕೊಳ್ಳುತ್ತಾ ಹೇಗೆ ಬೆಳೆದುಕೊಂಡು ಬಂದಿದೆ ಎಂಬುದಕ್ಕೆ ಈ ಹಿಂದೆ ಪ್ರಕಟಿಸಿರುವ 'ಮಲೆನಾಡಹಿತ್ತಲು' ಅತೀ ಮಳೆ ಸಮಯದಲ್ಲಿ ಹೊರಗಿನಿಂದ ತರಕಾರಿಗಳು ದೊರೆಯುವುದು ಕಷ್ಟವಾದಾಗ, ಆ ಮಳೆಯ ವಾತಾವರಣಕ್ಕೆ ಹೊಂದಿಕೊಂಡ ತರಕಾರಿ, ಅವುಗಳ ತಳಿ, ಬೀಜಗಳನ್ನು ಹೇಗೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಅಂತಹ ತರಕಾರಿ ಬೀಜಗಳನ್ನು ಕೂಡಿಟ್ಟು, ನಂತರ ಕೃಷಿ ಮಾಡುವ ವಿಧಾನದಲ್ಲಿ ಸುಸ್ಥಿರ ಕೃಷಿ ಅಭಿವೃದ್ಧಿಯ ಲಕ್ಷಣಗಳು ಅಡಗಿರುವುದನ್ನು ನಾವು ಗಮನಿಸಬೇಕಾಗಿದೆ.

ನಮ್ಮ ರೈತ ಸಮುದಾಯವೂ ಈ ಬಗ್ಗೆ ಯೋಚಿಸುವುದು ಈಗ ಅಷ್ಟೇ ಮುಖ್ಯವಾಗಿದೆ. ತಮ್ಮ ಸುತ್ತಮುತ್ತಲೇ ದೊರೆಯುವ ಅಥವಾ ಬೇರೆ ಬೇರೆ ಸಮುದಾಯದ ರೈತರು ಮುಂದುವರಿಸಿಕೊಂಡು ಬಂದಿರುವಂತಹ ಹಲವಾರು ಕ್ರಮಗಳನ್ನು ಅರಿತು, ಅಳವಡಿಸಿ ಕೊಳ್ಳುವುದರ ಮೂಲಕ ಅವುಗಳ ಸೂಕ್ತತೆಯನ್ನು ಪರಿಶೀಲಿಸ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹಲವಾರು ರೋಗ, ಕೀಟ ಪೀಡೆಗಳ ನಿಯಂತ್ರಣ ಉಪಾಯಗಳನ್ನು, ಮುಂದೆ ಕೊಡಲಾಗಿದೆ.

1. ದೇಶೀ ಹತೋಟಿ ಕ್ರಮಗಳು

ಆ. ಶ್ರೀ. ಆನಂದ, ಶಿವಮೊಗ್ಗ

ನಮ್ಮ ಬೆಳೆಗಳಿಗೆ ಬೀಳುವ ಹಲವಾರು ಕೀಟಗಳಿಗೆ ರೋಗ ರುಜಿನಗಳಿಗೆ, ರೈತರೇ ಕಂಡುಹಿಡಿದಿರುವ ಕೆಲವು ಉಪಾಯಗಳು ಕುತೂಹಲಕಾರಿಯಾಗಿವೆ. ಬೆಳೆ, ಪರಿಸರ ರಕ್ಷಣೆ, ರೈತರ ಕೈಗೆಟುಕುವ ದೃಷ್ಟಿಗಳಿಂದಲಂತೂ ಇವು ಅತ್ಯಂತ ಪರಿಣಾಮಕಾರಿಯಾಗಿವೆ ಎನ್ನಬಹುದು.

1. ಜೋಳದ ಹೊಲದಲ್ಲಿ 'ಬಿಳಿ ಕಸ' (Striga asiatica) ಹತೋಟಿ:

ಜೋಳದ ಬೇರಿನೊಂದಿಗೆ ಸಖ್ಯ ಬೆಳೆಸಿ, ಜೋಳ ಹೀರುವ ಆಹಾರವನ್ನೇ ಕದ್ದು ಬದುಕುವ ಪರಾವಲಂಬಿ ಕಳೆ, ಬಿಳಿಕಸ ಬರಬರುತ್ತ ಜೋಳದ ಬೆಳವಣಿಗೆಗೆ ಕುಂಠಿತ, ತರುತ್ತದೆ. ಉಪ್ಪು ತಿಂದ ಮನೆಗೆ ದ್ರೋಹ ಬಗೆಯಬಾರದು ಎಂಬುದು ಬಿಳಿಕಸಕ್ಕೆ ಗೊತ್ತಿಲ್ಲವಲ್ಲ!

ಯಳವತ್ತಿಯ ಕೃಷಿಕ ಶ್ರೀ ಭರಮಗೌಡ್ರ ಜೋಳದ ಜೊತೆ ಕೊತ್ತಂಬರಿ ಬೆರೆಸಿ ಬಿತ್ತನೆ ಮಾಡುತ್ತಾರೆ. ಬಿಳಿ ಕಸದ ಕುತ್ತಿಗೆ ಹಿಸುಕುವ ಕೊತ್ತಂಬರಿ, ಮನೆ ಬಳಕೆಗೂ ಉಪಯುಕ್ತ ಸಂಬಾರ. ಸದ್ದಿಲ್ಲದೆ ಬಿಳಿಕಸವನ್ನು ಬೆಳೆಯಗೊಡದ ಕೊತ್ತಂಬರಿ ಈಗ ಜೋಳದ ಆತ್ಮೀಯ.

ಮೂರುವರೆ ಕೆ.ಜಿ. ಜೋಳಕ್ಕೆ 200ಗ್ರಾಂ ಕೊತ್ತಂಬರಿ ಬೀಜ ಬೆರಸಿ ಬಿತ್ತನೆ ಮಾಡುವ ಉಪಾಯ ದೊರೆತದ್ದು ಗೌಡರಿಗೆ ಅವರ ತಂದೆಯಿಂದ.

2. ಬದನೆಕಾಯಿ ಕೊರೆಯುವ ಹುಳದ ನಿಯಂತ್ರಣ:

ಇದೇ ಭರಮ ಗೌಡರು ಬಹು ರುಚಿಕಟ್ಟಿನ ಜನ. ರೊಟ್ಟಿಗೆ ಬದನೆ ಪಲ್ಯ ಆಗದಿದ್ದರೆ ಅವರಿಗೆ ಬಲು ಕೋಪ. ಆದರ ಈ ಬದನೆ ಕಂಡರೆ ! ಕಾಯಿಕೊರೆಯುವ ಹುಳಕ್ಕೂ ಅಷ್ಟೇ ಪ್ರೀತಿ. ಸಮಸ್ಯೆ ಶುರುವಾದ್ದು ಹೀಗೆ.

ಬದನೆಯ ಎರಡು ಸಾಲಿನ ನಡುವೆ ಸಬ್ಬಸ್ಸಿಗೆ ಬೆಳೆದರೆ ಹುಳದ ಉಪಟಳ ಕಡಿಮೆಯೆನ್ನುವ ತಂದೆಯ ಸಲಹೆಯನ್ನು ಹೊಲಕ್ಕೆ ತಂದಾಗ ಸಬ್ಬಸ್ಸಿಗೆ ಸುವಾಸನೆಯಿಂದ ಕಾಯಿಕೊರೆಯುವ ಹುಳಗಳು ಬದನೆ ಹತ್ತಿರ ಸುಳಿಯದಂತಾಗಿರುವುದು ಗೌಡರ ಅನುಭವ.

3. ಜೋಳದಲ್ಲಿ ಕಾಡಿಗೆ ರೋಗದ ನಿಯಂತ್ರಣ:

ಕಾಡಿಗೆ ರೋಗ ಉತ್ತರ ಕರ್ನಾಟಕದಲ್ಲಿ ಜೋಳ ಬೆಳೆಯುವ ರೈತರನ್ನು ಕಾಡುವ ಸಮಸ್ಯೆ. ಜೋಳದ ಕಾಳಿಗೆ ಕಾಡಿಗೆ ತಾಗಿದರೆ ಮುಗಿಯಿತು, ರೈತರಿಗೆ ಕೈಗೆ ಬಂದ ತುತ್ತು ಬಾಯಿಗಿಲ್ಲ.

ಶಿಲೀಂದ್ರ ಸ್ಪೆಸಲೊತೆಕ ಸೋರ್ಗಿ (Sphacelotheca Sorghi)ದಿಂದ ಹರಡುವ ಕಾಡಿಗೆ ರೋಗವನ್ನು ಹೊಲದಲ್ಲಿ ಕಾಣಿಸಿಕೊಂಡ ನಂತರ ಹತೋಟಿ ಮಾಡುವುದು ಸುಲಭದ ಮಾತಲ್ಲ. ನವಲಗುಂದದ ರೈತ ಭೀಮರೆಡ್ಡಿ ಶಿಲೀಂದ್ರದ ಬೇಕು-ಬೇಡಗಳನ್ನು ಅರಿತವರು. ಶಿಲೀಂದ್ರಕ್ಕೆ ಯಾವುದು ಪೂರಕ ಯಾವುದು ಮಾರಕ ಎಂಬ ಮಾಹಿತಿ ಅವರ ನಾಲಿಗೆಯಲ್ಲೇ ಇದೆ.

'ಎತ್ತಿನ ಉಚ್ಚೆ ಐತಲ್ರಿ, ಅದ್ರಾಗೆ ಬೀಜ ಎರಡು ನಿಮಿಷ ಅದ್ದಿ ತೆಗಿಬೇಕ್ರಿ, ಕೂಡಲೆ ಗಾಳಿಯಲ್ಲಿ ಬೀಜ ಆರುವಂತೆ ಹರಡ್ರಿ. ನಂತರ ಬಿತ್ರಿ ಸರ್ರ. ಅದಕ್ಕೆ ರೋಗ ಬಂದ್ರೆ ಹೇಳ್ರಿ'.ಎನ್ನುವ ರೆಡ್ಡಿ ರಾಸಾಯನಿಕ ಔಷಧಗಳನ್ನು ಕಾಡಿಗೆ ರೋಗಕ್ಕೆಂದು ಬಳಸಿಯೇ ಗೊತ್ತಿಲ್ಲ ಅನ್ನುತ್ತಾರೆ.

4. ಏಲಕ್ಕಿ ಬಿತ್ತನೆಯಲ್ಲಿ ಇರುವೆಗಳ ಹತೋಟಿ:

ಯಕಶ್ಚಿತ್ ಇರುವೆ, ಏಲಕ್ಕಿ ಕೃಷಿಕರಿಗೆ ದೊಡ್ಡ ತೊಂದರೆ, ನೆಲದಲ್ಲಿ ಊರಿದ ಏಲಕ್ಕಿ ಬೀಜಗಳನ್ನೇ ಮಂಗಮಾಯ ಮಾಡಿ ಬಿಡುವ ಇರುವೆಗೆ ಯಾವ ಸಲಹೆ ನಿಮ್ಮಲ್ಲಿದೆ?

ತುಂಬ ಆಸ್ತಿಕರಾದ ಹಿತ್ತಲಹಳ್ಳಿಯ ಶ್ರೀ ನಾಗೇಂದ್ರಭಟ್ಟರು ಒಮ್ಮೆ ವಿಭೂತಿ ಹಣೆಗೆ ಲೇಪಿಸಿಕೊಳ್ಳುವಾಗ ಮನಸ್ಸು ಏಲಕ್ಕಿ ಕಡೆ ಜಾರಿ ಏಲಕ್ಕಿಗೂ ವಿಭೂತಿ ಸಂಸ್ಕಾರ ಮಾಡಿ ಊರಿಬಂದರಂತೆ. ಏಲಕ್ಕಿಯ ಇರುವಿಕೆಯೇ ಅರಿವಾಗದೆ ಇರುವೆಗಳು ಹತ್ತಿರ ಸುಳಿಯಲಿಲ್ಲವಂತೆ. ಇದನ್ನು ತಿಳಿದ ಆಚೀಚೆಯ ಕೃಷಿಕರು ಕೂಡ ವಿಭೂತಿಯನ್ನು ಬೀಜಗಳಿಗೆ ಲೇಪಿಸಿ ಬಿತ್ತತೊಡಗಿದ್ದಾರೆ.



ಇದಕ್ಕೆ ಕಮ್ಮರಡಿ, ಬಸವನ ಗದ್ದೆ ರೈತರ ಅನುಭವವೇ ಬೇರೆ. ಬಸವನಗದ್ದೆಯ ರವಿ, ಕಮ್ಮರಡಿಯ ನರಸಿಂಹರ ಪ್ರಕಾರ ಏಲಕ್ಕಿಯನ್ನು ಚೆನ್ನಾಗಿ ನೀರಲ್ಲಿ ನೆನೆಸಿ ತೊಳೆದು ಅನಂತರ ರಂಗೋಲಿ ಪುಡಿ, ಮರಳು ಅಥವಾ ಬೂದಿಯಿಂದ ಸರಿಯಾಗಿ ಉಜ್ಜಿ ಬಿತ್ತಿದರೆ ಅದರಲ್ಲಿ ಸಿಹಿ ಅಂಶವೇ ಉಳಿಯದಿರುವುದರಿಂದ ಇರುವೆ ಏಲಕ್ಕಿಯ ಹತ್ತಿರ ಸುಳಿಯದು ಅನ್ನುತ್ತಾರೆ ಅವರು.

2. ಉಪದ್ರವಕಾರಿಗಳ ದೇಶೀ ಹತೋಟಿ ಕ್ರಮ

ಪಿ. ಆರ್. ಶೇಷಗಿರಿರಾವ್



ಕೋತಿ, ಹೆಗ್ಗಣಗಳಂತಹ ನಿರಂತರ ಉಪದ್ರವಕಾರಿಗಳ ಹತೋಟಿಗೆ ರೈತರೇ ಕಂಡುಕೊಂಡ ಕ್ರಮಗಳಂತೂ ಸಮಸ್ಯೆಗಳನ್ನು ಎದುರಿಸುವಲ್ಲಿ ಅವರು ತೋರಿಸುವ ಚಾಕಚಕ್ಯತೆಗೆ ಸಾಕ್ಷಿಯಾಗಿದೆ. ವಿಜ್ಞಾನಿ ಸಮುದಾಯ ಸಮಸ್ಯೆಯನ್ನು ಎದುರಿಸುವಲ್ಲಿ ನಮ್ಮ ರೈತರು ತೋರಿರುವ ಆ ಚತುರತೆಯನ್ನು, ಅವಶ್ಯಕವಾಗಿ ಅರಿಯಬೇಕಾಗಿದೆ. ಇದಕ್ಕೆ ಮುಂದಿನ ಎರಡು ಉದಾಹರಣೆಗಳ ಸಾಕ್ಷಿ.

ಅ. ತೆಂಗಿನ ತೋಟಗಳಲ್ಲಿ ಕೋತಿಗಳು

ತುಮಕೂರು ಜಿಲ್ಲೆಯ ಕೆಲಸ್ಥಳಗಳಲ್ಲಿ ತೆಂಗಿನ ತೋಟಗಳಲ್ಲಿ ಕೆಂಪು ಮೂತಿಯ ಕೋತಿಗಳ ಹಾವಳಿ ವಿಪರೀತ. ಇವು ಸಾಮಾನ್ಯವಾಗಿ ಹಿಂಡಾಗಿ ಬಂದು ಬಿಡುತ್ತವೆ. ತೆಂಗಿನ ಕಾಯಿಯನ್ನು ಆಹಾರಕ್ಕಾಗಿ ಮಾತ್ರ ತಿನ್ನದೆ, ಮೋಜಿಗಾಗಿ ಕೂಡಾ ಅವನ್ನು ಕಿತ್ತು ಕೆಳಗೆಸೆದು ಕುಣಿದು ಕುಪ್ಪಳಿಸುತ್ತವೆ. ಈ ಪ್ರದೇಶಗಳಲ್ಲಿ ಕೋತಿಗಳನ್ನು ಹೊಡೆದು ಸಾಯಿಸುವಂತಿಲ್ಲ. ಹೀಗಾಗಿ ಇಲ್ಲಿಯ ರೈತರು ಅವುಗಳನ್ನು ಹೊಡೆದು ಸಾಯಿಸದೆಯೇ, ಓಡಿಸುವ ಉಪಾಯಗಳನ್ನು ಹುಡುಕಿಕೊಂಡಿದ್ದಾರೆ.

1) ಮೊದಲು ಕೋತಿಗಳಿಗೆ ಇಷ್ಟವಾದಂತಹ ತಿಂಡಿ, ಬಾಳೆಹಣ್ಣು, ಒಣಕೊಬ್ಬರಿ ಹುರಿದ ಕಡಲೇಕಾಯಿ, ಬೆಲ್ಲ ಇವುಗಳನ್ನು ಒಂದು ನಿರ್ದಿಷ್ಟ ಜಾಗದಲ್ಲಿಟ್ಟು ಅವುಗಳು ಅಲ್ಲಿ ಬಂದು ತಿನ್ನುವುದಕ್ಕೆ ರೂಢಿ ಮಾಡಿಸುತ್ತಾರೆ. ಇಂತಹ ಸಮಯದಲ್ಲಿ ಸಾಮಾನ್ಯ ಗಟ್ಟಿಮುಟ್ಟಾಗಿರುವ ಆ ಹಿಂಡಿನ ನಾಯಕ ಮೊದಲು ಬಂದು ತಿಂಡಿ ತಿನ್ನುತ್ತದೆ. ಕೆಲವು ದಿನಗಳ ನಂತರ ತಿಂಡಿಯನ್ನು ಕಾಗದದಲ್ಲಿ ಸುತ್ತಿ ಇಟ್ಟಾಗಲೂ ಸಹ ಇದೇ ಕ್ರಮ ಮುಂದುವರೆಯುತ್ತದೆ.

ಇದು ಚೆನ್ನಾಗಿ ಅಭ್ಯಾಸವಾದ ನಂತರ, ಒಂದು ದಿನ ಈ ಕಾಗದದ ಪೊಟ್ಟಣದಲ್ಲಿ 2-3 ಅಡಿ ಉದ್ದದ ಸತ್ತ ಹಾವನ್ನು ಇಟ್ಟು ತಿಂಡಿಯ ಸ್ಥಳದಲ್ಲೇ ಇಡುತ್ತಾರೆ. ಎಂದಿನಂತೆ ಪೊಟ್ಟಣ ತೆಗೆದು ತಿಂಡಿ ತಿನ್ನಲು ಹೋಗುವ ನಾಯಕ ಸತ್ತ ಹಾವನ್ನು ನೋಡಿ ಗಾಬರಿಯಿಂದ ಕಿರುಚಲು ಶುರುಮಾಡುತ್ತದೆ. ಹಾವಿನ ತಲೆಯನ್ನು ಒಂದು ಕಾಲಿಂದ ಬಿಗಿಯಾಗಿ ಹಿಡಿದು, ಉಳಿದ ಮೂರು ಕಾಲಲ್ಲಿ ಜೋರಾಗಿ ಕಿರುಚುತ್ತಾ ತೋಟದಿಂದ ದೂರ ಓಡುತ್ತದೆ. ಈ ನಾಯಕನ ಹಿಂದೆ ಹಿಂಡೂ ಸಹ ಕಿರುಚುತ್ತಾ ಓಡಿಹೋಗುತ್ತದೆ. ಹೀಗೆ ಹೋದ ನಾಯಕ ಸುಮಾರು 4-5ಕಿ.ಮೀ. ದೂರದವರೆಗೂ ತನ್ನ ಮುಷ್ಟಿಯಿಂದ ಹಾವನ್ನು ಕೆಳಗೆ ಬಿಟ್ಟಿರುವುದಿಲ್ಲ. ಅನೇಕ ತಿಂಗಳುಗಳ ಕಾಲವಾದರೂ ಈ ಹಿಂಡು ತೋಟಕ್ಕೆ ಮತ್ತೆ ಬರುವುದಿಲ್ಲ.

2.ಇನ್ನು ಕೆಲವು ರೈತರು ಅವರ ತೋಟದ ಪ್ರದೇಶದಲ್ಲಿ ಅಡಿಕೆ ಮರದ ಕಾಂಡದಿಂದ ಅಥವಾ ಕಬ್ಬಿಣದ ಜಾಲರಿಯಿಂದ ಒಂದು ಪಂಜರವನ್ನು ತಯಾರಿಸಿ ಅದರಲ್ಲಿ ಕೋತಿಗೆ ಇಷ್ಟವಾದ

ತಿಂಡಿ ಇಟ್ಟು ಅಭ್ಯಾಸ ಮಾಡಿಸುತ್ತಾರೆ. ಹೀಗೆ ಅಭ್ಯಾಸವಾದ ಕೋತಿ ಒಳಗೆ ಹೋದ ನಂತರ ಪಂಜರದ ಬಾಗಿಲು ಎಳೆದು ಮುಚ್ಚುತ್ತಾರೆ. 1-2 ದಿನಗಳ ನಂತರ ಕೋತಿ ಸ್ವಲ್ಪ ಶಾಂತವಾದ ಮೇಲೆ ಅದರ ತಲೆಯನ್ನು ಕವಲು ಕಟ್ಟಿಗೆಯಿಂದ ಬಿಗಿಯಾಗಿ ಹಿಡಿದು ಅದರ ಹೊಟ್ಟೆಯ ಸುತ್ತಲೂ ಕುರಿಯ ಚರ್ಮವನ್ನು ಸುತ್ತಿ ಬೆನ್ನ ಬಳಿ ಹೊಲಿಗೆ ಹಾಕುತ್ತಾರೆ. ಆಗ ಈ ಕೋತಿ ವಿಕಾರವಾಗಿ, ಭಯಾನಕವಾಗಿ ಕಾಣುತ್ತದೆ. ಈ ಕೋತಿಯನ್ನು ಪಂಜರದಿಂದ ಹೊರಗೆ ಬಿಟ್ಟಾಗ ಅದರ ಹಿಂಡಿನ ಅನೇಕ ಕೋತಿಗಳು ಹೆದರಿ ಓಡಿ ಹೋಗುತ್ತವೆ. ಕೆಲವು ಕೋತಿಗಳು ಇದನ್ನು ಬೇರೆಯೆಂದು ಭಾವಿಸಿ ಕಚ್ಚಿ, ಜಗಳವಾಡುತ್ತವೆ. ಒಟ್ಟಿನಲ್ಲಿ ಇಡೀ ಹಿಂಡು ಚೆಲ್ಲಾಪಿಲ್ಲಿಯಾಗಿ ಈ ವಿಚಿತ್ರ ಕೋತಿಯ ಹತ್ತಿರ ಸುಳಿಯುವುದಿಲ್ಲ. ಕುರಿ ಚರ್ಮ ಹೊಲಿದ ಕೋತಿ ಕೆಲವು ಕಾಲದವರೆಗೂ ಒಂಟಿಯಾಗಿ ಇದ್ದು ಅನಂತರ ಬೇರೆಕಡೆಗೆ ಹೋಗುತ್ತದೆ.

(ಮಾಹಿತಿ: ನಾಗೇಂದ್ರರಾವ್, ಬಿ.ಎಸ್. R.F.O.,ಕೇಶವಮೂರ್ತಿ ಬಿ.ಇ. ಬೆಳ್ಳಾವೆ, ಚಿಕ್ಕನಾಯಕನಹಳ್ಳಿ ತಾಲೂಕು.)

ಆ. ಮನೆಯಲ್ಲಿರುವ ಹೆಗ್ಗಣಗಳು

ನಮ್ಮ ಬಯಲು ಸೀಮೆಯ ಮನೆಗಳಲ್ಲಿ ನೆಲಕ್ಕೆ ಬಂಡೆಗಳನ್ನು ಹಾಸಿ, ಸಂದು ಗಾರೆ ಮಾಡುವ ಪದ್ಧತಿ ಜಾಸ್ತಿ. ಇಂತಹ ಮನೆಗಳಲ್ಲಿ ಹಾಗೂ ಸಗಣಿ ನೆಲದ ಮನೆಗಳಲ್ಲಿ ದಾಸ್ತಾನು ಮಾಡಿದ ಶೇಂಗಾ ಕಾಳುಗಳು ಇಲ್ಲಿಯ ಹೆಗ್ಗಣಗಳಿಗೆ ಹಬ್ಬದೂಟವಾಗುವುದೇ ಹೆಚ್ಚು. ಇವುಗಳು ಇಷ್ಟಕ್ಕೇ ತೃಪ್ತರಾಗದೇ ರಾತ್ರಿಯಲ್ಲಿ ಬೇಸಿಗೆ ಸೆಕೆಗೆಂದು ಹೊರಗಡೆ ಮಲಗಿರುವ ಮನೆಯವರನ್ನು ತಮ್ಮ ಓಡಾಟಕ್ಕೆ ಅಡ್ಡಿಯೆಂದು ಆಗಾಗ ಕಚ್ಚುತ್ತವೆ. ಮನೆಯ ನೆಲದ ಕೆಳಗೆಲ್ಲಾ ಸುರಂಗಗಳನ್ನು ಮಾಡಿಕೊಂಡು ರಾತ್ರಿ ಹೊತ್ತು ಗುಂಪು ಗುಂಪಾಗಿ ಹೊರಗೆ ಬರುವ ಇವುಗಳನ್ನು ಹೊಡೆದು ಸಾಯಿಸಲೂ ಸಾಧ್ಯವಿಲ್ಲ. ಪಂಜರವಿಟ್ಟು ಪ್ರಯತ್ನಿಸಿದರೆ ದಿನಕ್ಕೆ ಒಂದೋ ಎರಡೋ ಹಿಡಿಯಬಹುದು. ಕೆಲವು ದಿನಗಳ ನಂತರ ಹೆಗ್ಗಣಗಳು ಅದರ ಬಳಿಯೂ ಸುಳಿಯುವುದಿಲ್ಲ. ಇವುಗಳಿಂದ ಬೇಸ್ತು ಬಿದ್ದ ನಮ್ಮ ರೈತರು ಹುಡುಕಿದ ಪರಿಹಾರೋಪಾಯಗಳು ಹೀಗಿವೆ.

1) ಪಂಜರ ಉಪಯೋಗಿಸಿ ಒಂದು ಹೆಗ್ಗಣವನ್ನು ಹಿಡಿಯುತ್ತಾರೆ. ಅನಂತರ ಒಂದೆರಡು ಕವಲು ಕಟ್ಟಿಗೆಗಳಿಂದ ಈ ಹೆಗ್ಗಣವನ್ನು ಬಿಗಿಯಾಗಿ ಹಿಡಿದು ಅದರ ಗುದದ್ವಾರವನ್ನು ದಪ್ಪವಾದ ದಾರ ಉಪಯೋಗಿಸಿ ಹೊಲಿಯುತ್ತಾರೆ. ಈ ರೀತಿ ಹೊಲಿಯುವಾಗ 1-2ಸಣ್ಣ ಗೆಜ್ಜೆಗಳನ್ನು ಸೇರಿಸುತ್ತಾರೆ. ಹೀಗೆ ಗೆಜ್ಜೆ ಹೊಲಿದ ಹೆಗ್ಗಣವನ್ನು ಅದರ ಬಿಲದ ಬಳಿ ಬಿಡುತ್ತಾರೆ ಕೂಡಲೆ ಬಿಲದೊಳಕ್ಕೆ ಹೋಗುವ ಹೆಗ್ಗಣದ ಓಡಾಟದಿಂದ ಅವುಗಳು ತೋಡಿರುವ ಸುರಂಗ ಮಾರ್ಗಗಳ ಜಾಡು ಗೊತ್ತಾಗುತ್ತದೆ. ಇದರಿಂದ ಬಿಲಗಳನ್ನು ಗುರುತಿಸಿ,



ಜನ ಅದರ ಹತ್ತಿರ ಕಟ್ಟಿಗೆಯೊಂದಿಗೆ ಸಿದ್ಧರಾಗುತ್ತಾರೆ. ಹೊಸದಾದ ಗೆಜ್ಜೆಯ ಶಬ್ದಕ್ಕೆ ಭಯಗೊಂಡ ಹೆಗ್ಗಣಗಳು ಬಿಲದಿಂದ ಹೊರಗೆ ಬರುತ್ತವೆ. ಅಥವಾ ಕೆಲವು ಗಂಟೆಗಳ ನಂತರ ಮಲವಿಸರ್ಜನೆ ಮಾಡಲು ತೊಂದರೆಯಾಗಿ ಈ ಹೆಗ್ಗಣ ಬೇರೆಯವುಗಳನ್ನು ಕಚ್ಚಲು ಶುರುಮಾಡುತ್ತದೆ. ಅಳಿದುಳಿದ ಹೆಗ್ಗಣಗಳು ಬೇಗ ಹೊರಗೆ ಓಡಿ ಬರುತ್ತವೆ. ಹೊರಗೆ ಬಂದ ಹೆಗ್ಗಣಗಳನ್ನು ಹೊಡೆದು ಸಾಯಿಸುತ್ತಾರೆ. ಕೆಲವನ್ನು ಮನೆಯಲ್ಲಿ ಸಾಕಿದ ನಾಯಿಗಳು ಅಟ್ಟಿಸಿಕೊಂಡು ಹೋಗಿ ಸಾಯಿಸುತ್ತವೆ. ತಪ್ಪಿಸಿಕೊಂಡು ಹೋದ ಹೆಗ್ಗಣಗಳು ಬಹಳ ದಿನಗಳ ಕಾಲ ವಾಪಾಸು ಬರುವುದಿಲ್ಲ. ಬಿಲಗಳನ್ನು ಗುರುತಿಸಿದ ಮನೆಯವರು ಅವುಗಳನ್ನು ಭದ್ರವಾಗಿ ಮುಚ್ಚುತ್ತಾರೆ. ಗೆಜ್ಜೆ ಹೊಲಿದ ಹೆಗ್ಗಣವೂ ಕೆಲ ದಿನಗಳಲ್ಲಿ ಸಾಯುತ್ತದೆ

(ಮಾಹಿತಿ: ಯರಗುಂಟಪ್ಪ, ಚನ್ನಕೇಶವಪುರ ಗ್ರಾಮ, ಪಾವಗಡ ತಾಲೂಕು.)

2) ಇನ್ನೊಂದು ಹತೋಟಿ ಕ್ರಮದಲ್ಲಿ , ಒಣಗಿದ ಜೋಳದ ಗಂಟಿನ ಒಳಗಡೆ ಇರುವ ಬೆಂಡನ್ನು ಹೊರಗೆ ತೆಗೆಯುತ್ತಾರೆ. ಈ ಬೆಂಡನ್ನು ಅರ್ಧ ಸೆಂ ಮೀ. ನಷ್ಟು ಸಣ್ಣ ತುಂಡುಗಳಾಗಿ ಮಾಡಿ ಕೈಯಿಂದ ಚೆನ್ನಾಗಿ ಹೊಸೆಯುತ್ತಾರೆ. ಈ ಬೆಂಡಿನ ಚೂರುಗಳಿಗೆ ಸ್ವಲ್ಪ ಬೆಲ್ಲದ ಪಾಕ ಸವರಿ ಒಂದೆರಡು ಹಿಡಿಯಷ್ಟನ್ನು ಹೆಗ್ಗಣದ ಬಿಲಗಳ ಹತ್ತಿರ ಅಥವಾ ಅವುಗಳು ಹೆಚ್ಚಾಗಿ ಓಡಾಡುವ ದಾರಿಯಲ್ಲಿ ಹರಡುತ್ತಾರೆ. ಸಿಹಿಯಾಗಿರುವ ಬೆಂಡನ್ನು ತಿಂದ ಹೆಗ್ಗಣಗಳಿಗೆ ಇವುಗಳನ್ನು ಜೀರ್ಣಿಸುವ ಶಕ್ತಿ ಇಲ್ಲ. ಹೊಟ್ಟೆಯೊಳಗಡೆ ಈ ಬೆಂಡಿನ ಚೂರುಗಳು ನೀರನ್ನು ಹೀರಿ ದಪ್ಪವಾಗಿ ಮಲವಿಸರ್ಜನೆಗೆ ತಡೆಯುಂಟುಮಾಡುತ್ತವೆ. ಕೆಲವು ದಿನಗಳ ನಂತರ ಹೆಗ್ಗಣ ಹೊಟ್ಟೆಯೂದಿ ಸಾಯುತ್ತದೆ.

ಮಾಹಿತಿ:ಕರಿಯಣ್ಣ, ಚೆನ್ನಕೇಶವಪುರ ಗ್ರಾಮ, ಪಾವಗಡ ತಾಲೂಕು.

೯. ಸೂರ್ಯಕಾಂತಿಯ ತೆನೆಕೊರೆಯುವ ಕಂಬಳಿ ಹುಳು

ಸೂರ್ಯಕಾಂತಿಯು ತೆನೆಗೆ ಬಂದಾಗ ಬೆಳೆಗಾರರಿಗೆ ಒಂದು ಸಮಸ್ಯೆ ಎದುರಾಗುತ್ತದೆ. ಸಾಮಾನ್ಯವಾಗಿ ಕಾಳುಕಟ್ಟುವ ಸಮಯದಲ್ಲಿ ತೆನೆಕೊರೆಯುವ ಕಂಬಳಿ ಹುಳುವಿನ ಹಾವಳಿ ಹೆಚ್ಚು. ಇನ್ನೇನು ಕೈಗೆ ಬಂದ ಬೆಳೆಯ ಕಾಳುಗಳನ್ನು ತಿಂದು ವಿಪರೀತ ನಷ್ಟ ಮಾಡುವ ಇದರ ಹತೋಟಿಗೆ ಕೀಟನಾಶಕದ ಉಪಯೋಗ ಅಷ್ಟೊಂದು ಸಮಂಜಸವಲ್ಲ. ಏಕೆಂದರೆ, ಇಂತಹ ಕೀಟನಾಶಕದಿಂದ ಪರಾಗಸ್ಪರ್ಶ ಮಾಡುವ ಜೇನುನೊಣ ಹಾಗೂ ಇತರ ಕೀಟಗಳು ಹೂವಿನ ಹತ್ತಿರ ಸುಳಿಯುವುದಿಲ್ಲ. ಒಂದು ವೇಳೆ ಇವುಗಳನ್ನು ಉಪಯೋಗಿಸಿದರೆ ನಮ್ಮ ಬಯಲು ಸೀಮೆಯಲ್ಲಿ ಅಳಿದುಳಿದ ಜೇನುನೊಣಗಳೂ ಹತ್ತಿರ ಬರದೆ ಕಾಳುಗಳು ಜೊಳ್ಳಾಗುತ್ತವೆ. ಇಂತಹ ಪರಿಸ್ಥಿತಿಗೆ ಸಿಕ್ಕಿದ ರೈತ ಮಿತ್ರರು ಕಂಡು ಹಿಡಿದ ತೆನೆಕೊರೆಯುವ ಕಂಬಳಿ ಹುಳುವಿನ ಹತೋಟಿ ಉಪಾಯ ಹೀಗಿದೆ:

ಸೂರ್ಯಕಾಂತಿ ಕಾಳು ಕಟ್ಟುವ ಸಮಯದಲ್ಲಿ ಬೆಳಿಗ್ಗೆ ಮತ್ತು ಸಂಜೆ ಕೈಗೆ ಬಿಳಿ ಬಟ್ಟೆಕಟ್ಟಿಕೊಂಡು ಹೂಗಳನ್ನು ಮುಟ್ಟಿ ಕೃತಕ ಪರಾಗಸ್ಪರ್ಶ ಮಾಡುವುದರಿಂದ ಇಳುವರಿ ಜಾಸ್ತಿಯಾಗುತ್ತದೆ. ಈ ರೀತಿ ಮಾಡುವಾಗ ಕತ್ತಾಳೆ ಗಿಡದ ಎಲೆಯ ತುದಿಯಲ್ಲಿರುವ ದಪ್ಪ ಮುಳ್ಳನ್ನು ತೆಗೆದುಕೊಂಡು ತೆನೆಯಲ್ಲಿರುವ ಕಂಬಳಿ ಹುಳವನ್ನು ಚುಚ್ಚಬೇಕು. ಸೂರ್ಯಕಾಂತಿಯ ತೆನೆಯಲ್ಲಿ ಕಂಬಳಿ ಹುಳುವಿನ ಹಿಕ್ಕೆಯಿಂದ ಮತ್ತು ಅದು ಕೊರೆದ ರಂಧ್ರದಿಂದ ಅದು ಇರುವ ಜಾಗವನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಕಂಬಳಿ ಹುಳವನ್ನು ಹೆಕ್ಕಿ ಹೊರತೆಗೆಯುವ ಅಗತ್ಯವಿಲ್ಲ. ಕೇವಲ ಅದಕ್ಕೆ ಗಾಯವಾದರೆ ಸಾಕು, ಹುಳುಗಳು ಸಾಯುತ್ತವೆ. ಸ್ವಲ್ಪ ಅಭ್ಯಾಸವಾದ ನಂತರ ಈ ಕೆಲಸ ಬೇಗ ಸಾಗುತ್ತದೆ. ಪ್ರತಿ ತೆನೆಯಲ್ಲಿ ಹುಳುವನ್ನು ಹುಡುಕುವಾಗ ಕೈಗೆ ಕಟ್ಟಿರುವ ಬಟ್ಟೆಯಿಂದ ಪರಾಗಸ್ಪರ್ಶವೂ ಆಗುತ್ತದೆ. ಪ್ರತ್ಯೇಕವಾಗಿ ಕೃತಕ ಪರಾಗಸ್ಪರ್ಶ ಮಾಡುವ ಅಗತ್ಯವೂ ಇಲ್ಲ.

(ಮಾಹಿತಿ:ಕೆ. ಎಂ. ಪ್ರಭಾಕರ, ಎಂ.ಎಸ್ಸಿ (ಅಗ್ರಿ), ಕೊತ್ತೂರು ಗ್ರಾಮ ಪಾವಗಡ ತಾಲೂಕು.)



ಹೊರ ರಾಜ್ಯಗಳಿಂದ

(ಅನುವಾದ - ಮಂಜುನಾಥ್)

ಹಿತ್ತಲಗಿಡದ ಮೂಲ ತತ್ವ ಎಂದರೆ ನಾಟೀ ಮೂಲದ ಈ ಎಲ್ಲ ತಂತ್ರಜ್ಞಾನ, ಅನುಶೋಧನೆಗಳನ್ನು ಒಂದು ಸಮುದಾಯದಿಂದ ಮತ್ತೊಂದು ಸಮುದಾಯದೊಡನೆ ವಿನಿಮಯ ಆಗುವಂತೆ ಪ್ರಯತ್ನಿಸುವುದು. ರೈತರು ಮತ್ತು ವಿಜ್ಞಾನಿಗಳೊಡನೆ ಒಂದು ರೀತಿಯ ವಿನಿಮಯವಾದರೆ ಒಂದು ಪ್ರದೇಶದ ರೈತ ಸಮುದಾಯದಿಂದ ಮತ್ತೊಂದು ಪ್ರದೇಶದ ರೈತ ಸಮುದಾಯದೊಡನೆ ವಿನಿಮಯವೂ ಅಷ್ಟೇ ಮಹತ್ವದ್ದಾಗಿರುತ್ತದೆ. ಅದರಲ್ಲೂ ರಾಜ್ಯ ರಾಜ್ಯಗಳ ನಡುವೆ ಭಾಷೆ, ಸಂಸ್ಕೃತಿಗಳ ಅಡಚಣೆ ಇರುವುದರಿಂದ, ಈ ಅಡಚಣೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಲು 'ಹನಿ ಬೀ'ಯ ಕೆಲ ಉಪಯುಕ್ತ ವಿಚಾರಗಳನ್ನು ಭಾಷಾಂತರಿಸಿ, ಈ ಮುಂದೆ ಕೊಡಲಾಗಿದೆ. ಇನ್ನು ಹಲವು ಇಂತಹ ಭಾಷಾಂತರಗಳನ್ನು ಕಾಮಧೇನು, ದೇಶೀಯ ಸಂಸ್ಥೆಗಳು ಮತ್ತಿತರರ ವಿಭಾಗದಲ್ಲೂ ಕೊಡಲಾಗಿದೆ. ಇದೇ ರೀತಿ ನಮ್ಮಲ್ಲಿ ದಾಖಲಾದ ವಿಚಾರಗಳನ್ನು ಬೇರೇ ಭಾಷೆಗೂ ಭಾಷಾಂತರಿಸಿ, 'ಹನಿ ಬೀ' ಜಾಲದ ಮೂಲಕ ಪ್ರಕಟಿಸುವ ಗುರಿ ನಮಗಿದೆ.

1) **ತೆನೆ ತಿಗಣೆ :** ಫೈಜಾಬಾದ್ ಜಿಲ್ಲೆಯ ರೈತರು ಬತ್ತದ ಗದ್ದೆಯಲ್ಲಿ ಕಂಡು ಬರುವ 'ತೆನೆ ತಿಗಣೆ' (Gundhi bug) ನಿಯಂತ್ರಣಕ್ಕೆ ಹಳೆಯ ಸೈಕಲ್ ಟಯರ್‌ನ್ನು ಸುಟ್ಟು ಗದ್ದೆಯ ಸುತ್ತ ಹೊಗೆ ಬರುವಂತೆ ಅದನ್ನು ಎಳೆದುಕೊಂಡು ಹೋಗಿ ಗಾಳಿ ಬೀಸುವ ದಿಕ್ಕಿನಲ್ಲಿ ನೇತುಹಾಕುತ್ತಾರೆ. ಟಯರ್ ಸುಟ್ಟ ವಾಸನೆ ಕೀಟವನ್ನು ಓಡಿಸುತ್ತದೆ ಎನ್ನುವುದು ಅವರ ಅನುಭವ.

2) **ತೆಂಗಿನ ಮೊಳಕೆ ಬರಿಸುವಿಕೆ :** ತೆಂಗಿನ ಕಾಯಿಯನ್ನು ಒಂದು ತಿಂಗಳ ಕಾಲ ಬಾವಿಯಲ್ಲಿ ಮುಳುಗಿಸಿಬಿಟ್ಟರೆ ಬೇಗ ಮೊಳಕೆ ಬರುತ್ತದೆಯೆಂಬುದು ಕೇರಳ ಮತ್ತು ಗುಜರಾತಿನ ರೈತರ ಅನುಭವ.

3) **ಅಂತರ್ಜಲ ಹುಡುಕಲು :** ಗೆದ್ದಲ ಹುತ್ತವಿರುವ ಜಾಗದ ಸಮೀಪದಲ್ಲಿ ಬಾವಿ ತೆಗೆದರೆ ನೀರು ದೊರೆಯುವ ಸಾಧ್ಯತೆಯಿದೆ ಎನ್ನುವುದು ಗುಜರಾತಿನ ರೈತರ ಅನುಭವ.

4) **ಗಾಳಿ ಹೊಡೆತದಿಂದ ಬೆಳೆ ಸಂರಕ್ಷಿಸುವ ವಿಧಾನ :** ಸೌರಾಷ್ಟ್ರ ಪ್ರಾಂತ್ಯದ ರೈತರು ಶೇಂಗಾ ಬೆಳೆಯ ಅಂಚಿನಲ್ಲಿ ಜೋಳ ಅಥವಾ ತೃಣಧಾನ್ಯಗಳನ್ನು ಬಿತ್ತುವುದರ ಮೂಲಕ ಶೇಂಗಾ ಬೆಳೆಯನ್ನು

ಸಮುದ್ರ ತೀರದ ಉಪ್ಪುಗಾಳಿ (Salty air) ಹೊಡೆತದಿಂದ ತಡೆದಿದ್ದಾರೆ. ಇದೇ ಉದ್ದೇಶಕ್ಕಾಗಿ ಕಸಿ ಮಾವಿನ ತೋಪುಗಳಲ್ಲಿ ತೊಗರಿ ಬೆಳೆಯನ್ನು ಕೆಲವು ರೈತರು ಬೆಳೆಸುತ್ತಿರುವರು. ಹಾಗೇ ನೇಗಿಲು ಸಾಲುಗಳನ್ನು ತೆಗೆಯುವುದರ ಮೂಲಕ ಮುಂಗಾರಿನ ಪೂರ್ವದಲ್ಲಿ ಎದುರಾಗುವ ಗಾಳಿ ಹೊಡೆತದಿಂದ ಸಸಿಗಳನ್ನು ಸಂರಕ್ಷಿಸುವುದನ್ನು ಸೌರಾಷ್ಟ್ರ ಮತ್ತು ರಾಜಸ್ಥಾನದ ಶುಷ್ಕ ವಾತಾವರಣವಿರುವ ಪ್ರಾಂತ್ಯದ ರೈತರು ಸರ್ವೇ ಸಾಮಾನ್ಯವಾಗಿ ರೂಢಿಸಿಕೊಂಡು ಬಂದಿರುವರು.

5) ನಾನಾ ಬಗೆಯ ಬದಲಿ ವಿಧಾನಗಳ ಅಳವಡಿಕೆ :

"ಭರುಚ್" ಪ್ರಾಂತ್ಯದ ಕೆಲವು ಗುಡ್ಡಗಾಡು ಗ್ರಾಮಗಳಲ್ಲಿ ರೈತರು ತಮ್ಮ ಹೊಲದಲ್ಲಿ ವಿವಿಧ ಹವಾಮಾನಕ್ಕನುಗುಣವಾದ ಅತ್ಯಲ್ಪ, ಮಧ್ಯಮ ಮತ್ತು ದೀರ್ಘಾವದಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಈ ರೀತಿ ತಳಿಗಳಿಂದ ಹಸಿರು ತರಕಾರಿ ಮತ್ತು ಕಾಳು ಅನುಭೋಗಕ್ಕೆ ಅಥವಾ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುವುದಕ್ಕೆ ನಿರಂತರವಾಗಿ ಲಭಿಸುವಂತಾಗಿದೆ. ಬಿತ್ತನೆ ಆಧಾರದ ಮೇಲೆ ಅಲ್ಪಾವಧಿಯ ಹೆಸರು, ತೊಗರಿ ಕಾಳುಗಳು ಅಕ್ಟೋಬರ್ ಮಾಸದಲ್ಲಿ ಮಧ್ಯಮಾವಧಿ ತಳಿಗಳು ನವೆಂಬರ್ ಮತ್ತು ಡಿಸೆಂಬರ್‌ಗಳಲ್ಲಿ, ತಡವಾಗಿಬಿತ್ತಿದ ತಳಿಯು ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಲಭ್ಯವಾಗುತ್ತಿವೆ. ಈ ರೀತಿಯ ತೊಗರಿ ತಳಿ ಬಿತ್ತನೆ ವಿಧಾನದಿಂದ ಕಾಯಿ ಕೊರೆಯುವ ಹುಳುಗಳ ಹಾವಳಿ ತಡೆಯಬಹುದಾಗಿದೆ ಎಂಬುದು ರೈತರ ಅನುಭವ.

6) ಮೊಟ್ಟೆಗಳ ಸಂರಕ್ಷಣೆ :

ಇದೇ ಪ್ರಾಂತ್ಯದ ಗ್ರಾಮೀಣ ಸ್ತ್ರೀಯರು ಬೇಸಿಗೆ ಕಾಲದಲ್ಲಿ ಮೊಟ್ಟೆಗಳನ್ನು ಬೂದಿ ತುಂಬಿದ ಮಣ್ಣಿನ ಮಡಿಕೆಯಲ್ಲಿ ಬಚ್ಚಿಡುತ್ತಾರೆ. ಉಷ್ಣಾಂಶವನ್ನು ಕಾಪಾಡುವುದರ ಮೂಲಕ ಮೊಟ್ಟೆ ಗಳನ್ನು ಹಾಳಾಗುವಿಕೆಯಿಂದ ತಪ್ಪಿಸುವುದು ಇದರ ಮೂಲ ಉದ್ದೇಶ ವಾಗಿದೆ.

ಬರಪೀಡಿತ ಪ್ರದೇಶದಲ್ಲಿ ಬತ್ತದ ಬೆಳೆ

ಡಾ. ಎಸ್. ಸುಬ್ರಹ್ಮಣ್ಯಂ

ಹೆಚ್ಚು ಮಳೆ ಬೀಳುವ, ನೀರಾವರಿ ಅಥವಾ ಮಳೆ ಆಶ್ರಿತ ಭೂಭಾಗಗಳಲ್ಲಿ ಬತ್ತ ಬೆಳೆಯುವುದು ಸರ್ವೇ ಸಾಮಾನ್ಯ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ಬರಪೀಡಿತ ಪ್ರದೇಶಗಳಲ್ಲೊಂದು. ವಾರ್ಷಿಕ 750 ಮಿ.ಮೀ. ಗಿಂತ ಕಡಿಮೆ ಮಳೆ ಬೀಳುತ್ತದೆ. 1990 - 91ರಲ್ಲಿ ತಾಲ್ಲೂಕು ಬರಕ್ಕೆ ತುತ್ತಾಗಿತ್ತು. ಆದರೆ ಪಟ್ಟನಗೆರೆ ಗ್ರಾಮ ಹೆಚ್ಚು ಒಣಭೂಮಿಯನ್ನು ಹೊಂದಿದ್ದೂ, ಕೆಲವು ರೈತರು ಮಳೆ ಆಶ್ರಿತ ಭೂಮಿಯಲ್ಲಿ ಬತ್ತದ ಫಸಲನ್ನು ಬೆಳೆಯುತ್ತಿದ್ದಾರೆ. ಗ್ರಾಮ ಬರದ ಪ್ರಕೋಪಕ್ಕೆ ಈಡಾಗಿ, ಪಕ್ಕದಲ್ಲಿರುವ ರಾಗಿ ಹೊಲ ಒಣಗಿದರೂ ಕೂಡಾ, ಬತ್ತದ ಬೆಳೆ ಅದರ ಪ್ರಭಾವಕ್ಕೆ ಹೆಚ್ಚು ತುತ್ತಾಗಲಿಲ್ಲ. ಸುತ್ತ ಮುತ್ತ ಪ್ರದೇಶಗಳಲ್ಲಿ ಸಾಧಾರಣವಾಗಿ ಯಾವ ತಳಿಯನ್ನು ಬಿತ್ತನೆಗೆ ಬಳಸಲಾಗಿದೆ ಎಂದು ಗ್ರಾಮಸ್ಥರಲ್ಲಿ ವಿಚಾರಿಸಿದಾಗ ಅವರು 'ಸಾಲು ಭತ್ತ' ಅಥವಾ 'ಕೆಂಪು ಭತ್ತ' ಎಂದು ತಿಳಿಸಿದ್ದಾರೆ. ರಾಗಿ ಮತ್ತು ಜೋಳ ತಳಿಗಿಂತಲೂ ಇದು ಹೆಚ್ಚು ಬರನಿಗ್ರಹ ಶಕ್ತಿಯನ್ನು ಹೊಂದಿದ್ದರಿಂದ ಅದು ಹೆಚ್ಚು ರೈತರನ್ನು ಆಕರ್ಷಿಸಿದೆ. ಉತ್ತಮ ಮಳೆ, ಯೋಗ್ಯ ರೀತಿಯ ಜೈವಿಕ ಹಾಗೂ ರಾಸಾಯನಿಕ ಗೊಬ್ಬರ ಬಳಕೆ ಮಾಡಿದ್ದೇ ಆದಲ್ಲಿ ಎಕರೆ ಒಂದಕ್ಕೆ 12 ಕ್ವಿಂಟಾಲ್ ಇಳುವರಿಯನ್ನು ತೆಗೆಯಬಹುದು. ಕನಿಷ್ಠ 4 ಕ್ವಿಂಟಾಲ್ ಇಳುವರಿಯನ್ನು ಕಡಿಮೆ ಮಳೆ ಸಂದರ್ಭದಲ್ಲಿ ಜೈವಿಕ ಹಾಗೂ ರಾಸಾಯನಿಕ ಗೊಬ್ಬರ ಬಳಕೆ ಮಾಡದೇ ಪಡೆಯಬಹುದು ಎಂದು ತಿಳಿದು ಬಂದಿರುತ್ತದೆ.

ಭತ್ತದ ಬೀಜಗಳ ಬಿತ್ತನೆ, ಕೂರಿಗೆಯಿಂದ ಇತರೇ ಬರ ತಳಿಗಳ ರೀತಿಯಲ್ಲಿ ಮಾಡುತ್ತಾರೆ. ಸಸಿ ಮಡಿಗಳ ಅಗತ್ಯಗಳಿಲ್ಲ. ಆದರೆ ಬಿತ್ತನೆ ಮಾಡುವಾಗ ಮಣ್ಣು ತೇವಾಂಶದಿಂದ ಕೂಡಿರಬೇಕು ಹೆಚ್ಚಾಗಿ ಆಗಸ್ಟ್ ತಿಂಗಳು ಬಿತ್ತನೆಗೆ ಯೋಗ್ಯವಾದ ಕಾಲ. ಫಸಲಿಟ್ಟ ನಾಲ್ಕು ತಿಂಗಳ ನಂತರ ಕಟಾವಿಗೆ ಬರುತ್ತದೆ. ಡಿಸೆಂಬರ್ ತಿಂಗಳ ಶೀತ ವಾತಾವರಣ ಬೆಳೆಗೆ ಯೋಗ್ಯವಲ್ಲ. ಸಾಧಾರಣವಾಗಿ ರಾಸಾಯನಿಕ ಗೊಬ್ಬರ ಬಳಕೆ ಮಾಡುವುದಿಲ್ಲ. ಒಂದು ವೇಳೆ ಬಳಸಿದಲ್ಲಿ ಆಗಸ್ಟ್ ತಿಂಗಳ ನಂತರದ ದಿನಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಬಳಸುತ್ತಾರೆ.

ಗ್ರಾಮಸ್ಥರ ಅನುಭವದ ಪ್ರಕಾರ ತಳಿಯು ಸಂಪೂರ್ಣ ಬೆಂಕಿರೋಗದಿಂದ ಮುಕ್ತವಾಗಿದೆ. ಹುಲ್ಲು (ಮೇವು) ತುಂಬಾ ಉತ್ತಮವಾಗಿದ್ದು ಹಸುಗಳು ಹೆಚ್ಚು ಇಷ್ಟಪಡುತ್ತವೆ. ಬತ್ತದ ಕಾಳು ಗಿಡ್ಡವಾಗಿ ಹೆಚ್ಚು ದಪ್ಪವಾಗಿದ್ದು ಹೆಚ್ಚು ಒಣಗಿಸಿದರೂ ತುಂಡಾಗದು. ಕಾಳುಗಳು ತೆನೆಯಲ್ಲಿ ತುಂಬಾ ಒತ್ತಾಗಿದ್ದು ಅವುಗಳು ಕಟಾವಿನ ಸಂದರ್ಭದಲ್ಲಿ ಹೆಚ್ಚಾಗಿ ಉದುರುವುದಿಲ್ಲ. ಮಲೆನಾಡಿನ ಪ್ರದೇಶದಲ್ಲಿ ಕೂರಿಗೆ ಮೂಲಕ ಬಿತ್ತುವ ಭತ್ತದ ತಳಿಗೂ ಈ ತಳಿಗೂ ತುಂಬಾ ವ್ಯತ್ಯಾಸವಿದೆ. ಪೈರು ಸಾಧಾರಣ ಭತ್ತದ ತಳಿಗಿಂತ ಎತ್ತರವಾಗಿದ್ದು ಎಲೆಗಳು (ಗರಿ) ಗುಲಾಬಿ ವರ್ಣದಿಂದ ಕೂಡಿರುತ್ತದೆ. ಆದರೆ ಅಗತ್ಯ ಬಿತ್ತನೆ ಬೀಜಗಳು ರೈತರ ಹತ್ತಿರ ದೊರೆಯುತ್ತವೆ ಹೊರತು ಮಾರುಕಟ್ಟೆಯಲ್ಲಿಲ್ಲ. (ಕೃಪೆ : ಹನಿ ಬೀ)

ಹಿತ್ತಲಗಿಡದ ವಿಶೇಷ ವ್ಯಕ್ತಿ ಪ್ರೊ. ಅನಿಲ್ ಗುಪ್ತಾ

ರೈತ ಮೂಲದ ಶೋಧನೆ ಮತ್ತು ಸಾಧನೆಯನ್ನು ಗುರುತಿಸುವ ಪ್ರಾಮುಖ್ಯದ ಪ್ರಯತ್ನ 'ಹನಿ ಬೀ ನೆಟ್ ವರ್ಕ್' (ಹನೀ ಬೀ ಜಾಲ). ಸಂಶೋಧನೆ ಅಥವಾ ಸಂಶೋಧಕ ಪ್ರವೃತ್ತಿ ವಿದ್ಯಾವಂತರಿಗೆ ಮಾತ್ರ ಸೀಮಿತವಲ್ಲ. ಯಾವುದೇ ಹಳ್ಳಿಯ ಮೂಲೆಯ ವಿದ್ಯಾವಂತ ಅಥವಾ ಅವಿದ್ಯಾವಂತ ವ್ಯಕ್ತಿ ಸಂಶೋಧಿಸಿದ ಸುತ್ತಲಿನ ಜನರಿಗೆ ಉಪಯುಕ್ತವಾಗುವಂತಹ ಸಾಧನೆಗಳನ್ನು ಗುರುತಿಸುವುದು ಮಾತ್ರವಲ್ಲದೆ ಅವರ ಬುದ್ಧಿಸ್ವಾಮ್ಯದ ಹಕ್ಕಿಗೆ (Intellectual property rights) ಹೋರಾಡಿ ಅದಕ್ಕೆ ಬೆಲೆ ದೊರಕಿಸಿಕೊಡುವುದರ ಉದ್ದೇಶ ಈ 'ಹನಿ ಬೀ ಜಾಲ'ಕ್ಕಿದೆ.

ರೈತರು, ಸಂಶೋಧಕರು, ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು ಇವರುಗಳ ನಡುವೆ "ಸುಸ್ಥಿರ ಕೃಷಿ ಪದ್ಧತಿ" ಕುರಿತಾದ ಚರ್ಚೆ ಹುಟ್ಟು ಹಾಕುವುದು ಹಾಗೂ ಅದಕ್ಕೆ ಸೂಕ್ತವಾಗುವಂತಹ ದೇಶೀಯ ಜ್ಞಾನವನ್ನು ಕ್ರೋಢೀಕರಿಸಿ ದಾಖಲಿಸುವುದೂ 'ಹನಿ ಬೀ ಜಾಲ'ದ ಮುಖ್ಯ ಉದ್ದೇಶಗಳಲ್ಲೊಂದು. ಹಳ್ಳಿ ಮೂಲೆಯಲ್ಲಿರುವ ಸಂಶೋಧನಾ ಪ್ರವೃತ್ತಿಯ ರೈತಾಪಿ ವರ್ಗದ ಜನರನ್ನು ಮತ್ತು ಅವರ ಕೆಲಸವನ್ನು ಗುರುತಿಸಿ, ಅದನ್ನು ದಾಖಲಿಸಿ, ಬೆಳಕಿಗೆ ತರುವುದಕ್ಕಾಗಿಯೇ ನಡೆಸುತ್ತಿರುವ ಪತ್ರಿಕೆ 'ಹನೀ ಬೀ .' ಈಗಾಗಲೇ ಇಂತಹ ಸಹಸ್ರಾರು ದೇಶೀಯ ತಂತ್ರಜ್ಞಾನವನ್ನು ಗುರುತಿಸಿ, ದಾಖಲೆಗೊಳಿಸಿ ಇದಕ್ಕೆ ಅಂತರ ರಾಷ್ಟ್ರೀಯ ಜಾಲವನ್ನು ಏರ್ಪಡಿಸಿರುವ ಹೆಗ್ಗಳಿಕೆ ಈ 'ಹನೀ ಬೀ'ಗೆ ಇದೆ. ಇಂಗ್ಲೀಷಿನಲ್ಲಿ ಬರುತ್ತಿರುವ ಈ ಪತ್ರಿಕೆಗೆ ಸಮಾನಾಂತರವಾಗಿ ಬೇರೆ ಬೇರೆ ಹೆಸರುಗಳಲ್ಲಿ ತಮಿಳು, ಗುಜರಾತಿ, ಹಿಂದಿ, ಮಲೆಯಾಳಂ, ಒರಿಯಾ, ಹಾಗೂ ಭೂತಾನಿ ಭಾಷೆಗಳಲ್ಲಿ ಕೂಡಾ 'ಹನೀ ಬೀ ಜಾಲ'ಕ್ಕೆ ಸೇರಿದ ಪತ್ರಿಕೆಗಳು ಬರುತ್ತಿದೆ. ಇದಕ್ಕೆ ಹೊಸದಾಗಿ ಸೇರಿದ ಕನ್ನಡ ಪತ್ರಿಕೆ ನಮ್ಮ ಈ 'ಹಿತ್ತಲ ಗಿಡ'.

ಈ 'ಹನೀ ಬೀ ಜಾಲ'ದ ಹಿಂದಿನ ಪ್ರೇರೇಪಣಾ ಶಕ್ತಿ ಹಾಗೂ ವ್ಯಕ್ತಿ ಅಹಮದಾಬಾದಿನ, ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಕೆ. ಅನಿಲ್ ಗುಪ್ತಾ. ತನ್ನ ಬಗ್ಗೆ ಸ್ವಲ್ಪವೂ ಹೇಳಿಕೊಳ್ಳದೆ, ಬೇರೆಯವರನ್ನು ಗುರುತಿಸಲು ಪ್ರಯತ್ನಿಸುವ ಈ ವ್ಯಕ್ತಿಯನ್ನು ಗುರುತಿಸಿ ಗೌರವಿಸಿದ್ದು ಅಮೇರಿಕಾದ ಮಿಚಿಗನ್ ವಿಶ್ವವಿದ್ಯಾನಿಲಯದ ಪ್ಯೂ ಚಾರಿಟೆಬಲ್ ಟ್ರಸ್ಟ್. ಪರಿಸರ ಕಾಳಜಿ ಹೊಂದಿದ್ದು ಅದರ ಸಂರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಹತ್ತು ಜನ ಸಂಶೋಧಕರನ್ನು 1993ರಲ್ಲಿ ಗುರುತಿಸಿದ ಈ ಸಂಸ್ಥೆ. ಅಂತಹವರಲ್ಲೊಬ್ಬರೆಂದು ಡಾ. ಕೆ. ಅನಿಲ್ ಗುಪ್ತಾರವರನ್ನು ಪರಿಗಣಿಸಿ 1,50,000 ಡಾಲರ್ ಹಣವನ್ನು ಪ್ರಶಸ್ತಿಯಾಗಿ ಅವರ ಮುಂದಿನ 3 ವರ್ಷಗಳ ಕೆಲಸಕ್ಕಾಗಿ ಕೊಡಲಿದೆ. "ಸೃಷ್ಟಿ" (SRISTI-Society for Research and Initiatives for Sustainable Technologies and Institutions)ಯ ಮೂಲಕ ಅನಿಲ್ ಗುಪ್ತಾರವರು ಹನೀ ಬೀ ಜಾಲದ ಕೆಲಸವನ್ನು ಮತ್ತಷ್ಟು ಬಲಗೊಳಿಸುವ ಪ್ರಯತ್ನದಲ್ಲಿದ್ದಾರೆ.

ಗೋಪಾಲಕೃಷ್ಣ ಅಡಿಗರ "ಭೂಮಿಗೀತ"ದಿಂದ

ಹಾಡಿಯಲಿ ಮರಮರದ ಕೆಳಗೆ ಧೂಪದ ದಟ್ಟಕಾಯಿ ಚಿಗಿತೆಳೆಮೊಳಕೆ, ನರಳು ಕೇಕೆ;
ಮಳೆಮಂತ್ರದಂಡ ಮುಟ್ಟಿದ ತಿಟ್ಟುನಿಟ್ಟಿನಲಿ ನೆಲವೆಲ್ಲ ಮೊಳೆ, ಮೊಳಕೆ, ಕೊನರು, ಸಸಿ, ಗಿಡ, ಹುಲ್ಲು;
ತೋಟಗೋರಟೆಗೆ ಮೈಯಲ್ಲಿ ಕಾಮನ ಬಿಲ್ಲು ಬಲ್ಬು ಮಾದಕದೀಪ, ಚೆಲ್ಲು,ಗುಲ್ಲು.
ನಂದ ಬಟ್ಟಲನೆತ್ತಿ ತುಟಿಗಿಟ್ಟು ನರ್ತಿಸಿತು ಅಂದುಗೆಯನಾಡಿಸುತ ಬಂದ ಭೃಂಗ;
ಹಿತ್ತಲ ಜಗಲಿ ಮೇಲೆ ಕುಳಿತು ಧುಮ್ಮಿಕ್ಕಿದೆನು ಕೆಳಗೆ ಮತ್ತೂ ಕೆಳಗೆ, ತಳಕೆ ಕುಂಗ.
ಹಸುರುತೆರೆ ಅಪ್ಪಳಿಸುತಿರೆ ಮೇಲೆ ನೊರೆಕಾರಿ, ಬೀಸುತಿರೆ ಬಿರುಗಾಳಿ, ಗುಡುಗು ಮೊಳಗೆ,
ತಳದಾಣೆ ಮುತ್ತುಗಳ ಮತ್ತು ದೀಪ್ತಿಗೆ ಕಣ್ಣು ಕುಕ್ಕಿ ಕುರುಡಾಡಿದೆನು ಸಂಜೆವರೆಗೆ
ಬುಂಡೆಗಂಟಿದ್ದ ತುಟಿ ಕಿತ್ತರೂ ಕಲ್ಪನೆ ಹೆಂಡ ಹೊಂಡದ ಸೆಲೆಯ ಹುಡುಕುತಿತ್ತು.
ಬೇಲಿ ಮೇಗಡೆ, ಗದ್ದೆಯಂಚಲ್ಲಿ, ತೋಪುಗಳ ಅಂಗುಲಂಗುಲದಲ್ಲಿ ತೋಟದೊಳಗೆ.

ಕೂಚುಭಟ್ಟ

ದೇಶೀಯ ಜ್ಞಾನ, ತಂತ್ರಜ್ಞಾನ, ಸಂಸ್ಥೆಗಳ ಬಗ್ಗೆ ಪುಸ್ತಕ, ಪತ್ರಿಕೆಗಳೇ ಅಪರೂಪ. ಆದರೆ ಇರುವ ಕೆಲವೇ ಕೆಲವು ಅಂತಹ ಪ್ರಯತ್ನಗಳಲ್ಲಿ ಎರಡನ್ನು ಹುಡುಕಿ ಮುಂದಿಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಮೊದಲನೆಯದು ಪ್ರಾಚೀನ ಕೃಷಿ ತಂತ್ರಗಳು ಎನ್ನುವ ಕಿರುಪುಸ್ತಕ, ಎರಡನೆಯದು ದೇಶೀಯ ಜ್ಞಾನ ಮತ್ತು ಅಭಿವೃದ್ಧಿ ಮಾನಿಟರ್ ಎಂಬ ಪತ್ರಿಕೆ.

1. ಪ್ರಾಚೀನ ಕೃಷಿ ತಂತ್ರಗಳು : ಪ್ರೊ. ಎಚ್. ಕೆ. ನರಸಿಂಹಗೌಡ ಮತ್ತು ಗೋವಿಂದರಾಜು - ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ಬೆಲೆ. ರೂ. 0.25 ಪೈಸೆ.

ಭಾರತೀಯ ಸಂಸ್ಕೃತಿಯಷ್ಟೇ ಪ್ರಾಚೀನವಾದ ಮತ್ತು ಅದರೊಳಕ್ಕೆ ಆಳವಾಗಿ ಬೇರು ಬಿಟ್ಟಿರುವ ಕೃಷಿ ತಂತ್ರಗಳನ್ನು ಮತ್ತೊಮ್ಮೆ ಆಧುನಿಕ ದೃಷ್ಟಿಯಿಂದ ತೂಗಿ ನೋಡುವುದು ಉಚಿತ. ಹೀಗೆ ವಿಮರ್ಶಿಸುವಾಗ ಪ್ರಾಚೀನ ಕಾಲದಲ್ಲಿ ವ್ಯವಸಾಯ ಹೇಗಿತ್ತು. ಅಲ್ಲಿ ರೈತರ ಪಾತ್ರವೆಂತಹುದು ಮುಂತಾದುವುಗಳನ್ನು ತುಲನಾತ್ಮಕವಾಗಿ ಚರ್ಚಿಸಬಹುದು. ಈ ಹಿನ್ನೆಲೆಯಲ್ಲಿ 'ಪ್ರಾಚೀನ ಕೃಷಿ ತಂತ್ರಗಳು' ಪುಸ್ತಕ, ಒಂದು ಉತ್ತಮ ಅವಲೋಕನ ಗ್ರಂಥ.

ಅಂದು ನಮ್ಮ ಪೂರ್ವಿಕರು ಗುರುತಿಸಿದ್ದ ಕೃಷಿಯ ಮುಖ್ಯ ಚಟುವಟಿಕೆಗಳಾದ ಭೂಮಿಯನ್ನು ಹದಗೊಳಿಸುವಿಕೆ, ಬೀಜ ಬಿತ್ತುವಿಕೆ, ಬೆಳೆದ ಧಾನ್ಯಗಳನ್ನು ಕೊಯಿಲು ಮಾಡುವುದು, ನಮ್ಮ ಆಧುನಿಕ ಕೃಷಿಯಲ್ಲೂ ಪ್ರಸ್ತುತವಾಗಿದೆ. ಸಾಮೂಹಿಕ ಬೇಸಾಯ, ಗೋಮಾಳ ಮುಂತಾದುವುಗಳು ಆಗ ಮುಖ್ಯವಾಗಿದ್ದವು. ಇಂತಹ ವಿಧಾನಗಳು ಕ್ರಮೇಣ ಮರೆತುಹೋಗಿ, ಈಗ ಇದರ ಅಗತ್ಯವಿದೆ ಎಂದು ಹೇಳುತ್ತಿದ್ದೇವೆ. ಉಳುವವರು, ಬಿತ್ತುವವರು, ಕೊಯ್ಲುಗಾರರು, ಸಂಗ್ರಾಹಕರು, ವಿತರಣೆಗಾರರು ಎಂದು ಕೃಷಿಗಾರರಲ್ಲೇ ವಿಂಗಡಣೆ ಇದ್ದುದರ ಫಲವಾಗಿ ಆಯಾ ಗುಂಪಿನ ಜನರು ಅಂದು ತಮ್ಮ ತಮ್ಮ ಕಾರ್ಯಗಳಲ್ಲಿ ನೈಪುಣ್ಯತೆ ಸಾಧಿಸಿದ್ದರು. ಕೃಷಿಯನ್ನು ತಮ್ಮ ಬಾಳಿನಾಧಾರವಾದ ಕಸುಬು ಎಂದು ನಂಬಿದ್ದರಿಂದಲೇ ಕೃಷಿಯಲ್ಲಿ ಬಳಸುತ್ತಿದ್ದ ಉಪಕರಣಗಳು ಮತ್ತು ಕೃಷಿಯ ಅವಿಭಾಜ್ಯ ಅಂಗಗಳಾದ ಭೂಮಿ ಮತ್ತು ದನಕರುಗಳು ಪೂಜಾರ್ಹವಾಗಿದ್ದವು.

ವಿವಿಧ ಬೀಜಗಳನ್ನು ಹೇಗೆ ಬಿತ್ತಬೇಕು ಎಂಬುದರ ಬಗ್ಗೆ ಹಿಂದೆ ಸ್ಪಷ್ಟ ವಿವರಣೆ ಇತ್ತು. ಉದಾಹರಣೆಗೆ, ಕಬ್ಬಿನ ಕತ್ತರಿಸಲ್ಪಟ್ಟ ತುದಿಗಳನ್ನು, ಜೇನು, ಬೆಣ್ಣೆ ಹಾಗೂ ಹಂದಿಯ ಕೊಬ್ಬುಗಳನ್ನು ಹಸುವಿನ ಸಗಣಿಯಲ್ಲಿ ಬೆರೆಸಿ, ಸವರಿ ಅನಂತರ ನೆಡಬೇಕು. (ಹಸುವಿನ ಸಗಣಿ ಮತ್ತು ಕೊಬ್ಬುಗಳನ್ನು ಕತ್ತರಿಸಿದ ಭಾಗಕ್ಕೆ ಸವರಿ ಬಿತ್ತುತ್ತಿದ್ದದ್ದು ನೀರಿನ ಆವಿ ನೆಟ್ಟ ಕಾಂಡಗಳಿಂದ ಕಡಿಮೆ ಗೊಳಿಸಬಹುದು ಜೊತೆಗೆ ಸಗಣಿ ಚೋದಕವಾಗಿರುವುದರಿಂದ ಅದರಿಂದ ಕಬ್ಬು ಚಿಗುರಲಿ ಎಂಬ ಭಾವನೆ ಇದ್ದಿರಬಹುದು.) ಪ್ರಾಚೀನವಾದ ನಮ್ಮ ಬೃಹತ್ ಸಂಹಿತೆಯಲ್ಲಿ ಕೆಲವು ಸಸ್ಯಗಳ ಅಭಿವೃದ್ಧಿಯ ಆಧಾರದ ಮೇಲೆ ಉಳಿದ ಸಸ್ಯಗಳ ಬೆಳವಣಿಗೆಯನ್ನು ನಿರೀಕ್ಷಿಸಿದ ಬಗ್ಗೆ ಉದಾಹರಣೆಗಳಿವೆ. ಅಶೋಕ ವೃಕ್ಷದಲ್ಲಿ ವಿಪುಲವಾಗಿ ಹೂ ಬಿಟ್ಟರೆ ಕೆಂಪು ಭತ್ತವು ಸಮೃದ್ಧಿಯಾಗುತ್ತೆ ಎನ್ನಲಾಗಿದೆ. ಹಾಗೆಯೇ, ಅರಳೀ ಮರದ ಸಮೃದ್ಧವಾದ ಹೂಗಳಿಂದ ಎಲ್ಲ ಧಾನ್ಯಗಳು, 'ಅತಿಮುಕ್ತಕ' ಮತ್ತು ಮಲ್ಲಿಗೆಯಿಂದ ಹುರುಳಿಯ ಸಮೃದ್ಧಿಯನ್ನೂ ನಿರೀಕ್ಷಿಸಬಹುದೆಂದು ಹೇಳಲಾಗಿದೆ. 'ಚರಕ ಸಂಹಿತೆ'ಯಲ್ಲಿ ಭೂ ಲಕ್ಷಣಗಳಿಗನುಗುಣವಾಗಿ ವ್ಯವಸಾಯ ಯೋಗ್ಯ ಜಮೀನನ್ನು ಜಂಗಳ, ಅನೂಪ ಮತ್ತು ಸಾಧಾರಣವೆಂದು ಮೂರು ಭಾಗಗಳಾಗಿ ವಿಂಗಡಿಸುವುದನ್ನು ವಿವರಿಸಲಾಗಿದೆ. ಭೂಮಿಯ ಕೆಲವು ಲಕ್ಷಣಗಳಿಂದಲೇ ಅದು ಇಂತಿಂಥ ಬೆಳೆಗಳಿಗೆ ಯೋಗ್ಯ ಎಂದು ವಿವರಿಸಲಾಗಿದೆ.

ಮಾನವ ಸಂಪರ್ಕ ಸಸ್ಯಗಳ ಮೇಲೆ ಏನಾದರು ಪರಿಣಾಮ ಬೀರುತ್ತದೆಯೇ ಎಂಬ ಪ್ರಶ್ನೆಗೆ ಹಿಂದೆ ಅನೇಕ ಉದಾಹರಣೆಗಳನ್ನು ಕೊಡಲಾಗಿದೆ. 'ಪದ್ಮಿನಿ' ಜಾತಿಯ ಸ್ತ್ರೀ ಸರ್ವಾಲಂಕಾರ ಭೂಷಿತಳಾಗಿ ಬಾಯಿಗೆ ನೀರು ತುಂಬಿಕೊಂಡು ಮುಕ್ಕಳಿಸಿ, ಮರದ ಬುಡದಲ್ಲಿ ಉಗುಳಿದರೆ ಬಕುಳಿ ವೃಕ್ಷವೂ ಸಹ ಹೂ ಬಿಡುತ್ತದೆ, ಮಾವಿನ ಮರ ಇನ್ನೇನು ಹೂ ಬಿಡುತ್ತದೆಯೆನ್ನುವಾಗ ಯುವತಿಯು ತುದಿ ಉಗುರಿನಿಂದ ಕೆರೆದರೂ ಸಹ ಪುಳಕಿತವಾಗುತ್ತದೆ ಎನ್ನಲಾಗಿದೆ.

ನಾವು ಇಂದು ಹೇಳುತ್ತಿರುವ ಸಾಲು ನಾಟಿ, ಮಿಶ್ರ ಬೇಸಾಯ, ಭೂಮಿಗೆ ವಿಶ್ರಾಂತಿ ಕೊಡುವಿಕೆ, ಬೆಳೆ ಸರದಿ ಇತ್ಯಾದಿಗಳು ಹೊಸದೇನಲ್ಲ. ಹಳೆಯ ತಂತ್ರಗಳೇ ಬಣ್ಣ ಬಳಿದುಕೊಂಡು ಆಧುನಿಕತೆಯ ಈ ಕಾಲದಲ್ಲಿ ಥಳಥಳಿಸುತ್ತಿದೆ ಅಷ್ಟೆ. ಈ ದೃಷ್ಟಿಕೋನದಿಂದ, ಪ್ರಾಚೀನ ಕಾಲದಲ್ಲಿ ಅಭಿವೃದ್ಧಿ ಹೊಂದಿದ್ದು ಮತ್ತು ಇಂದಿನವರೆಗೂ ಮುಂದುವರೆದುಕೊಂಡು ಬಂದಿರುವ ಹಲವಾರು ಕೃಷಿ ತಂತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಆಧುನಿಕ ವ್ಯವಸಾಯವೇ ಹಿರಿದು, ಮತ್ತು ಪ್ರಾಚೀನ ಕೃಷಿ ಪದ್ಧತಿಗಳು ಕೇವಲ ದೃಷ್ಟಾಂತ ಹಾಗೂ ಶುಷ್ಕ ಊಹಾಪೋಹಗಳು ಎಂಬ ವಾದವನ್ನು ಮರುಚಿಂತನೆಗೆ ಒಳಪಡಿಸಬೇಕಾಗುತ್ತದೆ.

(ಇಂತಹ ಉಪಯುಕ್ತ ಪುಸ್ತಕ ಈಗ ಲಭ್ಯವಿರುವುದಿಲ್ಲ. ಇದರ ಮರು ಮುದ್ರಣಕ್ಕೆ ಸಂಬಂಧಿಸಿದವರು ಪ್ರಯತ್ನಿಸುವುದು ಈಗ ಅತ್ಯಗತ್ಯವಾಗಿರುತ್ತದೆ. -ಸಂ.)

2. ದೇಶೀಯ ಜ್ಞಾನ ಮತ್ತು ಅಭಿವೃದ್ಧಿ ಮಾನೀಟರ್(Indigeneous Knowledge and Development Monitor) ಪತ್ರಿಕೆ, ನೆದರ್‌ಲ್ಯಾಂಡ್

ಇಂಡಿಜೀನಸ್ ನೋಲೆಡ್ಜ್ ಅಂಡ್ ಡೆವೆಲಪ್‌ಮೆಂಟ್ ಮಾನಿಟರ್ (ದೇಶೀಯ ಜ್ಞಾನ ಮತ್ತು ಅಬಿವೃದ್ಧಿಯ ಮಾನೀಟರ್) ಎಂಬ ಹೆಸರಿನ ಈ ಪತ್ರಿಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ 'ಸ್ಥಳೀಯ ಜ್ಞಾನ' ಹಾಗೂ ಅದರ ದಾಖಲಾತಿ ಬಗ್ಗೆ ಆಸಕ್ತಿಯುಳ್ಳವರ ನಡುವಿನ ಚರ್ಚೆಗಾಗಿ ಮೀಸಲಾದ ಪತ್ರಿಕೆ.

ಜೂನ್ 1992ರಲ್ಲಿ ರಿಯೋ ಡಿ ಜನ್ನೈರೋದಲ್ಲಿ ನಡೆದ ಪರಿಸರ ಹಾಗೂ ಅಭಿವೃದ್ಧಿ ಕುರಿತು ಸಮ್ಮೇಳನವು ಜೀವ ವೈವಿಧ್ಯತೆಯನ್ನು ಸಂರಕ್ಷಿಸುವ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿತು. ಅದರ ಜೊತೆಗೇ ಪ್ರಾಮುಖ್ಯತೆ ಪಡೆದ ಇನ್ನೊಂದು ಅಂಶವೆಂದರೆ ಸ್ಥಳೀಯ ಜನರ ಜ್ಞಾನ ಸಂರಕ್ಷಣೆ. 'ಜೀವ ವೈವಿಧ್ಯತೆ' ಕಾಪಾಡುವುದು ಮತ್ತು ಅದರ ಮೂಲಕ 'ಸುಸ್ಥಿರ ಅಭಿವೃದ್ಧಿ' ಪಾಲಿಸುವುದು ಇವೆಲ್ಲದಕ್ಕೂ ಮೂಲವಾದ ಸ್ಥಳೀಯ ಜನರು ಹಾಗೂ ಅವರ ಜ್ಞಾನ ಭಂಡಾರದ ಸಂರಕ್ಷಣೆ ಇಲ್ಲಿ ಪ್ರಾಮುಖ್ಯತೆ ಪಡೆಯುವಂತಾಯಿತು.

ಈ ಸ್ಥಳೀಯ ಜನರ ಜ್ಞಾನ ಹಾಗೂ ಅವರ ಅನ್ವೇಷಣೆಗಳನ್ನು ಗುರುತಿಸಿ ದಾಖಲಿಸುವುದಕ್ಕೆ ಜಗತ್ತಿನ ವಿವಿಧ ಮೂಲೆಯಲ್ಲಿ, ವಿವಿಧ ದೇಶಗಳಲ್ಲಿ ಕೆಲವು ಸಂಸ್ಥೆಗಳು ಈಗಾಗಲೇ ದುಡಿಯುತ್ತಿವೆ. ಇಂತಹ ಸಂಸ್ಥೆಗಳು, ಅದರ ಹಿಂದಿನ ವ್ಯಕ್ತಿಗಳು, ಅವರು ಗುರುತಿಸಿ ದಾಖಲಿಸಿದ ಸ್ಥಳೀಯ ಜ್ಞಾನ ಸಂಪತ್ತು ಹಾಗೂ ಅನ್ವೇಷಣೆಗಳು ಪರಸ್ಪರ ಸಂಪರ್ಕ ಹೊಂದಿ ಹಂಚಿಕೊಳ್ಳುವ ವ್ಯವಸ್ಥೆಯೊಂದಿದ್ದರೆ ಈ ಜ್ಞಾನ ಎಲ್ಲರ ಉಪಯೋಗಕ್ಕೂ ದೊರಕುವಂತಾಗುವುದು ಎಂಬ ಕಾರಣದಿಂದ ಸಂಪರ್ಕ ಜಾಲವೊಂದನ್ನು ಸ್ಥಾಪಿಸುವ ಉದ್ದೇಶ ಅನೇಕರಲ್ಲಿ ಹುಟ್ಟಿಕೊಂಡಿತ್ತು. ಅಮೇರಿಕಾದ ಅಯೋವಾ ರಾಜ್ಯದ ಸಿ.ಕೆ.ಐ.ಆರ್.ಡಿ, ನೆದರ್‌ಲ್ಯಾಂಡ್ ದೇಶದ ಸಿ. ಐ.ಆರ್.ಎ.ಎಫ್ ಹಾಗೂ ಎಲ್.ಇ.ಎ.ಡಿ. ಈ ಮೂರು ಸಂಸ್ಥೆಗಳ ನಿರ್ದೇಶಕರು ಮುಂದಾಗಿ 1992ರ ಮೇಯಲ್ಲಿ ಇಂತಹ ಒಂದು ಜಾಗತಿಕ ಜಾಲವನ್ನು ಸ್ಥಾಪಿಸಿದರು. ವಿವಿಧ ದೇಶಗಳ ಸ್ಥಳೀಯ ಜ್ಞಾನವನ್ನು ಹಂಚಿಕೊಳ್ಳಲು, ಚರ್ಚಿಸಲು ವೇದಿಕೆಯೊಂದರ ಅಗತ್ಯವನ್ನು ಮನಗಂಡು ಆ ಉದ್ದೇಶದಿಂದ ದೇಶೀಯ ಜ್ಞಾನ ಮತ್ತು ಅಭಿವೃದ್ಧಿ ಮಾನಿಟರ್ (Indigenous knowledge and development monitor) ಎಂಬ ಈ ಪತ್ರಿಕೆಯನ್ನು ಹೊರ ತಂದರು.

ಇದರ ಮೊದಲ ಪ್ರತಿ ಹೊರಬಂದದ್ದು 1993ರಲ್ಲಿ. ವರ್ಷದಲ್ಲಿ 3 ಪ್ರತಿಗಳನ್ನು ಹೊರತರುವ ಈ ಪತ್ರಿಕೆ ಸ್ಥಳೀಯ ಜ್ಞಾನದ ದಾಖಲಾತಿ ಹಾಗೂ ಅದರ ಅಭಿವೃದ್ಧಿಯಲ್ಲಿ ಆಸಕ್ತಿಯಿರುವ ಎಲ್ಲ ದೇಶಗಳ ಸಂಸ್ಥೆ ಹಾಗೂ ವ್ಯಕ್ತಿಗಳಿಗಾಗಿ ಮೀಸಲಾಗಿರುತ್ತದೆ, ಹಾಗೂ ಅವರಿಂದ ವಿಷಯ ಹಾಗೂ ಲೇಖನಗಳನ್ನು ಸ್ವಾಗತಿಸುತ್ತದೆ. ಕೇವಲ ವಿಷಯವನ್ನು ದಾಖಲಿಸುವುದಷ್ಟೇ ಅಲ್ಲದೆ, ಅದರ ಸಾಧ್ಯಾಸಾಧ್ಯತೆ ಬಗ್ಗೆ ಚರ್ಚೆ ಹಾಗೂ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು ಕೂಡಾ ಇದರ ಉದ್ದೇಶವಾಗಿರುತ್ತದೆ.

ಹೊಸ ಓದು

ಟೆಂಡಿಂಗ್ ದಿ ಅರ್ಥ್-ವಿನ್ನಿನ್ ಪೆರೀರಾ
TENDING THE EARTH

ಭಾರತೀಯ ಪಾರಂಪರಿಕ ಬೇಸಾಯ ಪದ್ಧತಿ ಪ್ರಪಂಚದಲ್ಲಿಯೇ ಅತ್ಯಂತ ಹಳೆಯದಾದ ಹಾಗೂ ಮುಂದುವರಿದ ಬೇಸಾಯ ಸಂಸ್ಕೃತಿ. ತಲೆಮಾರುಗಳನ್ನು ದಾಟಿಯೂ ಸುಸ್ಥಿರತೆಯನ್ನುಳಿಸಿಕೊಂಡು ಮುಂದಿನ ಜನಾಂಗದ ಆಶೋತ್ತರಗಳನ್ನು ಒಡಲೊಳಗಿಟ್ಟುಕೊಂಡು ಈ ಬೇಸಾಯ ಪದ್ಧತಿ, ಒಟ್ಟಾರೆ ಅತ್ಯನ್ನಚೈತನ್ಯ, ಸ್ವಾವಲಂಬನೆ, ಜೀವವೈವಿದ್ಯತೆ ಹಾಗೂ ದೇಶೀಯ ಜ್ಞಾನದ ಅಗಾಧತೆ ಯನ್ನೊಳಗೊಂಡು ಜಾಗತಿಕ ಶ್ರೇಷ್ಟತೆಯನ್ನು ಗಳಿಸಿಕೊಂಡಿದೆ.

ಇದೊಂದು ಮಹತ್ತರವಾದ ಪುಸ್ತಕ. ಈ ಪುಸ್ತಕದ ಲೇಖಕ ವಿನಿನ್ ಪೆರೀರಾ ತಮ್ಮ ಇಪ್ಪತ್ತೈದು ವರ್ಷಗಳ ಸುದೀರ್ಘ ಅವಧಿಯಲ್ಲಿ ಕಲೆ ಹಾಕಿದ, ವಿಶ್ಲೇಷಿಸಿದ ಅಮೂಲ್ಯ ದೇಶೀಯ ಜ್ಞಾನ ಭಂಡಾರದಿಂದ ಆಯ್ದ ಬಹುಮುಖ್ಯ ವಿಚಾರಗಳನ್ನು ಸರಳಗೊಳಿಸಿದ ಸಾರಾಂಶಗಳನ್ನು ತಿಳಿಸಿದ್ದಾರೆ. ಪೆರೀರಾ ಅವರ ಬಹುಮುಖೀ ದೃಷ್ಟಿಕೋನದ ಮಂಡಿಸಿರುವ ರೀತಿ ಅನನ್ಯವಾಗಿದ್ದು, ಅದರ ಪ್ರಚೋದಕತೆ, ಪುಸ್ತಕ ಓದುಗನನ್ನು ಆವರಿಸಿಕೊಳ್ಳುವಂತೆ ಮಾಡುತ್ತದೆ. ಯಾರಾದರೂ ಸರಿ ನಮ್ಮ ಆರೋಗ್ಯವಂತ ನಾಳೆಗಳಿಗಾಗಿ ಭೂಮಿಯನ್ನು ಆರೈಕೆಮಾಡುವ ಹಂಬಲವುಳ್ಳವರು ಮತ್ತು ಈ ಭೂಮಿಯ ಎಲ್ಲ ನಿವಾಸಿಗಳೂ ಓದಲೇಬೇಕಾದ ಪುಸ್ತಕ ಪಾರಂಪರಿಕ ಬೇಸಾಯ ಮತ್ತು ಸಂಸ್ಕೃತಿಯೊಳಗಿನ ಅಪಾರ ಅನುಭವ ಮತ್ತು ಜ್ಞಾನವನ್ನೂ, ಅದರ ಕ್ರಿಯಾಶೀಲ ಶೋಧಕ ಗುಣಗಳನ್ನೂ ನಮ್ಮ ಸುಸ್ಥಿರತೆಗಾಗಿ, ನ್ಯಾಯಯುತ ಜೀವನಕ್ಕೆ ಮಾರ್ಗದರ್ಶಿ ಎಂದು ಒಪ್ಪಿಕೊಳ್ಳಬೇಕಾಗಿದೆ.



ನಾಟಿ ಪಶುಸಂಗೋಪನಾ ವಿಧಾನಗಳು

ಅನುವಾದ - ಡಾ.ಎಂ. ನಾರಾಯಣಸ್ವಾಮಿ

ಪಶುಸಂಗೋಪನೆಗೆ, ಅದರಲ್ಲೂ ಪಶುಗಳ ರೋಗ ಚಿಕಿತ್ಸೆಗೆ ನಮ್ಮಲ್ಲಿ ನಾಟಿ ವಿಧಾನಗಳ ಕೊರತೆಯೇ ಇಲ್ಲವೆನ್ನಬಹುದು. ದನಗಳಲ್ಲಿ ಸಾಮಾನ್ಯವಾಗಿ ಬರುವ ಹಾಲು ಜ್ವರಕ್ಕೆ ಉಪಚಾರ ಹಾಗೇ ಮತ್ತಿತರ ನಾಟಿ ಪಶು ಸಂಗೋಪನೆ ವಿಧಾನಗಳನ್ನು ಈ ಮುಂದೆ ಕೊಡಲಾಗಿದೆ. ಇವುಗಳನ್ನು ಹೊರ ರಾಜ್ಯಗಳಲ್ಲಿ ಮತ್ತು ಭೂತಾನಿನಲ್ಲಿ ಅಳವಡಿಸುತ್ತಿದ್ದು, ನಮ್ಮ ಮೂಲ ಪತ್ರಿಕೆ, 'ಹನಿ ಬೀ'ಯಿಂದ ಭಾಷಾಂತರಿಸಲಾಗಿದೆ.

1. ದನಗಳಲ್ಲಿ ಹಾಲುಜ್ವರದ ನಿಯಂತ್ರಣ

ಹಾಲು ಜ್ವರ (ಮಿಲ್ಕ್ ಫೀವರ್) ಕರು ಹಾಕಿದ ನಂತರ ಹಸು ಮತ್ತು ಎಮ್ಮೆಗಳಲ್ಲಿ ಕ್ಯಾಲ್ಸಿಯಂ ಲವಣದ ಕೊರತೆಯಿಂದುಂಟಾಗುವ ಕಾಯಿಲೆ. ಚಳಿಜ್ವರ, ನಿತ್ರಾಣ, ಮೇವು ತಿನ್ನಲು ಹಾಗೂ ನೀರು ಕುಡಿಯಲು ಅಸಡ್ಡೆ ತೋರುವುದು ಈ ಕಾಯಿಲೆಯ ಮುಖ್ಯ ಲಕ್ಷಣಗಳು. ಗಿಣ್ಣುಹಾಲಿನಲ್ಲಿ ಕ್ಯಾಲ್ಸಿಯಂ ಲವಣ ಅಧಿಕವಾಗಿರುತ್ತದೆ. ಗಿಣ್ಣು ಹಾಲನ್ನು ಸಂಪೂರ್ಣವಾಗಿ ಕರೆದುಬಿಟ್ಟರೆ ದೇಹದಲ್ಲಿ ಕ್ಯಾಲ್ಸಿಯಂ ಲವಣದ ಕೊರತೆಯುಂಟಾಗಿ ಹಾಲು ಜ್ವರ ಬರಬಹುದು. ಇದನ್ನು ತಡೆಯಲು ಗುಜರಾತಿನ ಕೆಲರೈತರು ಈ ಕೆಳಕಂಡ ವಿಧಾನಗಳನ್ನು ಪಾಲಿಸುತ್ತಾರೆ.

ಅ) ಹಾಲುಜ್ವರದಿಂದ ನರಳುತ್ತಿರುವ ದನದ ಪಕ್ಕದಲ್ಲಿ ಬೆಂಕಿ ಹಾಕಿ, ಪ್ರಾಣಿಯನ್ನು ಗೋಣಿಚೀಲದಿಂದ ಹೊದಿಸಿ ಚಳಿಯಾಗದಂತೆ ನೋಡಿಕೊಳ್ಳುವುದು. ಹಾಗೆಯೇ ದನದ ಕೊಟ್ಟಿಗೆಯನ್ನು ಬೆಚ್ಚಗಿರುವಂತೆ ಮಾಡುವುದು. ಹೀಗೆ ಮಾಡುವುದರಿಂದ ದೇಹದ ಉಷ್ಣತೆಯನ್ನು ಕಾಪಾಡಿಕೊಂಡಂತಾಗಿ ಶರೀರದಲ್ಲಿ ಜೀವರಾಸಾಯನಿಕ ಕ್ರಿಯೆಗಳು ಸುಗಮವಾಗಿ ನಡೆದು ಕಾಯಿಲೆಯಿಂದ ಚೇತರಿಸಿಕೊಳ್ಳಲು ಸಹಾಯವಾಗುತ್ತದೆ.

ಆ) ದನಗಳು ಕರು ಹಾಕಿದ ನಂತರ ಅಲ್ಪ ಸ್ವಲ್ಪ ನಿತ್ರಾಣಗೊಂಡಿದ್ದು ಕಂಡುಬಂದರೆ ನಿಧಾನವಾಗಿ ಸ್ವಲ್ಪದೂರ ನಡೆಸುತ್ತಾರೆ. ಇಂತಹ ಸರಳ ಚಟುವಟಿಕೆಯಿಂದ ಕಾಲಿನ ಮಾಂಸಖಂಡಗಳಿಗೆ ರಕ್ತ ಸಂಚಲನ ಸುಗಮಗೊಂಡು ಮುಂಬರಬಹುದಾದ ನಿತ್ರಾಣದ ನಿಯಂತ್ರಣವಾಗುತ್ತದೆ.

ಇ) ಕರು ಹಾಕಿದಾಗ ಅಥವಾ ಅದಕ್ಕಿಂತ ಮೊದಲು ಪೋಷಕಾಂಶಯುಕ್ತ ಆಹಾರಗಳಾದ ಬೇಯಿಸಿದ ಸಜ್ಜೆ, ಬೆಲ್ಲ, ತಿನ್ನುವ ಎಣ್ಣೆ, ಬೆಣ್ಣೆ ಮತ್ತು ಮೊಟ್ಟೆಗಳನ್ನು ಉಣಿಸಲಾಗುವುದು. ಈ ಪೋಷಕಾಂಶ ಆಹಾರಗಳು ಶಕ್ತಿಯ ಮೂಲವಾಗಿದ್ದು ದನಗಳು ಬಲಯುತವಾಗುವಂತೆ ಮಾಡುತ್ತವೆ. ಮೇವು ತಿನ್ನಲು ಅಸಡ್ಡೆ ತೋರುವ ದನಗಳಿಗೆ ಉಪ್ಪು, ಅರಿಶಿಣ, ಶುಂಠಿ, ಹಿಂಗು, ಕರಿಮೆಣಸುಗಳಂತಹ ಹಸಿವುಂಟು ಮಾಡುವ ಆಹಾರಗಳನ್ನು ಕೊಡುವುದರಿಂದ ಮೇವು ತಿನ್ನಲು ಆರಂಭಿಸುತ್ತವೆ.

ಈ) ಕರು ಹಾಕಿದ ನಂತರ ಹಾಲು ಜ್ವರ ಬರದಂತೆ ತಡೆಯಲು ಒಂದೆರಡು ದಿನಗಳವರೆಗೆ ಗಿಣ್ಣು ಹಾಲನ್ನು ಅರ್ಧ ಮಾತ್ರ ಕರೆಯಲಾಗುವುದು. ಇದರಿಂದ ಸ್ವಲ್ಪ ಪ್ರಮಾಣದ ಕ್ಯಾಲ್ಸಿಯಂ ದೇಹದಲ್ಲೇ ಉಳಿಯಬಹುದಾದ್ದರಿಂದ ಹಾಲುಜ್ವರ ಬರುವುದಿಲ್ಲ.

ಮೇಲಿನ ವಿಧಾನಗಳು ಹಾಲು ಜ್ವರವನ್ನು ನಿಯಂತ್ರಿಸುವುದರೊಂದಿಗೆ 'ಸೌಮ್ಯವಾದ ಹಾಲು ಜ್ವರ'ವನ್ನು ವಾಸಿ ಮಾಡಲು ಸಹಕಾರಿಯಾಗಿವೆಯೆಂದು ಗುಜರಾತಿನ ಪಶುವೈದ್ಯಕೀಯ ಕಾಲೇಜಿನ ಅಧ್ಯಾಪಕರುಗಳಾದ ಪಿ. ಆರ್. ಪಟೇಲ್, ಎಫ್. ಎಸ್. ಕವನಿ, ಕೆ. ಎಂ. ಜಾಧವ್ ಮತ್ತು ಆರ್. ಎಂ. ಪಟೇಲ್ ಅಭಿಪ್ರಾಯಪಟ್ಟಿದ್ದಾರೆ. ಹಾಲು ಜ್ವರ ಉಲ್ಬಣಗೊಂಡಲ್ಲಿ ಪಶುವೈದ್ಯರನ್ನು ಕಂಡು ಚಿಕಿತ್ಸೆ ಕೊಡಿಸಬೇಕು.

2) ಕ್ಯಾಸ್ಟ್ರೇಷನ್ (ಬೀಜ ಒಡೆಯುವುದು) ನಂತರ:

ಹೋರಿಗಳಲ್ಲಿ ಬೀಜ ಒಡೆದ ನಂತರ ಆ ಭಾಗಕ್ಕೆ ಸಾಸುವೆ ಎಣ್ಣೆಯಲ್ಲಿ ಅರಸಿಣ ಪುಡಿಯನ್ನು ಕಲಸಿ ಉಜ್ಜಲಾಗುತ್ತದೆ. ಅದು ಆ ಭಾಗದ ಉಷ್ಣತೆಯನ್ನು ಕಡಿಮೆ ಮಾಡುವುದರೊಂದಿಗೆ ಕ್ಷಯನಾಶಕವಾಗಿ ಕೆಲಸ ನಿರ್ವಹಿಸಿ ಗಾಯವನ್ನು ಬೇಗನೆ ವಾಸಿ ಮಾಡುತ್ತದೆಯಂತೆ.

3) ಗರ್ಭಧರಿಸಲು ಅಡಿಗೆ ಉಪ್ಪಿನ ಬಳಕೆ :

ಹಸುಗಳು ಗಬ್ಬಕ್ಕೆ ಬಂದಾಗ ಅಂಡಾಶಯದಿಂದ ತತ್ತಿಯು ಬಿಡುಗಡೆಯಾಗಲು ಅಡಿಗೆ ಉಪ್ಪನ್ನು ಬಳಸಲಾಗುತ್ತದೆ. ಕೃತಕ ಗರ್ಭದಾರಣೆಯ ನಂತರ ಮೂರು ವಾರಗಳವರೆಗೆ ಮಾತ್ರ ಉಪ್ಪನ್ನು ತಿನ್ನಿಸಬೇಕು. ತದನಂತರ ತಿನ್ನಿಸಿದರೆ ಗರ್ಭಪಾತವಾಗುವುದಂತೆ.

4) ಗಬ್ಬಕ್ಕೆ ಬರಲು ಪಾರಿವಾಳದ ಹಿಕ್ಕೆ ಉಪಕಾರಿ !

ಪಾರಿವಾಳದ ಹಿಕ್ಕೆಯನ್ನು ಪುಡಿಮಾಡಿ ಹಸುಗಳಿಗೆ ತಿನ್ನಿಸುವುದರಿಂದ ಬಂಜೆ ಹಸುಗಳೂ ಕೂಡ ಕೆಲ ತಿಂಗಳುಗಳ ನಂತರ ಗಬ್ಬಕ್ಕೆ ಬರುತ್ತವಂತೆ.

5) ಕರುಗಳ ಕರುಳಿನಲ್ಲಿಯ ಪರಾವಲಂಬಿಗಳ ನಿಯಂತ್ರಣ :

ಕಡಿಮೆ ಪ್ರಮಾಣದ ಮೊಸರು ಅಥವಾ ಮಜ್ಜಿಗೆಯನ್ನು ರಾತ್ರಿ ಪೂರ್ತಿ ತಾಮ್ರದ ಪಾತ್ರೆಯಲ್ಲಿಡಬೇಕು. ಮೊಸರು, ಮಜ್ಜಿಗೆ ಬೆಳಗಾಗುವ ಹೊತ್ತಿಗೆ ಹಸಿರು -ನೀಲಿ ಮಿಶ್ರಿತ ಬಣ್ಣಕ್ಕೆ ತಿರುಗಿದಾಗ ಸ್ವಲ್ಪ ನೀರನ್ನು ಸೇರಿಸಿ ಕುಡಿಸುವುದರಿಂದ ಕರುಗಳ ಕರುಳಿನಲ್ಲಿಯ ಪರಾವಲಂಬಿಗಳು ಮಾರನೇ ದಿನ ಸಗಣಿಯಲ್ಲಿ ಹೊರಬೀಳುತ್ತವಂತೆ.

(೧೨ನೇ ಪುಟದಿಂದ)

ಇಂತಹ ಪರೀಕ್ಷೆಗಳ ಆಧಾರದ ಮೇಲೆ ಹಸುಗಳ ಗರ್ಭಧಾರಣೆಯನ್ನು ನಿರ್ಧರಿಸುವ ಸರಳ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಬಹುದಾಗಿದೆ ಎಂದು ಡಾ. ವೀಣಾ ಅಭಿಪ್ರಾಯ ಪಡುತ್ತಾರೆ. ಇಂತಹ ಪದ್ಧತಿಗಳು ರೈತರ ಕೈಗೇ ಎಟುಕುವಂತಾದಲ್ಲಿ ಅದರಿಂದಾಗುವ ಅನುಕೂಲ ಅಪಾರವಾಗಿರುತ್ತದೆ.

(ಹೆಚ್ಚಿನ ವಿವರಗಳಿಗೆ : Current Science, ಡಿಸೆಂಬರ್ 1993ರ ಪತ್ರಿಕೆ ಮತ್ತು Jorgen Thorwaldರ Science and Secrets of Early Medicine ಪುಸ್ತಕ ನೋಡಿರಿ.)

ವಾಡಿಕೆ

ಬೀಜ ಬಿತ್ತುವದಕ್ಕೆ ಯೋಗ್ಯವಾದ ಕಾಲಗಳು

ನಮ್ಮ ರೈತರು ಬೀಜಬಿತ್ತನೆಗೆ ಕಾಲ, ವಾರ, ನಕ್ಷತ್ರ, ರಾಶಿ ಇತ್ಯಾದಿಗಳನ್ನು ಪರಿಗಣಿಸಿ, ಅವುಗಳಲ್ಲಿ ಕೆಲವು ಬಹಳ ಶುಭದಾಯಕ ಮತ್ತು ಬೀಜ ಸರಿಯಾಗಿ ಮೊಳೆತು, ಫಸಲು ಸಂವೃದ್ಧಿಯಾಗುತ್ತದೆ ಎಂಬುದು ವಾಡಿಕೆ. ಅವುಗಳಲ್ಲಿ ಹಲವನ್ನು ಈ ಕೆಳಗೆ ಕೊಡಲಾಗಿದೆ.

1. ತಿಥಿಗಳು

ದ್ವಿತೀಯ, ತೃತೀಯ,ಪಂಚಮಿ, ಸಪ್ತಮಿ, ದಶಮಿ, ದ್ವಾದಶಿ,ತ್ರಯೋದಶಿ,

2.ಮಳೆ, ನಕ್ಷತ್ರಗಳು,

ಅಶ್ವಿನಿ, ರೋಹಿಣಿ, ಮೃಗಶಿರ, ಪುನರ್ವಸು, ಪುಷ್ಯ, ಮಖ, ಉತ್ತರ, ಹಸ್ತ, ಸ್ವಾತಿ, ವಿಶಾಖ, ಅನುರಾಧ, ಮೂಲ, ಶ್ರಾವಣ, ಧನಿಷ್ಠ, ಶತಭಿಷ, ರೇವತಿ,

3.ವಾರಗಳು

ಸೋಮ, ಬುಧ, ಗುರು, ಶುಕ್ರವಾರಗಳು,

4. ರಾಶಿಗಳು

ವೃಷಭ, ಮಿಥುನ, ಕಟಕ, ಸಿಂಹ, ತುಲಾ, ಮಕರ, ಕುಂಭ,ಮೀನ,

5. ಇನ್ನು ರಾಹುಕಾಲಗಳಲ್ಲಿ ರೈತರು ಯಾವುದೇ ರೀತಿಯ ಕೃಷಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದಿಲ್ಲ, ಗುಳಿಕಕಾಲ ಈ ದೃಷ್ಟಿಯಿಂದ ಅತ್ಯಂತ ಪ್ರಶಸ್ತ ಎಂಬುದು ರೈತರೆಲ್ಲರ ಬಲವಾದ ನಂಬಿಕೆ.

(ಕೃಪೆ : ಕರ್ನಾಟಕ ರಾಜ್ಯ ಕೃಷಿ ಮಂಡಳಿಯ ಕೈಪಿಡಿ)

ಮಳೆ ನಕ್ಷತ್ರಗಳು ಮತ್ತು ಅವುಗಳ ಅವಧಿ

ನಕ್ಷತ್ರಗಳ ಹೆಸರು		ಪ್ರಾರಂಭ	ಸಮಯ
1.	ಉಷಾ	ಜನವರಿ 11 ರಿಂದ	ಮ. 3.29
2.	ಶ್ರಾವಣ	ಜನವರಿ 24 ರಿಂದ	ಮ. 4.32
3.	ಧನಿಷ್ಠ	ಫೆಬ್ರವರಿ 6 ರಿಂದ	ಸಂ. 6.38
4.	ಶತಭಿಷ	ಫೆಬ್ರವರಿ 19 ರಿಂದ	ರಾ. 10.7
5.	ಪೂರ್ವಾಷಾಢ	ಮಾರ್ಚಿ 4 ರಿಂದ	ಬೆ. 3.30
6.	ಉತ್ತರಾಷಾಢ	ಮಾರ್ಚಿ 18 ರಿಂದ	ಬೆ. 11.18
7.	ರೇವತಿ	ಮಾರ್ಚಿ 31 ರಿಂದ	ರಾ. 9.57
8.	ಅಶ್ವಿನಿ	ಏಪ್ರಿಲ್ 14ರಿಂದ	ಬೆ. 10.38
9.	ಭರಣಿ	ಏಪ್ರಿಲ್28 ರಿಂದ	ಬೆ. 2.28
10.	ಕೃತ್ತಿಕ	ಮೇ 11 ರಿಂದ	ರಾ. 9.17
11.	ರೋಹಿಣಿ	ಮೇ 25 ರಿಂದ	ಸಂ. 6.25
12.	ಮೃಗಶಿರಾ	ಜೂನ್ 8 ರಿಂದ	ಸಂ. 5.43
13.	ಆದ್ರಾ	ಜೂನ್ 22 ರಿಂದ	ಸಂ. 6.36
14.	ಪುನರ್ವಸು	ಜುಲೈ 6 ರಿಂದ	ರಾ. 8.13
15.	ಪುಷ್ಯ	ಜುಲೈ 20 ರಿಂದ	ರಾ. 9.51
16.	ಆಶ್ಲೇಷ	ಆಗಸ್ಟ್ 3 ರಿಂದ	ರಾ. 10.33
17.	ಮಘಾ	ಆಗಸ್ಟ್ 17 ರಿಂದ	ರಾ. 9.30
18.	ಪಬ್ಬ	ಆಗಸ್ಟ್ 31 ರಿಂದ	ಸಂ. 6.14
19.	ಉತ್ತರಾ	ಸೆಪ್ಟಂಬರ್ 14 ರಿಂದ	ರಾ. 11.23
20.	ಹಸ್ತ	ಸೆಪ್ಟೆಂಬರ್ 28 ರಿಂದ	ಬೆ. 7.47
21.	ಚಿತ್ತ	ಅಕ್ಟೋಬರ್ 11ರಿಂದ	ರಾ. 9.25
22.	ಸ್ವಾತಿ	ಅಕ್ಟೋಬರ್ 25ರಿಂದ	ರಾ. 2.20
23.	ವಿಶಾಖ	ನವೆಂಬರ್ 7ರಿಂದ	ಬೆ. 9.43
24.	ಅನುರಾಧ	ನವೆಂಬರ್ 20ರಿಂದ	ಮ. 2.52
25.	ಜೇಷ್ಠ	ಡಿಸೆಂಬರ್ 3ರಿಂದ	ಸಂ. 6.10
26.	ಮೂಲ	ಡಿಸೆಂಬರ್ 16ರಿಂದ	ರಾ. 8.26
27.	ಪುಷ್ಯಾ	ಡಿಸೆಂಬರ್ 29ರಿಂದ	ರಾ. 9.02


'ಹಿತ್ತಲಗಿಡದ' ಮೊದಲ ಸಭೆ

13 - 02 - 94 ರಂದು ಬೆಂಗಳೂರಿನ ಹೆಬ್ಬಾಳದ ಹಳೆ ಕೃಷಿ ಕಾಲೇಜಿನಲ್ಲಿ ಕನ್ನಡದಲ್ಲಿ 'ಹನಿ ಬೀ' ತರಹದ ಪತ್ರಿಕೆ ಒಂದರ ಅಗತ್ಯದ ಕುರಿತು ಚರ್ಚಿಸಲು ಪ್ರೊ. ಅನಿಲ್ ಗುಪ್ತ ನೇತೃತ್ವದಲ್ಲಿ ಮೊದಲ ಸಭೆ ಸೇರಲಾಗಿತ್ತು. ವಿವರವಾದ ಚರ್ಚೆಯ ನಂತರ ಇಂತಹ ಪತ್ರಿಕೆಯ ರೂಪರೇಶೆಗಳು, ಸಂಪಾದಕೀಯ ಬಳಗ ಇತ್ಯಾದಿಗಳ ಕಡೆಗೆ ಗಮನ ಹರಿಸಲಾಯಿತು. ಈ ಸಭೆಯಲ್ಲಿ ಭಾಗವಹಿಸಿ, ಹಿತ್ತಲಗಿಡದ ಯಶಸ್ಸಿಗೆ ಶುಭ ಹಾರೈಸಿ, ಈ ಬಗ್ಗೆ ತಮ್ಮ ಸಲಹೆ, ಸಹಕಾರವನ್ನು ಸದಾ ನೀಡುವುದಾಗಿ ಈ ಕೆಳಗಿನ ಗಣ್ಯರು ಆಶ್ವಾಸನೆ ನೀಡಿದರು.

1) 'ಶ್ರೀ' ಪಡ್ರೆ, ಸಂಪಾದಕರು, ಅಡಿಕೆ ಪತ್ರಿಕೆ, ಪುತ್ತೂರು
2) ಈಶ್ವರ ದೈತೋಟ, ಸಂಪಾದಕರು, ಉದಯವಾಣಿ, ಬೆಂಗಳೂರು
3) ಡಾ. ಬಿ. ಆರ್. ಹೆಗ್ಡೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
4) ಪ್ರೊ. ಕೆ. ಜಿ. ಮಲ್ಲಿಕಾರ್ಜುನಯ್ಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
5) ಪ್ರೊ. ಕೆ. ಎನ್. ಆರ್. ಶಾಸ್ತ್ರಿ, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ
6) ಡಾ. ಎಚ್. ವಿ. ನಂಜಪ್ಪ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
7) ಶ್ರೀಮತಿ ಪದ್ಮ ವಿ. ಉಪಾಧ್ಯಾಯ, ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ
8) ಡಾ. ಬಿ. ವಿ. ಚನ್ನಪ್ಪರೆಡ್ಡಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
9) ಎನ್. ನಾಗರಾಜ್, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
10) ಆರ್. ಎಲ್. ಸಪ್ರ, ಹಿರಿಯ ವಿಜ್ಞಾನಿ, ಎನ್.ಬಿ.ಪಿ.ಜಿ.ಆರ್., ನವದೆಹಲಿ
11) ಬಿ. ಜಿ. ಸತ್ಯನಾರಾಯಣ, ಇಕ್ರಾ, ಬೆಂಗಳೂರು
12) ಡಾ. ಕೆ. ಐ. ವಾಸು, ರಾಷ್ಟ್ರೀಯ ಸಂಚಾಲಕರು, ಸ್ವದೇಶಿ ಸೈನ್ಸ್ ಆಂಧೋಳನ, ಬೆಂಗಳೂರು
13) ಎಸ್. ವಿ. ಸುದರ್ಶನ್, ಕೆನರಾ ಬ್ಯಾಂಕ್, ಬೆಂಗಳೂರು
14) ಡಾ. ಎಂ. ಜಿ. ಚಂದ್ರಕಾಂತ್, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
15) ಡಾ. ಎಸ್. ಸೂರ್ಯಪ್ರಕಾಶ್, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
16) ಎಸ್. ನಾರಾಯಣ್ ಶ್ರೀ ಕೊಂಗಾಡಿಯಪ್ಪ ಕಾಲೇಜು, ದೊಡ್ಡಬಳ್ಳಾಪುರ
17) ಎಮ್. ಜಿ. ಚಂದ್ರಶೇಖರಯ್ಯ, ಶ್ರೀ ಕೊಂಗಾಡಿಯಪ್ಪ ಕಾಲೇಜು, ದೊಡ್ಡಬಳ್ಳಾಪುರ
18) ಡಾ. ಜಯಕುಮಾರ್, ಪಶು ವೈದ್ಯಕೀಯ ಕಾಲೇಜು, ಬೆಂಗಳೂರು
19) ಜಿ. ಹರೀರಾಮ ಮೂರ್ತಿ, ಪ್ರಾರಂಭ, ಬೆಂಗಳೂರು
20) ಡಾ. ಟಿ. ಎಚ್. ಎಂ. ಜಗದೀಶ್
21) ಸಿದ್ಧಾರ್ಥ, ಬೆಂಗಳೂರು

ಪತ್ರದ ಮೂಲಕ ಹಿತ್ತಲಗಿಡಕ್ಕೆ ಶುಭ ಹಾರೈಸಿದವರು

1) ಎನ್. ಜೆ. ರೊಸರಿಯೊ, ಬಾಲಕಾರ್ಮಿಕರ ಬಗೆಗಿನ ಕಾಳಜಿ ಸಂಸ್ಥೆ, ಬೆಂಗಳೂರು
2) ಯು. ಎನ್. ರವಿಕುಮಾರ್, ಸುಯೋಗ್ಯ ಗ್ರಾಮೀಣ ತಂತ್ರಜ್ಞಾನ ಕೇಂದ್ರ, ಮೈಸೂರು
3) ಶಿವರಾಮ ಪೈಲೂರು, ಕ್ಷೇತ್ರ ಪ್ರಚಾರಕ ಅಧಿಕಾರಿಗಳು, ಮಂಗಳೂರು
4) ಜಿ. ಕೃಷ್ಣ ಪ್ರಸಾದ್, ಪರಿಸರ ಅಧ್ಯಯನ ಕೇಂದ್ರ, ಅಹ್ಮದಾಬಾದ್
5) ಎಸ್. ವಿಜಯಕುಮಾರ್, ಅಧ್ಯಾಪಕರು, ಗುಲ್ಬರ್ಗ
6) ನಾರಾಯಣ ರೆಡ್ಡಿ, ಪ್ರಗತಿಪರ ರೈತರು, ಸೋರ ಹುಣಸೆ
7) ಪುರುಷೋತ್ತಮರಾವ್, ಪ್ರಗತಿಪರ ರೈತರು, ತೀರ್ಥಹಳ್ಳಿ
8) ಗೋಪಾಲಕೃಷ್ಣನ್, ಸಂಪಾದಕರು, ನಿಮ್ಹಾನ್ಸ್, ಬೆಂಗಳೂರು



Printed at ILA Printers, Chamarajapet, Bangalore-18 Ph. : 623159

ಹಿತ್ತಲಗಿಡದ ಬಳಗಕ್ಕೆ ಸೇರಿ, ನೀವು ಏನು ಕೊಡುಗೆ ನೀಡಬಹುದು ?

1. ಕೃಷಿ ವಿದ್ಯಾರ್ಥಿಗಳು ಮತ್ತಿತರ ಗ್ರಾಮಾಂತರ ವಿದ್ಯಾರ್ಥಿಗಳು
   ರೈತ ಮೂಲದ ಅನುಶೋಧನೆ, ಅವರೇ ಅನುಸರಿಸುತ್ತಿರುವ ವಿಶಿಷ್ಟ ಆದರೆ ಅತ್ಯಂತ ಪರಿಣಾಮಕಾರಿ ಕೃಷಿ ವಿಧಾನ, ರೀತಿ ರಿವಾಜುಗಳನ್ನು ಗುರುತಿಸಿ, ಬರೆದು ಕಳಿಸುವುದು.
2. ಕೃಷಿ ವಿಜ್ಞಾನಿಗಳು ಮತ್ತಿತರ ವಿಜ್ಞಾನಿಗಳು
   ಹಿತ್ತಲಗಿಡ ದಾಖಲು ಮಾಡುವ ವಿಚಾರಗಳನ್ನು ಗಮನಿಸಿ, ವಿಶ್ಲೇಷಿಸಿ, ವೈಜ್ಞಾನಿಕ ಸಂಶೋಧನೆಗೆ ಒಳಪಡಿಸಿ ಮತ್ತಷ್ಟು ವ್ಯವಸ್ಥಿತಗೊಳಿಸುವುದರ ಮೂಲಕ ಜನಪರಗೊಳಿಸುವುದು.
3. ರೈತರು
   ಅ. ತಮ್ಮ ಮತ್ತು ಸುತ್ತಮುತ್ತಲಿನ ಅನ್ವೇಷಣೆ, ನಾಟಿ ಕೃಷಿ ಪದ್ಧತಿ, ತಂತ್ರ ಜ್ಞಾನ, ಆಚಾರ, ವಿಚಾರಗಳನ್ನು ಹಿತ್ತಲಗಿಡದ ಗಮನಕ್ಕೆ ತರುವುದು
   ಆ. ಹಿತ್ತಲಗಿಡದ ವಿಚಾರಗಳನ್ನು ಅಳವಡಿಸಿ, ಪರೀಕ್ಷಿಸಿ, ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳುವುದು.
4. ಇತರರು
   ಹಿತ್ತಲಗಿಡ ಮತ್ತು ರೈತ ಸಮುದಾಯದ ನಡುವೆ ಕೊಂಡಿ ಏರ್ಪಡಿಸಲು ಸಹಾಯವಾಗುವುದು.

ಹೀಗೆ ಹಿತ್ತಲಗಿಡದ ಬಳಗಕ್ಕೆ ಸೇರಿ, ಅದರ ವಿವಿಧ ಚಟುವಟಿಕೆಗಳಿಗೆ ಸಹಾಯ ಮಾಡುವ ರೀತಿ.

	ವಾರ್ಷಿಕ
ರೈತರು ಮತ್ತು ವಿದ್ಯಾರ್ಥಿಗಳು	೨೦ ರೂ.
ಇತರರು	೫೦ ರೂ.
ಸಂಸ್ಥೆಗಳು	೨೫೦ ರೂ.

ಹಿತ್ತಲಗಿಡ ರೈತ , ವಿಜ್ಞಾನಿ,
ವಿದ್ಯಾರ್ಥಿ, ಸ್ವಯಂಸೇವಾ ಸಂಸ್ಥೆ ಮತ್ತು
ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ತೆರೆದ ಅಂಚೆ

ಗೆ ______________________

____

____

____

ವಿಳಾಸ
ಟಿ.ಎಸ್. ಪ್ರಕಾಶ್ ಕಮ್ಮರಡಿ
ಸಂಪಾದಕರು ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾಲಯ ಹೆಬ್ಬಾಳ
ಬೆಂಗಳೂರು - 560024
ದೂರವಾಣಿ: 3331483, Ext : 8, (R) 8460459